Swabhimani Sahakari

Pages : 36 / 12₹


# ಸ್ವಾಭಿಮಾನಿ ಸಹಕಾರಿ


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 4
April - 2019




## ಲೋಕಸಭೆ ಚುನಾವಣೆ 2019 :
### ಏಪ್ರಿಲ್ 11ರಿಂದ ಮೇ 19ರವರೆಗೆ 7 ಹಂತಗಳಲ್ಲಿ ಮತದಾನ ನಡೆಯಲಿದೆ

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಿಗೆ
ಏಪ್ರಿಲ್ 18 ಮತ್ತು ಏಪ್ರಿಲ್ 23ರಂದು
ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ

## ಮತದಾನದಲ್ಲಿ ಭಾಗವಹಿಸಿ;
## ತಪ್ಪದೇ ನಿಮ್ಮ ಮತ ಚಲಾಯಿಸಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4604

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1220



ಏಪ್ರಿಲ್: 06



ಏಪ್ರಿಲ್: 13



ಏಪ್ರಿಲ್: 14



ಏಪ್ರಿಲ್: 17



ಏಪ್ರಿಲ್: 19

ಯುಗಾದಿ, ಶ್ರೀರಾಮ ನವಮಿ, ಡಾ. ಬಿ ಆರ್. ಅಂಬೇಡ್ಕರ್ ಜಯಂತಿ, ಮಹಾವೀರ ಜಯಂತಿ, ಗುಡ್ ಫ್ರೈಡೇ ಶುಭಾಷಯಗಳು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಸ್ನೇಹಿತರೆ ಈ ವರ್ಷದ ಪ್ರಾರಂಭದಲ್ಲಿಯೇ ನಮಗೆಲ್ಲ ಮಹತ್ವದ ಕರ್ತವ್ಯ ಹಾಗೂ ಜವಾಬ್ದಾರಿ ಬಂದು ಒದಗಿದೆ. ಲೋಕ ಸಭಾ ಚುನಾವಣೆ 2019 ರ ದಿನಾಂಕಗಳು ನಿಗದಿಯಾಗಿವೆ. ಕರ್ನಾಟಕದಲ್ಲಿ ಏಪ್ರಿಲ್ 18 ಮತ್ತು ಏಪ್ರಿಲ್ 23 ಚುನಾವಣೆಯ ದಿನಗಳು. ಕರ್ನಾಟಕದ 28 ಲೋಕಸಭಾ ಸ್ಥಾನಗಳಿಗೆ ಅಂದಾಜು 5 ಕೋಟಿ ಮತದಾರರು ಮತದಾನದ ಹಕ್ಕನ್ನು ಚಲಾಯಿಸುವ ಮೂಲಕ ತಮ್ಮ ಪ್ರಜಾಸತ್ತಾತ್ಮಕ ಕರ್ತವ್ಯವನ್ನು ನಿರ್ವಹಿಸಬೇಕಿದೆ.

# ಮತದಾರರಲ್ಲಿ ಮತದಾನದ ಜಾಗೃತಿ :

## ಕರ್ನಾಟಕದ 5 ಕೋಟಿ ಮತದಾರರಲ್ಲಿ 2 ಕೋಟಿಗಿಂತಲೂ ಹೆಚ್ಚು ಸಹಕಾರಿ ಸಂಸ್ಥೆಗಳ ಸದಸ್ಯರು ನಿರ್ಣಾಯಕ ಮತದಾರರು ಸುಭದ್ರ ಸರಕಾರ ಹಾಗೂ ಸಮರ್ಥ ನಾಯಕತ್ವದ ನಿರ್ಮಾಣದಲ್ಲಿ ಸಹಕಾರಿಗಳ ಹಾಗೂ ಸಹಕಾರ ಸಂಘಗಳ ಪಾತ್ರ ಮಹತ್ವದ್ದು

**ಆತ್ಮೀಯ ಸಹಕಾರಿ ಬಂಧುಗಳೇ,**

ತಮ್ಮೆಲ್ಲರಿಗೂ ನೂತನ "ವಿಕಾರಿ" ಸಂವತ್ಸರದ, ಯುಗಾದಿ ಹಬ್ಬದ, ಶ್ರೀ ರಾಮನವಮಿಯ, ಶುಭ ಶುಕ್ರವಾರದ ಹಾಗೂ ಹೊಸ ಆರ್ಥಿಕ ವರ್ಷದ ಹಾರ್ದಿಕ ಶುಭಾಶಯಗಳು. ನೂತನ ಸಂವತ್ಸರದಲ್ಲಿ ಯುಗಾದಿಯನ್ನು ನವ ಉತ್ಸಾಹ ಹಾಗೂ ಹರುಷದೊಂದಿಗೆ ಶ್ರೀ ರಾಮ ಜನ್ಮೋತ್ಸವವನ್ನು ವಿಜ್ರಂಭಣೆಯಿಂದ ಆಚರಿಸಿ ಹೊಸ ಆರ್ಥಿಕ ವರ್ಷವನ್ನು ಸ್ವಾಗತಿಸೋಣ. ಸವಾಲುಗಳನ್ನು ಎದುರಿಸಿ ಅವಕಾಶಗಳನ್ನಾಗಿ ಪರಿವರ್ತಿಸುವ ಶಕ್ತಿಯನ್ನು ಆ ದೇವರು ನಮಗೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತ ಎಲ್ಲರೂ ಸೇರಿ ಪ್ರಗತಿಯತ್ತ ಹೆಜ್ಜೆ ಹಾಕುವ ಪರ್ವಕಾಲವನ್ನು ಸದುಪಯೋಗ ಮಾಡಿಕೊಳ್ಳೋಣ. "ಸರ್ವ ಜನ: ಸುಖಿನೋ ಭವಂತು".

ಸ್ನೇಹಿತರೆ ಈ ವರ್ಷದ ಪ್ರಾರಂಭದಲ್ಲಿಯೇ ನಮಗೆಲ್ಲ ಮಹತ್ವದ ಕರ್ತವ್ಯ ಹಾಗೂ ಜವಾಬ್ದಾರಿ ಬಂದು ಒದಗಿದೆ. ಲೋಕ ಸಭಾ ಚುನಾವಣೆ 2019 ರ ದಿನಾಂಕಗಳು ನಿಗದಿಯಾಗಿವೆ. ಕರ್ನಾಟಕದಲ್ಲಿ ಏಪ್ರಿಲ್ 18 ಮತ್ತು ಏಪ್ರಿಲ್ 23 ಚುನಾವಣೆಯ ದಿನಗಳು. ಕರ್ನಾಟಕದ 28 ಲೋಕಸಭಾ ಸ್ಥಾನಗಳಿಗೆ ಅಂದಾಜು 5 ಕೋಟಿ ಮತದಾರರು ಮತದಾನದ ಹಕ್ಕನ್ನು ಚಲಾಯಿಸುವ ಮೂಲಕ ತಮ್ಮ ಪ್ರಜಾಸತ್ತಾತ್ಮಕ ಕರ್ತವ್ಯವನ್ನು ನಿರ್ವಹಿಸಬೇಕಿದೆ. ಸಹಕಾರಿ ಸಂಸ್ಥೆಗಳು ಕೇವಲ ಆರ್ಥಿಕ ಸಂಘಟನೆಗಳಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಭದ್ರಗೊಳಿಸುವತ್ತ ತಮ್ಮ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಬಲ್ಲವು ಎಂಬುದನ್ನು ಪುನರ್ ಧೃಡಪಡಿಸಬೇಕಿದೆ. **"Co-operatives can Build a Better Nation"** ಎಂಬ ವಿಶ್ವಸಂಸ್ಥೆಯ ಹೇಳಿಕೆಯನ್ನು ಧೃಡಪಡಿಸುವ ಪರ್ವಕಾಲ ಇದಾಗಿದೆ.

ದಾನಗಳಲ್ಲಿ ಮತದಾನ ಮಹತ್ವದ್ದು ಈ ಮತದ ಮೇಲೆ ದೇಶದ ಆರ್ಥಿಕ, ಸಾಮಾಜಿಕ ಹಾಗೂ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ದೇಶದಲ್ಲಿ ಶಾಂತಿ, ಸುವ್ಯವಸ್ಥೆ ನೆಮ್ಮದಿಯ ಜೀವನ, ಆಂತರಿಕ ಹಾಗೂ ಬಾಹ್ಯ ಭದ್ರತೆಯು ನಿರ್ಧಾರವಾಗುತ್ತದೆ. ಸುಭದ್ರ ಸರಕಾರ ಹಾಗೂ ಸಮರ್ಥ ನಾಯಕತ್ವದ ನಿರ್ಮಾಣದ ಸಾಧ್ಯವಾಗುತ್ತದೆ. ಇದು ಅಗತ್ಯವೂ ಇದೆ.

ರಾಜ್ಯದ 46000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳ (1959 ಹಾಗೂ 1997 ರ ಕಾಯ್ದೆ ಸೇರಿ) ಅಧ್ಯಕ್ಷರು, ಉಪಾಧ್ಯಕ್ಷರುಗಳು, ಆಡಳಿತ ಮಂಡಳಿಯ ಸದಸ್ಯರು, ಅಧಿಕಾರಿ ವರ್ಗದವರು ಮತ್ತು 2 ಕೋಟಿಗಿಂತಲೂ ಹೆಚ್ಚಿನ ಸದಸ್ಯರು ತಮ್ಮ ಕುಟುಂಬವರ್ಗದವರೊಂದಿಗೆ ಮತಗಟ್ಟೆಗೆ ಹೋಗಿ ತಪ್ಪದೆ ಮತದಾನ ಮಾಡುವಂತೆ ಕ್ರಮವಿಡುವ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಿದೆ. ಅವರಲ್ಲಿ ಮತದಾನದ ಜಾಗೃತಿಯನ್ನು ಮೂಡಿಸಬೇಕಿದೆ. ಮತದಾನದ ದಿನದಂದು ಯಾವುದೇ ಕೆಲಸ ಕಾರ್ಯಗಳಿದ್ದಾಗ್ಯೂ ಪ್ರಥಮ ಆದ್ಯತೆಯನ್ನು ಮತದಾನ ನೀಡುವಂತೆ ಅಗತ್ಯವಾಗಿ ಮತದಾನ ಮಾಡಬೇಕೆಂಬ ಜಾಗೃತಿಯನ್ನು ಮೂಡಿಸುವಲ್ಲಿ ಸಹಕಾರಿ ಸಂಸ್ಥೆಗಳು ವಿಶೇಷವಾಗಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಮತದಾನ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳುವ ಮೂಲಕ ಈ ಪವಿತ್ರ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಬೇಕೆಂದು ವಿನಂತಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್: souharda@souharda.coop
swabhimani@Souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಜ್ಞಾನ ಜ್ಯೋತಿ ................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .. .................................................. 5-18
ಸುತ್ತೋಲೆ........................................ 19
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ................................................ 20-28
ಲೇಖನ...................................... 29-34
ಆರ್‌ಬಿ.ಐ. ನ್ಯೂಸ್...................... 35-36

# ಸಂಪಾದಕೀಯ

## ನೂತನ ಆರ್ಥಿಕ ವರ್ಷ : ಸೌಹಾರ್ದ ಸಹಕಾರಿ ಕ್ಷೇತ್ರ ಗುಣಾತ್ಮಕವಾಗಿ ಬೆಳೆಸುವುದಕ್ಕೆ ಕ್ರಮ ಅಗತ್ಯ

ರಾಜ್ಯದ ಸೌಹಾರ್ದ ಸಹಕಾರಿಗಳ 2018-19ನೇ ಸಾಲಿನ ಕಾರ್ಯಚಟುವಟಿಕೆಗಳ ಪ್ರಗತಿಯ ಪಕ್ಷಿನೋಟವನ್ನು ಗಮನಿಸಿದಾಗ ಪ್ರಗತಿ ಸಮಾಧಾನಕರವಾಗಿದೆಯಾದರೂ ಸಹಕಾರಿಗಳು ಸಂಪೂರ್ಣವಾಗಿ ಸಂತೋಷ ಪಡುವಂತಿಲ್ಲ. ಅನೇಕ ಸವಾಲುಗಳುಗಳನ್ನು ಎದುರಿಸಿಯೂ ಸೌಹಾರ್ದ ಸಹಕಾರಿಗಳು ಸಮಾಧಾನಕರವಾಗಿ ಪ್ರಗತಿ ಸಾಧಿಸಿವೆ ಎಂಬುದು ಸ್ವಾಗತಾರ್ಹ.

ನೂತನ ಆರ್ಥಿಕ ವರ್ಷ 2019-20 ಪ್ರಾರಂಭವಾಗಿದೆ. ಈ ವರ್ಷದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ನಮ್ಮ ಕ್ರಿಯಾಯೋಜನೆಯ ಅನುಷ್ಠಾನ ಚುರುಕುಗೊಳಿಸಬೇಕಾದ ಅವಶ್ಯಕತೆ ಇದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು. ಸಹಕಾರಿಗಳಲ್ಲಿ ಹೆಚ್ಚಿನ ಸದಸ್ಯತ್ವ, ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳು, ಸಂಪನ್ಮೂಲಗಳ ಕ್ರೂಢೀಕರಣದಲ್ಲಿ ಹೆಚ್ಚಳ, ಗುಣಮಟ್ಟದ ಹೂಡಿಕೆ, ವಿವಿಧ ರೀತಿಯ ಸಾಲಗಳ ನೀಡಿಕೆಯಲ್ಲಿ ಹೆಚ್ಚಳ, ಹೆಚ್ಚಿಸಬೇಕಾದ ಸಾಲ ವಸೂಲಾತಿ ಪ್ರಮಾಣ, ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ಹೆಚ್ಚಳ, ಅನೇಕ ಹೊಸ ಯೋಜನೆಗಳಿಗೆ ಚಾಲನೆ ಹಾಗೂ ಪರಿಣಾಮಕಾರಿ ದಕ್ಷತೆಯ ನಿರ್ವಹಣೆ, ಸಹಕಾರಿಗೆ ಹೊಸ ಕಟ್ಟಡ, ಹೊಸ ನಿವೇಶನ, ಹೊಸ ಶಾಖೆಗಳ ಪ್ರಾರಂಭ ಹಾಗೂ ಬೇರೆ ಸಹಕಾರಿ ಸಂಸ್ಥೆಗಳ ಜೊತೆಗೆ ಉತ್ತಮ ಬಾಂಧವ್ಯ ಬೆಳಸಿಕೊಂಡು ಸಹಕಾರಿಯನ್ನು ಉತ್ತಮ ಆರ್ಥಿಕ ಸಂಘಟನೆಯಾಗಿ ಕಾರ್ಯನಿರ್ವಹಿಸುವುದರ ಜೊತೆಗೆ "ಹಣಕಾಸಿನ ಹಾಗೂ ಸೌಲಭ್ಯಗಳ ಶಕ್ತಿ ಕೇಂದ್ರ" ದಂತೆ ಕಾರ್ಯನಿರ್ವಹಿಸುವುದು ಅಗತ್ಯ. ಸಹಕಾರಿಯ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ಸದಸ್ಯರೊಡನೆ ನಿಕಟ ಸಂಪರ್ಕವನ್ನು ಹೊಂದುವುದು ಅವರ ಬೇಡಿಕೆಗಳ ಬಗ್ಗೆ ಚಿಂತನೆ ಮಾಡುವುದು ಕ್ರಿಯಾಯೋಜನೆ ರೂಪಿಸುವುದು, ಅನುಷ್ಠಾನಕ್ಕೆ ತರುವುದು ಸಹಕಾರಿಯ ಅಭಿವೃದ್ಧಿಗೆ ಪೂರಕವಾಗುತ್ತದೆ. ಇದರ ಜೊತೆಗೆ ಸರಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಗಮನ ಸೆಳೆಯುವಂತಹ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಅವರುಗಳ ಸಲಹೆಗಳನ್ನು ಮಾರ್ಗದರ್ಶನವನ್ನು ಪಡೆಯುವುದರಿಂದ ಸೌಹಾರ್ದ ಸಹಕಾರಿಗಳು ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯ.

ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರಿಗೆ, ಸದಸ್ಯರಿಗೆ ಹಾಗೂ ಸಿಬ್ಬಂದಿಯವರಿಗೆ ಈ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಿಸುವ ಮತ್ತು ಅವರನ್ನು ಜ್ಞಾನದ ಮೂಲಕ ಬಲಪಡಿಸುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸಾರ್ವಜನಿಕರಲ್ಲಿ ಸೌಹಾರ್ದ ಸಹಕಾರಿಗಳ ಅಸ್ತಿತ್ವದ ಬಗ್ಗೆ ಮಾಹಿತಿ ನೀಡುವ ಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ಸಹಕಾರಿಗಳು ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿಯೂ ಬೆಳೆಯುವುದು ಇಂದಿನ ಅವಶ್ಯಕತೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ.



# ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಪರಿಶ್ರಮದಿಂದ ಮಾತ್ರ ಫಲವೇ ಹೊರತು ಪಲಾಯನದಿಂದಲ್ಲ"

ದುಷ್ಟಶಿಕ್ಷಣೆ, ಶಿಷ್ಟ ರಕ್ಷಣೆ ಹಾಗೂ ಧರ್ಮಸಂಸ್ಥಾಪನೆ ಉದ್ದೇಶಗಳನ್ನು ಹೊಂದಿದ್ದ ಗೀತಾಚಾರ್ಯ ಶ್ರೀಕೃಷ್ಣನು ಶಿಷ್ಯನಾದ ಅರ್ಜುನನಿಗೆ ಫಲಾಪೇಕ್ಷೆಯನ್ನು ನಿರೀಕ್ಷಿಸದೇ, ಹೃದಯ ದೌರ್ಬಲ್ಯಕ್ಕೊಳಗಾಗದೇ, ಧೈರ್ಯೋತ್ಸಾಹಗಳಿಂದ ಸಮರವನ್ನೆದುರಿಸಲು ನಿರ್ದೇಶನ ನೀಡುತ್ತಾ, ನಿಷ್ಕಾಮ ಕರ್ಮದ ಮಹತ್ವನ್ನು ವರ್ಣಿಸಿದ್ದಾನೆ. ಸೋಲು ಗೆಲುವುಗಳಿಗೆ ಹೆದರದೇ, ಅಂಜದೇ ಯುದ್ಧಗೈದಿದ್ದಾದರೆ, ತನ್ನ ಬೆಂಬಲದಿಂದ ಗೆಲುವು ನಿಶ್ಚಿತವೆಂಬ ಭರವಸೆಯನ್ನು ಸಹ ನೀಡುತ್ತಾನೆ. ಆದರೆ ಇಂದಿನ ದಿನಮಾನದವರಾದ ನಾವುಗಳು ಪರಿಶ್ರಮವಿಲ್ಲದೇ ಫಲ ಬರಬೇಕು, ಶ್ರಮವಿರದೇ ಲಾಭಬೇಕೆಂಬ ನಮ್ಮ ಜೀವನ ಸುಖವಾಗಿರಬೇಕೆಂಬ ಹೆಬ್ಬಯಕೆ ನಮ್ಮದು. ನಾವೆಷ್ಟು ಸುಖಾಭಿಲಾಷಿಗಳೆಂಬುದರ ಉದಾಹರಣೆ ನೀಡುತ್ತಾ, ಓರ್ವ ಉಪನ್ಯಾಸಕರು "ಭಾರತರತ್ನ ಪ್ರಶಸ್ತಿ ಈ ಸಾರಿ ನಿಮಗೆ ದಕ್ಕಿದೆ" ಎಂದೇನಾದರೂ ಸುದ್ದಿ ಕೊಟ್ಟರೆ, "ನಾನು ಅದಕ್ಕೆ ಅರ್ಹನಲ್ಲ, ಅಂಥಹದ್ದೇನನ್ನೂ ಸಾಧಿಸಿಲ್ಲ" ಎನ್ನುವವರು ತೀರ ವಿರಳ. ಬದಲಾಗಿ ಕೊರಳು ಕೊಟ್ಟು ಹಾರ, ತುರಾಯಿ, ಪ್ರಶಸ್ತಿ, ಪದಕಗಳನ್ನರಸುವವರೇ ಹೆಚ್ಚೆನ್ನುತ್ತಾರೆ. ಬಹು ಮುಖ್ಯವಾದದ್ದೊಂದನ್ನು ಪಡೆಯಲು ಪರಿಶ್ರಮ, ತ್ಯಾಗ, ಬಿಡದ ಛಲಗಳು ನಿಜವಾಗಿ ಅಗತ್ಯ ಅಪವರ್ತ್ಯಗಳು. ಇಂದಿಗೆ ನಮ್ಮಲ್ಲಿ ಮನೆ ಮಾಡಿರುವ ಜಾಡ್ಯ, ನಿರಾಸೆ, ಪರಾವಲಂಬಿತನ, ಸಾಹಸರಹಿತತೆ, ಜೀವನವನ್ನು ಎದುರಿಸಲು ಒದಗಿ ಬರುತ್ತಿರುವ ಹೆದರಿಕೆಗಳನ್ನು ಕಂಡ ಡಿ.ವಿ.ಜಿ.ಯವರು ಜೀವನವೊಂದು ಯುದ್ಧವೆಂದೂ, ಅದರಲ್ಲಿ ನಾವು ಸೆಣಸಾಡಬೇಕಾದ ಸೈನಿಕರು, ವಿಧಿಯೇ ಎದುರಾಳಿ ಎಂದೂ ಇದನ್ನು ಎದುರಿಸುವ ಬದಲು ಅಂಜಿ ಓಡಿದೊಡೆಯೂ ಅಂಥಹವನು ವಿಧಿಯ ಬಾಯಿಗೆ ಆಹಾರವಾಗಿಯೇ ಆಗುತ್ತಾನೆಂದೂ ಇದರ ಶಾಶ್ವತತೆಯನ್ನರಿತು ಎದೆಯನ್ನು ಉಕ್ಕಿನಂತೆ ಗಟ್ಟಿಯಾಗಿಸಿ ಸೆಣಸಿದೊಡೆ ವಿಧಿಯೇ ನಿನ್ನನ್ನು ಮೆಚ್ಚಿ "ಶಹಬ್ಬಾಸ್" ಎಂದು ನಿನಗೊಲಿದು ಮನದಾಳದ ಬೇಡಿಕೆಗಳನ್ನು ಈಡೇರಿಸುತ್ತಾನೆಂಬರ್ಥದ ಬದುಕಿನ ಸ್ವಾರಸ್ಯಕರ ಪದ್ಯವನ್ನು ಈ ಕೆಳಗಿನಂತೆ ಜನತೆಗಿತ್ತಿದ್ದಾರೆ.

"ಬದುಕೊಂದು ಕದನವೆಂದಂಜಿ ಬಿಟ್ಟೋಡುವನು ।
ಬಿದಿಯ ಬಾಯಿಗೆ ಕವಳವಾಗದುಳಿಯುವನೆ?
ಎದೆಯನುಕ್ಕಾಗಿಸುತ ಮತಿಗದೆಯ ಪಿಡಿದು ನೀ ।
ನೆದುರು ನಿಲೆ ಬಿದಿಯೊಲಿವ" ॥ಮಂಕುತಿಮ್ಮ॥

ಜೀವನವೆಂಬ ಯುದ್ಧದಲ್ಲಿ ವಿಧಿಯೇ ನಮ್ಮ ಎದುರಾಳಿಯಾಗಿದ್ದು, ಜೀವನವನ್ನೆದುರಿಸುವ ಯತ್ನಗೈಯದೇ ಬಿಟ್ಟು ಫಲಾಯನ ಸೂತ್ರವನ್ನು ಅನುಸರಿಸಲು ಎತ್ತ ಓಡಿದರೂ ಬಿಡನವನು, ಸಾಹಸದಿಂದ ಬದುಕೆಂಬ ಸಮರವನ್ನು ಎದುರಿಸಿದಲ್ಲಿ "ಕೊಲ್ಲಿಪನೆ ಬೆಳೆಯಿಪನು" ಎಂಬಂತೆ ಪ್ರತಿಸ್ಪರ್ಧಿಯಾಗಿದ್ದ ವಿಧಿಯೇ ಪ್ರೋತ್ಸಾಹಕನಾಗಿ ನಿನ್ನೆದುರಿಗಿದ್ದ ತೊಡಕು, ತೊಂದರೆ, ಕಂಟಕ ಅಡಚಣೆಗಳನ್ನು ನಿವಾರಿಸಿ ನಿನ್ನ ಶ್ರೇಯಸ್ಸಿಗೆ ಅಭಯವನ್ನು ಪ್ರಧಾನಿಸುತ್ತಾನೆ. ಇಲ್ಲಿ ಕವಿಯವರು ಬದುಕಿನ ಶಾಶ್ವತತೆಯ ಹಾಗೂ ನಮ್ಮ ಮತ್ತು ವಿಧಿಯ ಮಧ್ಯೆ ಬರುವ ಕಷ್ಟನಷ್ಟಗಳು ಸೋಲು-ಗೆಲುವುಗಳು ಏರು-ತಗ್ಗುಗಳನ್ನು ಲೆಕ್ಕಿಸದೇ ಸರ್ವವನ್ನೂ ನಿಯಂತ್ರಿಸುವ ಸರ್ವವ್ಯಾಪಕ ವಿಶ್ವಶಕ್ತಿಯಾದ ಭಗವಂತನನ್ನೇ ನಂಬಿ ಕಾರ್ಯದಲ್ಲಿ ಮುಂದುವರಿದಲ್ಲಿ ಮನದಾಳದಲ್ಲಿ ನವನವೋನ್ವೇಷಣಾ ಶಾಲಿಯಾದ ಪುಟಿದೇಳುವ ಸಾಹಸವನ್ನು ಪತ್ತೆ ಹಚ್ಚಿ, ಗೆಲುವೆಂಬ ವರವನ್ನು ಖಂಡಿತ ದಯಪಾಲಿಸುತ್ತಾನೆನ್ನುತ್ತಾರೆ.

ಚಿಕ್ಕಂದಿನಲ್ಲಿ ಕೇಳಿದ ಒಂದು ಕಿರುಕಥೆ. ಒಂದೂರಿನಲ್ಲಿ ಸೋಮಾರಿಗಳ ಸಂಘವೊಂದು ಅಸ್ತಿತ್ವಕ್ಕೆ ಬಂದು ಅದರ ಅಧ್ಯಕ್ಷರ ಆಯ್ಕೆಯ ಸಂದರ್ಭ. ಅಧ್ಯಕ್ಷರು ಯಾರಾಗಬೇಕೆಂಬ ಬಗ್ಗೆ ತೀವ್ರ ಸ್ಪರ್ಧೆಯೇರ್ಪಟ್ಟಾಗ ದಾರಿಯಲ್ಲಿ ಬರುತ್ತಿದ್ದ ಓರ್ವ ಬುದ್ಧಿವಂತ ವ್ಯಕ್ತಿಯನ್ನು ಕಂಡು ಸೋಮಾರಿ ಸದಸ್ಯರೆಲ್ಲರೂ ತಮ್ಮ ಸಂಘದ ಅಧ್ಯಕ್ಷರ ಆಯ್ಕೆ ಮಾಡಿಕೊಡಬೇಕೆಂಬ ಕೋರಿಕೆಯನ್ನು ಸಲ್ಲಿಸಿದಾಗ, ಆತನು ಒಪ್ಪಿಕೊಂಡು, ಆಕಾಂಕ್ಷಿ ಅಭ್ಯರ್ಥಿಗಳಿಂದ ಸ್ಪರ್ಧೆಯ ಬಗ್ಗೆ ಕೈಎತ್ತಲು ಸೂಚಿಸಿದಾಗ ಎಲ್ಲರೂ ಕೈ ಎತ್ತಿ ಓರ್ವ ಮಾತ್ರ ಕೈ ಎತ್ತಿರಲಿಲ್ಲ. ಚಕಿತನಾದ ಬುದ್ಧಿವಂತ ವ್ಯಕ್ತಿಯು ಕೈ ಎತ್ತಿದ್ದವರನ್ನೆಲ್ಲ ಕೈ ಕೆಳಗಿಳಿಸಲು ತಿಳಿಸಿ, ಕೈ ಎತ್ತದೇ ಇದ್ದ ವ್ಯಕ್ತಿಯನ್ನು ಪ್ರಶ್ನಿಸುತ್ತಾ, ಎಲ್ಲರಿಗೂ ಅಧ್ಯಕ್ಷರಾಗುವ ಬಯಕೆಯಿದೆ. ಆ ಬಯಕೆ ನಿಮಗಿಲ್ಲವೇ? ಎಂದು ಪ್ರಶ್ನಿಸಿದಾಗ ಆತ "ನನಗೂ ತೀವ್ರವಾದ ಆಸೆಯಿದೆ. ಆದರೆ ಯಾವನು ಕೈ ಎತ್ತುತ್ತಾನೆಂಬ ಉದಾಸದಿಂದ ನಾನು ಕೈ ಎತ್ತಲಿಲ್ಲ" ಎಂದು ಉತ್ತರ ನೀಡುತ್ತಾನೆ. ಬುದ್ಧಿವಂತನಾದ ವ್ಯಕ್ತಿಯು ಸೋಮಾರಿಗಳ ಸಂಘಕ್ಕೆ ಅತಿಸೋಮಾರಿಯಾದವನೇ ಅಧ್ಯಕ್ಷ ಸ್ಥಾನಕ್ಕೆ ಅರ್ಹನೆಂದು ಆತನನ್ನೇ ಅಧ್ಯಕ್ಷನೆಂದು ಘೋಷಿಸಿದ. ಹೀಗೆ ಮುಗಿಯಿತು ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆ. ಪ್ರಯತ್ನಶೂನ್ಯರಾಗಿ ಫಲಾಕಾಂಕ್ಷಿಗಳಾಗಿರುವ ನಾವೇನೂ ಈ ಉದಾಹರಣೆಗಿಂತ ಭಿನ್ನರಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಈ ಚೇತೋಹಾರಿ ಸಂದೇಶವನ್ನು ನಮ್ಮ ಮನದಾಳಕ್ಕಿಳಿಸಿ ನಾವೆಲ್ಲರೂ ಒಬ್ಬ ಭಗವಂತನ ಮಕ್ಕಳು, ಸಹನೆ, ಧೈರ್ಯ, ಉತ್ಸಾಹಗಳಿಂದ ಒಂದು "ಸಹಕಾರ" ಕುಟುಂಬದವರಂತೆ ಬದುಕು ನಡೆಸಿದಲ್ಲಿ, ಈ ಭೂಉಪಗ್ರಹವನ್ನು ದೈವಾನುಗ್ರಹದ ಕೇಂದ್ರವಾಗಿಸಿ ಸಂಪದ್ಭಕ್ಷಯತೆ, ವಿದ್ಯಾವಸ್ತು ಸಮೃದ್ಧಿರಿತ್ಯಖಿಲ ಸಾಮಾಗ್ರಿಗಳ ಸಮೇತ ಜೀವಿಸಬಹುದೆಂಬುದೇ ಈ ಪದ್ಯದ ಸಾರಾಂಶ.

# ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಖಾಶಂಪೂರ ಹಾಗೂ ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಶ್ರೀ ಹರೀಶ್ ರವರ ಭೇಟಿ





**ಬೆಂಗಳೂರು:** ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಖಾಶಂಪೂರ ರವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿಕಟಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ ಆದಾಯ ತೆರಿಗೆ ತೊಂದರೆಗಳ ನಿವಾರಣೆಯ ಕುರಿತು ಸೌಹಾರ್ದ ಕಾಯ್ದೆಯಲ್ಲಿ ಆಗಬೇಕಾಗ ತಿದ್ದುಪಡಿ ಕುರಿತು ಮೂರನೇ ಮನವಿ ಸಲ್ಲಿಸಲಾಯಿತು.

**ಬೆಂಗಳೂರು:** ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಯಾದ ಶ್ರೀ ಹರೀಶ್ ಅವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ನಿಕಟಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ಕುರಿತು ಚರ್ಚಿಸಿದರು.

## ಆದಾಯ ತೆರಿಗೆ ಸಿಹಿ ಸುದ್ದಿ

## ಸಂಯುಕ್ತ ಸಹಕಾರಿಯ ನಿಯೋಗದ ನಿರಂತರ ಪ್ರಯತ್ನದ ಫಲವಾಗಿ ಸೌಹಾರ್ದ ಸಹಕಾರಿಗಳಿಗೆ ನೋಟೀಸು ಹಾಗೂ ತೆರಿಗೆ ಪಾವತಿ ಆದೇಶಗಳ ಸ್ಥಗಿತಕ್ಕೆ ಮೌಖಿಕ ಒಪ್ಪಿಗೆ : ಆದಾಯ ತೆರಿಗೆ ಕಾಯ್ದೆ ತಿದ್ದುಪಡಿಗೆ ಕ್ರಮದ ಭರವಸೆ.

## ಕೇಂದ್ರದಲ್ಲಿ ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿಗೆ ಕ್ರಮ

## ಆದಾಯ ತೆರಿಗೆ ಪ್ರಿನ್ಸಿಪಲ್ ಚೀಫ್‌ಕಮಿಶನರ್ ಶ್ರೀ ಬಾಲಕೃಷ್ಣನ್ ರವರ ಭೇಟಿ





ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಆದಾಯ ತೆರಿಗೆ ತೊಂದರೆಗಳ ನಿವಾರಣೆಯ ಪ್ರಯತ್ನದ ಮುಂದುವರಿದ ಭಾಗವಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ದಿನಾಂಕ 14.03.2019ರಂದು ದೆಹಲಿಗೆ ಭೇಟಿ ನೀಡಿ CBDT ಅಧ್ಯಕ್ಷರಾದ ಶ್ರೀ ಪ್ರಮೋದ್ ಚಂದ್ರ ಮೋದಿ ಇವರನ್ನು ಭೇಟಿ ಮಾಡಿ ಚರ್ಚಿಸಿರುತ್ತಾರೆ. ಮುಂದಿನ ಜೂನ್ ಮಾಹೆಯಲ್ಲಿ ನಡೆಯಬಹುದಾದ ಬಜೆಟ್ ಅಧಿವೇಶನದಲ್ಲಿ ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆ ನಿವಾರಣೆ ಮಾಡಲಾಗುವುದು ಎಂದು ಆಶ್ವಾಸನೆ ದೊರೆತಿದೆ. ಅಲ್ಲಿಯವರೆಗೆ ಸೌಹಾರ್ದ ಸಹಕಾರಿಗಳಿಗೆ ಬಂದಿರುವ ತೆರಿಗೆ ಸಂಬಂಧಿತ ನೋಟಿಸ್/ಆದೇಶಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವುದಾಗಿ ಸ್ಪಂದಿಸಿರುತ್ತಾರೆ ಹಾಗೂ ಭರವಸೆ ನೀಡಿದ್ದಾರೆ.

ಮುಂಬರುವ ಸಂಸತ್ ಅಧಿವೇಶನದಲ್ಲಿ ಆದಾಯ ತೆರಿಗೆ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ ಸೌಹಾರ್ದ ಸಹಕಾರಿಗಳ ಪದವನ್ನು ಸೇರಿಸಲು ಒಪ್ಪಿದ ಕೇಂದ್ರ ನೇರ ತೆರಿಗೆ ಬೋರ್ಡ್‌ನವರು ಸೌಹಾರ್ದ ಸಹಕಾರಿಗಳಿಗೆ ಪ್ರಸ್ತುತ ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟೀಸು ಹಾಗೂ ತೆರಿಗೆ ಪಾವತಿ ಆದೇಶಗಳನ್ನು ತಾತ್ಕಾಲಿಕವಾಗಿ ಸ್ಥಗಿತ ಗೊಳಿಸಲು ಒಪ್ಪಿದ್ದಾರೆ. ಹಾಗೂ ಬೆಂಗಳೂರಿನ ಆದಾಯ ತೆರಿಗೆ ಅಧಿಕಾರಿಗಳಿಗೆ ಮೌಖಿಕ ಸೂಚನೆ ನೀಡಿದ್ದಾರೆ

## ರಾಜ್ಯದ ಆದಾಯ ತೆರಿಗೆ ಪ್ರಧಾನ ಮುಖ್ಯ ಕಮೀಶನರ್ ಶ್ರೀ ಬಾಲಕೃಷ್ಣನ್‌ರವರ ಭೇಟಿ ಮಾಡಿದ ನಿಯೋಗ.

ದಿನಾಂಕ 20.03.2019 ರಂದು ಕರ್ನಾಟಕ ಮತ್ತು ಗೋವಾ ವಿಭಾಗಗಳ ಆದಾಯ ತೆರಿಗೆ ಪ್ರಧಾನ ಮುಖ್ಯ ಕಮೀಶನರ್ ಶ್ರೀ ಬಾಲಕೃಷ್ಣನ್ ಅವರನ್ನು ಕೆಲವು ಸಹಕಾರಿಗಳ ನಿಯೋಗದೊಂದಿಗೆ ಭೇಟಿ ಮಾಡಲಾಗಿದೆ. ಅವರು ಸಹ ಜೂನ್ ವರೆಗೆ ಯಾವುದೇ ತಗಾದೆಗಳನ್ನು ಸ್ಥಗಿತ ಗೊಳಿಸಲಾಗುವುದು ಅಷ್ಟರಲ್ಲಿ ಕಾಯ್ದೆ ತಿದ್ದುಪಡಿಗೆ ಕ್ರಮವಿಡಿ ಎಂದು ತಿಳಿಸಿದ್ದಾರೆ. ಈ ಅವಧಿಯಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟೀಸು ಹಾಗೂ ತೆರಿಗೆ ಪಾವತಿ ಆದೇಶಗಳನ್ನು ಸ್ಥಗಿತಗೊಳಿಸಲಾಗುವುದು. ಯಾವುದೇ ಸಹಕಾರಿ ಸಂಸ್ಥೆಗೆ ಈ ಬಗ್ಗೆ ನೋಟೀಸುಗಳು ಬಂದರೆ ತಿಳಿಸಿ ತಕ್ಷಣವೇ ಅದನ್ನು ವಾಪಸ್ಸು ಪಡೆಯಲಾಗುವುದು. ಯಾವ ಅಧಿಕಾರಿಗಳು ನಿಮ್ಮ ಸಹಕಾರಿಗೆ ಆದಾಯ ತೆರಿಗೆ ಪಾವತಿಸುವಂತೆ ಆದೇಶ ನೀಡುವುದಿಲ್ಲ ಹಾಗೇನಾದರೂ ಬಂದರೆ ತಿಳಿಸಿ ತಕ್ಷಣವೇ ಆದೇಶ ಸ್ಥಗಿತಗೊಳಿಸಲು ಕ್ರಮವಿಡಲಾಗುವುದು ಎಂದು ನಿಯೋಗಕ್ಕೆ ತಿಳಿಸಿದ್ದಾರೆ.

## ತಕ್ಷಣಕ್ಕೆ ಸಂಪರ್ಕಿಸಿ

ರಾಜ್ಯದ ಯಾವುದೇ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ನೋಟೀಸು ಆದೇಶ ತಗಾದೆಗಳು ಬಂದರೆ ಕೂಡಲೇ ನಿಮ್ಮ ಪ್ರಾಂತೀಯ ಅಧಿಕಾರಿಗಳನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ಆರ್. ರಘುನಂದನ ಹಾಗೂ ಕಾನೂನು ವಿಭಾಗದ ಅಧಿಕಾರಿ ಶ್ರೀ ಮಹಾಂತಪ್ಪ ಎಸ್.ಎಮ್. ಇವರನ್ನು ಸಂಪರ್ಕಿಸಿ ಮುಂದಿನ ಕ್ರಮದ ಬಗ್ಗೆ ಸಲಹೆ ಸೂಚನೆಗಳನ್ನು ಪಡೆಯುವುದು ಎಂದು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ್ ತಿಳಿಸಿದ್ದಾರೆ. ಈ ಬಗ್ಗೆ ಎಲ್ಲ ಸೌಹಾರ್ದ ಸಹಕಾರಿಗಳಿಗೂ ಮಾಹಿತಿ ನೀಡಲಾಗಿದೆ.

## ನಿರಂತರ ಹೋರಾಟ

ಕಳೆದ ಎರಡು ತಿಂಗಳಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ. ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರ, ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ. ಪಾಟೀಲ್ ಇವರುಗಳು ಕೇಂದ್ರದ ಅತ್ಯಂತ ಪ್ರಭಾವಿ ಜನರ ಮೂಲಕ 3 ಬಾರಿ ಸಿ.ಬಿ.ಡಿ.ಟಿ. ಅಧ್ಯಕ್ಷರನ್ನು ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡುವುದರ ಜೊತೆಗೆ ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ.

ನಿರಂತರ ಪ್ರಯತ್ನ ಮಾಡಿದ ಫಲವಾಗಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯ ಸಧ್ಯದ ಕಿರುಕುಳ ಸ್ಥಗಿತವಾಗಿದೆ. ಆದಾಯ ತೆರಿಗೆ ಕಾಯ್ದೆಯ ತಿದ್ದುಪಡಿಗೆ ಕ್ರಮವಿಡಲಾಗುತ್ತಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ತಿಳಿಸಿದ್ದಾರೆ.

## ಮೈಸೂರು, ಬೆಂಗಳೂರು ಹಾಗೂ ಕಲಬುರಗಿ ವಿಭಾಗದ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆ ಪೂರ್ಣ ಪ್ರಮಾಣದ ಶಾಶ್ವತ ಪರಿಹಾರಕ್ಕಾಗಿ ಪ್ರಯತ್ನ – ಬಿ.ಹೆಚ್.ಕೃಷ್ಣಾರೆಡ್ಡಿ



ದಿನಾಂಕ 29.03.2019 ರಂದು ಬೆಂಗಳೂರಿನಲ್ಲಿ ನಡೆದ ಮೈಸೂರು, ಬೆಂಗಳೂರು ಹಾಗೂ ಕಲಬುರಗಿ ವಿಭಾಗದ ಆಯ್ದ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ಬಾಧೆಯನ್ನು ಶಾಶ್ವತವಾಗಿ ನಿವಾರಣೆ ಮಾಡುವುದಕ್ಕಾಗಿ ನಿರಂತರ ಪ್ರಯತ್ನವನ್ನು ಸಂಯುಕ್ತ ಸಹಕಾರಿಯು ಮಾಡುತ್ತಿದೆ. ನಮ್ಮ ಪ್ರಯತ್ನದಿಂದ ಇಡೀ ದೇಶದಲ್ಲಿಯ ಎಲ್ಲ ವಿಧವಾದ ಸೌಹಾರ್ದ ಸಹಕಾರಿಗಳಿಗೆ ಪರಿಹಾರ ದೊರಕುತ್ತದೆ. ಇದಕ್ಕೆ ಸಹಕರಿಸುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಶ್ರೀಮತಿ ಕವಿತಾ ಹಾಗೂ ಶ್ರೀಮತಿ ಸಿಂಧುರವರಿಂದ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲರವರು ಸಭೆಗೆ ಆಗಮಿಸಿದ ಎಲ್ಲ ಅತಿಥಿ



ಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಸಭೆಯ ಉದ್ದೇಶವನ್ನು ತಿಳಿಸುತ್ತ ಸಂಯುಕ್ತ ಸಹಕಾರಿಯು ದಿನಾಂಕ 10.01.2019 ರಂದು ನಡೆಸಿದ ಸಮಾಲೋಚನಾ ಸಭೆಯಿಂದ ಇಲ್ಲಿಯವರೆಗೆ ನಡೆಸಿದ ಎಲ್ಲ ಪ್ರಯತ್ನಗಳ ವಿವರಗಳನ್ನು ಸಭೆಗೆ ತಿಳಿಸಿ ಭಾಗಶಃ ನಾವು ಸಫಲರಾಗಿದ್ದೇವೆ. ಸದ್ಯಕ್ಕೆ ಕೇಂದ್ರ ನೇರ ತೆರಿಗೆ ಬೋರ್ಡನವರು ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ಮಾಡಲು ಕ್ರಮವಿಡುವುದಾಗಿ ಭರವಸೆ ನೀಡಿದ್ದಾರೆ ಮತ್ತು ಅಲ್ಲಿಯವರೆಗೆ ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡುವ, ಆದೇಶವನ್ನು ಹೊರಡಿಸುವ ಕ್ರಮಗಳನ್ನು ತಡೆಹಿಡಿಯಲಾಗಿವುದು ಎಂದು ತಿಳಿಸಿದ್ದಾರೆ ಅದರಂತೆ ರಾಜ್ಯದ ಪ್ರಿನ್ಸಿಪಲ್ ಚೀಫ್ ಕಮಿಶನರ್ ಆಫ್ ಇನಕಮ್ ಟ್ಯಾಕ್ಸ ಇವರಿಗೆ ಸೂಚನೆಯನ್ನು ನೀಡಿದ್ದಾರೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ನಿಯೋಗ ಹೋಗಿ ಅವರನ್ನು ಸಹ ಭೇಟಿ ಮಾಡಿದ್ದೇವೆ. ಅವರೂ ಸಹ ಇದಕ್ಕೆ ಒಪ್ಪಿಸುವುದು ನಮ್ಮ ಪ್ರಯತ್ನಕ್ಕೆ ಫಲ ಸಿಕ್ಕಿರುತ್ತದೆ ಎಂದು ತಿಳಿಸಿದರು.

## ರಾಜ್ಯ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯ ದೆಹಲಿಗಳಲ್ಲಿ ಕೇಸ ದಾಖಲಿಸಿದೆ

ರಾಜ್ಯದ ಉಚ್ಚ ನ್ಯಾಯಾಲಯ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂದು ವ್ಯಾಖ್ಯಾನಿಸಿರುವುದು ತಪ್ಪು ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳೆಂದು ಪರಿಗಣಿಸಬೇಕು ಎಂದು ಸಂಯುಕ್ತ ಸಹಕಾರಿ ಪ್ರಕರಣ ದಾಖಲಿಸಿದೆ.

ಅದೇ ರೀತಿ ಹೈದರಾಬಾದ ಸಿಟಿಜನ್ ಸಹಕಾರಿ ಸಂಸ್ಥೆಯ ಸುಪ್ರೀಮ್ ಕೋರ್ಟ ನೀಡಿರುವ ತೀರ್ಪನ್ನು ಆದರಿಸಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅದಾಯ ತೆರಿಗೆ ಇಲಾಖೆಯವರು ನೋಟೀಸು ನೀಡುತ್ತಿರುವುದು ತಪ್ಪು ಎಂದು ದೆಹಲಿಯ ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಪ್ರಕರಣವನ್ನು ದಾಲಿಸಿದೆ.

ಅದೇ ರೀತಿ ಕೇಂದ್ರದ ಸಿಬಿಡಿಟಿ ಅಧಿಕಾರಿಗಳ ಸಲಹೆಯಂತೆ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳು ಎಂದು ಪರಿಗಣಿಸುವಂತೆ ರಾಜ್ಯ ಪತ್ರವನ್ನು ಹೊರಡಿಸಲು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಹಾಗೂ ನಿಬಂಧಕರನ್ನು ಮತ್ತು ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಈ ಬಗ್ಗೆ ಶೀಘ್ರದಲ್ಲಿಯೇ ರಾಜ್ಯ ಪತ್ರವನ್ನು ಹೊರಡಿಸಿ ಆದಾಯ ತೆರಿಗೆ ಇಲಾಖೆಯವರ ತಪ್ಪು ವ್ಯಾಖ್ಯಾನಕ್ಕೆ ವಿರಾಮ ಹಾಕುವಂತೆ ಕ್ರಮಕ್ಕಾಗಿ ವಿನಂತಿಸಲಾಗಿದೆ ಎಂದು ತಿಳಿಸಿದರು.

ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್.ಗುಂಡೂರಾವರವರು ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ರಾಜಶೇಖರ ರವರು ಮಾತನಾಡಿದರು.

ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸಮಾಲೋಚನೆ ಸಭೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ತಮ್ಮ ಅಭಿಪ್ರಾಯ ಹಾಗೂ ವಿವರಣೆಯನ್ನು ಕೇಳಬಯಸುವ ಪ್ರತಿನಿಧಿಗಳು ಮಾತನಾಡಲು ಅವಕಾಶ ನೀಡಿದಾಗ ಹಲವಾರು ಪ್ರತಿನಿಧಿಗಳು ಆದಾಯ ತೆರಿಗೆ ವಿಷಯಗಳ ಹಲವಾರು ವಿವರಣೆಯನ್ನು ಬಯಸಿದರು.



ಪ್ರತಿನಿಧಿಗಳ ಎಲ್ಲ ವಿವರಣೆಗಳಿಗೆ ಶ್ರೀ ಕೃಷ್ಣಾರೆಡ್ಡಿಯವರು ಉತ್ತರ ನೀಡುತ್ತ ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಆದಾಯ ತೆರಿಗೆ ತೊಂದರೆಗಳ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಆದಾಯ ತೆರಿಗೆ ಇಲಾಖೆಯ ಕ್ರಮವು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರುವುದಿಲ್ಲವೆಂದು ಮನಗಂಡು ಸಂಯುಕ್ತ ಸಹಕಾರಿಯು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಈಗಾಗಲೇ ನಮ್ಮ ಪ್ರಯತ್ನಕ್ಕೆ ಭಾಗಶಃ ಫಲ ಸಿಕ್ಕಿದೆ. ಪೂರ್ಣ ಪ್ರಮಾಣದ ಪರಿಹಾರಕ್ಕಾಗಿ ಪ್ರಯತ್ನ ಜಾರಿಯಲ್ಲಿದೆ ಎಂದು ತಿಳಿಸಿದರು.

ಸಭೆಯ ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಸನ್ನದು ಲೆಕ್ಕಪರಿಶೋಧಕ ಶ್ರೀ ಮಧುಕರ ಹೆಗಡೆ, ಶ್ರೀ ಬಿ.ಎಸ್. ನಟೇಶ ರವರುಗಳು ಭಾಗವಹಿಸಿದ್ದರು 3 ವಿಭಾಗಗಳಿಂದ 134 ಸೌಹಾರ್ದ ಸಹಕಾರಿಗಳ 198 ಪ್ರತಿನಿಧಿಗಳು ಭಾಗವಹಿಸಿದ್ದರು.



ಭಾಗವಹಿಸಿದ ಸಹಕಾರಿಗಳು

# ಶ್ರೀ ಬಿ.ಎಲ್.ಸಂತೋಷರವರಿಗೆ ಸನ್ಮಾನ



ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿರುವ ಆರ್.ಎಸ್.ಎಸ್. ಹಿರಿಯ ಪ್ರಚಾರಕ ಬಿ.ಎಲ್.ಸಂತೋಷರವರನ್ನು ಸನ್ಮಾನಿಸಲಾಯಿತು

## ಸಹಕಾರಿಗಳು ಆರ್ಥಿಕ ಶಿಸ್ತಿಗೆ ಬದ್ಧರಾಗಿರಬೇಕು – ಬಿ.ಎಲ್.ಸಂತೋಷ

ಸಹಕಾರ ಭಾರತಿ ಕರ್ನಾಟಕ ಇವರ ವತಿಯಿಂದ ಏರ್ಪಡಿಸಲಾದ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿದ ಶ್ರೀಯುತ ಬಿ. ಎಲ್. ಸಂತೋಷರವರು "ರಾಷ್ಟ್ರೀಯತೆ ಮತ್ತು ದೇಶದ ಆರ್ಥಿಕತೆಯಲ್ಲಿ ಸಹಕಾರಿಗಳ ಪಾತ್ರ" ಎಂಬ ವಿಷಯವಾಗಿ ಮಾತನಾಡುತ್ತ ಈ ದೇಶದ ಸಹಕಾರಿ ಕ್ಷೇತ್ರದ ಸ್ವರೂಪ ಸಾಧನೆ ಹಾಗೂ ಸವಾಲುಗಳ ಬಗ್ಗೆ ನಾನು ತಿಳಿಸಿದ್ದೇನೆ. ನಾನೂ ನೇರವಾಗಿ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿಲ್ಲವಾದರೂ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಸಹಕಾರಿಯಾಗಿ ಹಲವಾರು ಸಂದರ್ಭಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಹೀಗಾಗಿ ನಾನು ಸಹಕಾರಿಗಳಿಗೆ ಸಹಕಾರಿ ಎಂದು ತಿಳಿಸುತ್ತ ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಆರ್ಥಿಕ ಶಿಸ್ತು ಅಳವಡಿಸಿಕೊಳ್ಳುವುದು ಅಗತ್ಯ. ಇದರಿಂದಾಗಿ ಸಾರ್ವಜನಿಕರ ಹಾಗೂ ಸರಕಾರದ ವಿಶ್ವಾಸಕ್ಕೆ ಪಾತ್ರವಾಗುತ್ತವೆ ಮತ್ತು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರಧಾನ ಭೂಮಿಕೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಪ್ರತಿಯೊಂದು ಸಂಸ್ಥೆ ತನ್ನದೆ ಆದ ವ್ಯವಹಾರಿಕ ಮೌಲ್ಯಗಳನ್ನು ಹೊಂದಿರುವುದು ಅವಶ್ಯಕ. ಇಲ್ಲಿಯ ವ್ಯಕ್ತಿಯ ಹಿತಾಸಕ್ತಿಗಳಿಗಿಂತ ಸಹಕಾರಿ ಸಂಸ್ಥೆ ಮೌಲ್ಯಗಳಿಗೆ ಆದ್ಯತೆ ಇರಬೇಕಾಗುತ್ತದೆ. ಸಹಕಾರಿ ತತ್ವಗಳ ಹಾಗೂ ಮಾನವೀಯ ಮೌಲ್ಯಗಳ ಪರಿಣಾಮಕಾರಿ ಅನುಷ್ಠಾನದ ಸದಸ್ಯರಿಗೆ ಅತಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಹಾಗೂ ಉತ್ತಮ ಆರ್ಥಿಕ ಅಭಿವೃದ್ಧಿ ಕೇಂದ್ರವಾಗಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಒತ್ತಿ ಹೇಳಿದರು.

ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಭಾರತವನ್ನು ಈಗ ವಿಶ್ವದ ರಾಷ್ಟ್ರಗಳು ಕೇಳುತ್ತಿದ್ದಾರೆ. ಗೌರವಿಸುತ್ತಿದ್ದಾರೆ ಹಾಗೂ ಸಲಹೆಗಳನ್ನು ಪಡೆಯುತ್ತಿದ್ದಾರೆ. Now India is being heard, Respected and consulted ಈ ದೇಶದಲ್ಲಿ ಆರ್ಥಿಕ ಶಿಸ್ತನ್ನು ಬೆಳೆಸುವುದಕ್ಕಾಗಿ ಕೇಂದ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸರಕಾರ ತೆಗೆದುಕೊಂಡ ಅನೇಕ ಕ್ರಮಗಳನ್ನು ವಿವರಿಸಿರು.

ವಿಶೇಷವಾಗಿ ಸಾಮಾಜಿಕ ಜವಾಬ್ದಾರಿಯನ್ನು ದೇಶದ ಎಲ್ಲ ಪ್ರತಿಯೊಬ್ಬ ನಾಗರಿಕರು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ವಿಶೇಷವಾಗಿ ಅಕ್ಷರಸ್ಥರು ಎಂದು ಗುರುತಿಸಿಕೊಂಡಿರುವವರು ಸಾಮಾಜಿಕ ಜವಾಬ್ದಾರಿಯನ್ನು ಹೇಗೆ ನಿಭಾಯಿಸುವುದು ಅಗತ್ಯವಾಗಿದೆ It is high time for all Educated class to shoulder some social responsibility. It is the need of the hour. ಸಮಾಜದಿಂದ ನಾವು ಸಮಾಜಕ್ಕಾಗಿ ನಾವು ಆದ್ದರಿಂದ ಸಮಾಜದ ಅಭಿವೃದ್ಧಿಗೆ ನಮ್ಮ ಕೊಡುಗೆಯನ್ನು ನೀಡುವಲ್ಲಿ ಹಿಂದೆ ಬೀಳಬಾರದು ಎಂದು ತಿಳಿಸಿದರು. ಸಾಮಾಜಿಕ ಜವಾಬ್ದಾರಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಿದೇಶಗಳ ಹಲವಾರು ಉದಾಹರಣೆಗಳನ್ನು ಪ್ರಸ್ತಾಪಿಸಿದರು.

ದೇಶದ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಸಹಕಾರಿ ಕ್ಷೇತ್ರ ಈ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುವ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ತನ್ನ ಸದಸ್ಯರಿಗೆ ತಿಳಿಯಪಡಿಸುವ ಜವಾಬ್ದಾರಿಯನ್ನು ನಿರ್ವಹಿಸುವುದು ಇಂದಿನ ಪ್ರಾಶಸ್ತದ ಕ್ರಮವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಸಹಕಾರಿ ಸಂಸ್ಥೆಯು ತನ್ನ ಎಲ್ಲ ಸದಸ್ಯರ ಹಾಗೂ ತನ್ನ ವ್ಯಾಪ್ತಿಯ ಜನರನ್ನು ಮತದಾರರ ಪಟ್ಟಿಯಲ್ಲಿರುವಂತೆ, ಮತದಾನವನ್ನು ಮಾಡುವಂತೆ ಮತದಾನದ ಮಹತ್ವದ ಬಗ್ಗೆ ಉತ್ತಮ ಪ್ರತಿನಿಧಿಗಳ ಆಯ್ಕೆಯಲ್ಲಿ ಅವರುಗಳ ಪಾತ್ರದ ಬಗ್ಗೆ ತಿಳುವಳಿಕೆ ನೀಡಬೇಕು ಎಂದು ತಿಳಿಸಿದರು.

ನಂತರದಲ್ಲಿ ಪ್ರತಿನಿಧಿಗಳ ಅನೇಕ ಪ್ರಶ್ನೋತ್ತರಗಳಿಗೆ ಸ್ಪಂದಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಹೆಚ್.ವಿ. ರಾಜೀವರವರು ವಂದನಾರ್ಪಣೆ ಸಲ್ಲಿಸಿದರು.

## ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಮೊದಲನೇ ತಂಡದ ಮೊದಲ ಕಂಟ್ಯಾಕ್ಟ್ ತರಗತಿಯ ಉದ್ಘಾಟನಾ ಕಾರ್ಯಕ್ರಮ

# ಪಠ್ಯಕ್ರಮ ಹಾಗೂ ಅಧ್ಯಯನ ಸಾಹಿತ್ಯ ವಿಶ್ವವಿದ್ಯಾಲಯ ಗುಣಮಟ್ಟದ್ದಾಗಿದೆ – ಶ್ರೀ ಬಿ.ಕೆ. ರವಿ



**ಬೆಂಗಳೂರು:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಜನವರಿ 2019ರಿಂದ ಪ್ರಾರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ದೂರ ಶಿಕ್ಷಣ ಕುರಿತಾದ ಮೊದಲನೇಯ ಸಂಪರ್ಕ ತರಗತಿಯು ದಿನಾಂಕ 09.03.2019 ಹಾಗೂ 10.03.2019ರಂದು ರಂದು "ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ" ಬೆಂಗಳೂರು ಇಲ್ಲಿ ಜರುಗಿತು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ನಾರಾಯಣ ಹೆಗಡೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಪ್ರಾಂತೀಯ ಕಛೇರಿ, ಬೆಂಗಳೂರು, ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಕೆ. ರವಿ, ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ಗುರುಸ್ವಾಮಿ, ಕೆಸಿಎಸ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಬೆಂಗಳೂರು, ಶ್ರೀ ವಸಂತಕುಮಾರ್, ಮಾನ್ಯ ಸಿಂಡಿಕೇಟ್ ಮೆಂಬರ್, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ಡಾ.ಎಸ್.ಎ. ಸಿದ್ದಾಂತಿ, ಮಾನ್ಯ ನಿರ್ದೇಶಕರು(ನಿ.), ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಭಾಸ್ಕರ್ ಹೆಗಡೆ ಕಾಗೇರಿ (ನಿ) ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಪ್ರಾರ್ಥನೆಯ ಮೂಲಕ ಪ್ರಾರಂಭಿಸಲಾಯಿತು. ಕಾರ್ಯಕ್ರಮದ ಪ್ರಾಸ್ತಾವಿಕ ಹಾಗೂ ಸ್ವಾಗತವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನಡೆಸಿಕೊಟ್ಟರು, ಸಂಯುಕ್ತ ಸಹಕಾರಿ ವತಿಯಿಂದ ನೂತನವಾಗಿ ಆರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ದೂರ ಶಿಕ್ಷಣದ ಕುರಿತಾದ ಉದ್ದೇಶ ಹಾಗೂ ಉಪಯುಕ್ತ ಮಾಹಿತಿಯನ್ನು ಅಭ್ಯರ್ಥಿಗಳಿಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಉದ್ಘಾಟನೆಯನ್ನು ಎಲ್ಲಾ ಮುಖ್ಯಅತಿಥಿಗಳಿಂದ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಿ.ಕೆ. ರವಿ, ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರು ಸಂಯುಕ್ತ ಸಹಕಾರಿ ವತಿಯಿಂದ ಆರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ದೂರ ಶಿಕ್ಷಣ ಕೋರ್ಸ್‌ನ ಅಧ್ಯಯನ ಸಾಹಿತ್ಯದ ಬಗ್ಗೆ ಅಭ್ಯರ್ಥಿಗಳಿಗೆ ತಿಳಿಸಿಕೊಟ್ಟರು. ಹಾಗೂ ಎಲ್ಲಾ ಮುಖ್ಯ ಅತಿಥಿಗಳಿಂದ ಕೋರ್ಸ್‌ನ ಅಧ್ಯಯನ ಸಾಹಿತ್ಯವನ್ನು ಬಿಡುಗಡೆಗೊಳಿಸಲಾಯಿತು.

ಶ್ರೀ ಗುರುಸ್ವಾಮಿ ಹಾಗೂ ಶ್ರೀ ವಸಂತಕುಮಾರ್‌ರವರು ಮಾತನಾಡುತ್ತ ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಿರುವ 6 ತಿಂಗಳ ದೂರ ಶಿಕ್ಷಣ ಕೋರ್ಸ್ ಬಹಳ ಉಪಯುಕ್ತವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು ಕಾರ್ಯಕ್ರಮದ ಮೊದಲ ಭಾಗವನ್ನು ಶ್ರೀ ಬಿ.ಎಸ್. ಚಂದ್ರಶೇಖರ್‌ರವರು ಪ್ರಾರಂಭಿಸಿದರು, ಅಭ್ಯರ್ಥಿಗಳಿಗೆ ಬ್ಯಾಂಕಿಂಗ್ ಕಾಯ್ದೆಯ ಕುರಿತು ಹಲವು ಉದಾಹರಣೆಗಳ ಮೂಲಕ ಅಭ್ಯರ್ಥಿಗಳಿಗೆ ತಿಳಿಸಿಕೊಟ್ಟರು. ನಂತರದ ಡಾ.ಎಸ್.ಎ. ಸಿದ್ದಾಂತಿಯವರು, ಅಭ್ಯರ್ಥಿಗಳಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆಯ ಕುರಿತು ತಿಳಿಸಿಕೊಟ್ಟರು. ಮೊದಲ ಸಂಪರ್ಕ ವರ್ಗ ತರಗತಿಯಲ್ಲಿ ಒಟ್ಟು 103 ಅಭ್ಯರ್ಥಿಗಳು ಭಾಗವಹಿಸಿ ಪ್ರಯೋಜನ ಪಡೆದರು.



ಡಿ.ಸಿ.ಬಿ.ಎಂ ಕೋರ್ಸ್‌ನ ಪುಸ್ತಕಗಳ ಬಿಡುಗಡೆ

**ಬೆಳಗಾವಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹೊಸದಾಗಿ ಪ್ರಾರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ದೂರ ಶಿಕ್ಷಣ ಕುರಿತಾದ ಮೊದಲನೇಯ ಸಂಪರ್ಕ ತರಗತಿಯು ದಿನಾಂಕ 09 ಮಾರ್ಚ 2019 ರಂದು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿಯಲ್ಲಿ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ॥ ಮೋಹನ ಸತ್ಯಪ್ಪ ಮನ್ನೊಳ್ಳಿ, ಮಾನ್ಯ ಅಧ್ಯಕ್ಷರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕುಶ ರಮೇಶ ಕತ್ತಿ, ಮಾನ್ಯ ನಿರ್ದೇಶಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಆರ್. ಟಿ. ಶಿರೋಳಕರ, ಮಾನ್ಯ ನಿರ್ದೇಶಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಶ್ರೀ ಸುಜಿತ ಮಲ್ಲಿಕಾರ್ಜುನ ಕತ್ತಿ, ಮಾನ್ಯ ಪ್ರಧಾನ ವ್ಯವಸ್ಥಾಪಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮತ್ತು ಶ್ರೀ ಅಮ್ಮಣಗಿ, ಆಡಳಿತಾತ್ಮಕ ಸಲಹೆಗಾರರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ, ಇವರುಗಳು ಭಾಗವಹಿಸಿದ್ದರು.

ಕಾರ್ಯಕ್ರಮವು ಶ್ರೀಮತಿ ಸವಿತಾ ತೇಲಿ ಇವರ ಪ್ರಾರ್ಥನೆ ಗೀತೆಯೊಂದಿಗೆ ಆರಂಭವಾಯಿತು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಬೆಳಗಾವಿ. ಇವರು ನಡೆಸಿಕೊಟ್ಟರು. ಪ್ರಾಸ್ತಾವಿಕ ನುಡಿಗಳನ್ನು ಶ್ರೀ ವಿ. ಜೆ. ಕಾರಕೂನ, ತರಬೇತಿ ಅಧಿಕಾರಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಇವರು ದೂರ ಶಿಕ್ಷಣ ಕೋರ್ಸಿನ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಅಭ್ಯರ್ಥಿಗಳಿಗೆ ನೀಡಿದರು.

ಉದ್ಘಾಟಕ ಭಾಷಣದಲ್ಲಿ ಶ್ರೀ ಕುಶ ರಮೇಶ ಕತ್ತಿ, ಮಾನ್ಯ ನಿರ್ದೇಶಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ ಡಿಪ್ಲೋಮಾ (ದೂರ ಶಿಕ್ಷಣ) ಕೋರ್ಸನ್ನು ಸಂಯುಕ್ತ ಸಹಕಾರಿಯು ಆಯೋಜಿಸಿದ್ದು ತುಂಬಾ ಒಳ್ಳೆಯ ವಿಷಯವಾಗಿದೆ. ಮೊದಲು ಇದರ ಸಂಪರ್ಕ ತರಗತಿಗಳನ್ನು ಬೆಂಗಳೂರಿನಲ್ಲಿ ನಡೆಸುವುದಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ನಮಗೆ ತಿಳಿದು ಬಂದಿತ್ತು ಆದರೆ ನಮ್ಮ ಎಲ್ಲಾ ಬೆಲ್ಲದ ಬಾಗೇವಾಡಿ ಸೌಹಾರ್ದ ಸಹಕಾರಿ ಅರ್ಬನ್ ಬ್ಯಾಂಕ್‌ನ ಆಡಳಿತ ಮಂಡಲಿ ಸದಸ್ಯರು ಸಭೆ ಸೇರಿ ನಮ್ಮ ಸಹಕಾರಿಯ ವತಿಯಿಂದ 50 ಅಭ್ಯರ್ಥಿಗಳನ್ನು ಈ ಕೋರ್ಸನಲ್ಲಿ ಭಾಗವಹಿಸುವುದಾಗಿ ತಿಳಿಸಿ ಹಾಗೂ ನಮ್ಮ ಸಹಕಾರಿ ವತಿಯಿಂದ ಸಂಪರ್ಕ ತರಗತಿಗಳನ್ನು ನಡೆಸಲು ಸ್ಥಳಾವಕಾಶವನ್ನು ಒದಗಿಸುವುದಾಗಿ, ಅದಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಈ ಕುರಿತು ವಿನಂತಿಸಿದಾಗ ಅವರು ನಮ್ಮ ಈ ವಿನಂತಿಗೆ ಒಗ್ಗೊಟ್ಟು ಸಂಪರ್ಕ ತರಗತಿಗಳನ್ನು ನಮ್ಮ ಸಹಕಾರಿಯಲ್ಲಿಯೇ ಎಲ್ಲ ಬೆಳಗಾವಿ ವಿಭಾಗಕ್ಕೆ ಒಳಪಡುವ ಅಭ್ಯರ್ಥಿಗಳಿಗೋಸ್ಕರ ಸಂಪರ್ಕ ತರಗತಿಗಳನ್ನು ಆಯೋಜಿಸುವುದಾಗಿ ತೀರ್ಮಾನ ಕೈಗೊಂಡರು, ಎಂದು ಹೇಳಿದರು. ಈ ಬ್ಯಾಂಕಿಂಗ್ ಕೋರ್ಸದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್




ಕ್ಷೇತ್ರಗಳಿಗೆ ಸಂಬಂಧಿತ ವಿಷಯಗಳ ಮೇಲೆ ಉಪನ್ಯಾಸಗಳನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಪಡೆಯಲಿದ್ದೀರಿ ಅದರ ಸಂಪೂರ್ಣ ಮಾಹಿತಿ ತಮಗೆ ದೊರೆಯಲಿದೆ, ಇದರ ಲಾಭವನ್ನು ಪಡೆಯಿರಿ, ಇದರಿಂದ ಸಹಕಾರಿ ಕ್ಷೇತ್ರ ಅಷ್ಟೆ ಅಲ್ಲದೇ ಬೇರೆ ಕ್ಷೇತ್ರಗಳಲ್ಲೂ ಸಹ ತಾವು ತಮ್ಮನ್ನು ತೊಡಗಿಸಿಕೊಂಡರೆ ಉನ್ನತಿ ಸಾಧ್ಯವಾಗುತ್ತದೆ, ಉಜ್ವಲ ಭವಿಷ್ಯ ತಮ್ಮದಾಗಲೀ ಎಂದು ಅಭ್ಯರ್ಥಿಗಳಿಗೆ ಹೇಳುತ್ತ ಅವರಿಗೆ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಶ್ರೀ ಅಮ್ಮಣಗಿ, ಆಡಳಿತಾತ್ಮಕ ಸಲಹೆಗಾರರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ಮಾತನಾಡುತ್ತಾ, ದೂರ ಶಿಕ್ಷಣ ತರಬೇತಿಯು ನಮ್ಮ ಸಹಕಾರಿಯಲ್ಲಿ ನಡೆಯುತ್ತಿರುವುದು ನಮಗೆ ಸಂತೋಷದ ವಿಷಯವಾಗಿದೆ. ಬ್ಯಾಂಕಿಂಗ್ ಹಾಗೂ ಸಹಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಬಹುತೇಕ ವಿಷಯವು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಿದ್ಧಪಡಿಸಿದ ಅಧ್ಯಯನ ಸಾಹಿತ್ಯವು ಒಳಗೊಂಡಿದೆ, ತಾವು ಈ ತರಬೇತಿಯ ಸಂಪೂರ್ಣ ಲಾಭ ಪಡೆಯಿರಿ, ತಾವು ಭಕ್ತಿಯಿಂದ, ಶ್ರದ್ಧೆಯಿಂದ ಈ ತರಬೇತಿಯಲ್ಲಿ ಪಾಲ್ಗೊಳ್ಳಿರಿ, ಯಾರೂ ಸಹಿತ ಸಂಪರ್ಕ ತರಗತಿಗಳಿಗೆ ಗೈರುಹಾಜರಾಗದೆ ಮುಂದೆ ನಡೆಯುವ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ ಹೊಂದಿ ನಿಮ್ಮ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಿ ಎಂದು ಅಭ್ಯರ್ಥಿಗಳಿಗೆ ಶುಭವನ್ನು ಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಮೋಹನ ಸತ್ಯಪ್ಪ ಮುನ್ನೊಳ್ಳಿ, ಮಾನ್ಯ ಅಧ್ಯಕ್ಷರು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ., ಬೆಂಗಳೂರು ಇದರ ವತಿಯಿಂದ ಆಯೋಜನೆಗೊಂಡ ಈ ದೂರ ಶಿಕ್ಷಣ ತರಗತಿಗಳನ್ನು ನಮ್ಮ ಸಹಕಾರಿಯಲ್ಲಿ ನಡೆಸುತ್ತಿರುವುದು ತುಂಬಾ ಸಂತೋಷಕರ ವಿಷಯವಾಗಿದೆ, ತಾವು ಎಲ್ಲಾ ಫಲಾನುಭವಿಗಳು ಈ ತರಬೇತಿಯಲ್ಲಿ ಪಾಲ್ಗೊಂಡಿದ್ದಿರಿ, ಇದರ ಸದುಪಯೋಗ ಪಡೆಯಿರಿ, ನೀವು ಪಡೆದ ಜ್ಞಾನ ಸಹಕಾರಿ ಹಾಗೂ ಬ್ಯಾಂಕಿಂಗ್ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿರದೆ ನಿಮ್ಮ ವೈಯಕ್ತಿಕ ಜೀವನದಲ್ಲೂ ಸಹ ಇದು ಲಾಭದಾಯಕವಾಗಿರುತ್ತದೆ ಎಂದು ಅಭ್ಯರ್ಥಿಗಳ ಕುರಿತು ಸಲಹೆಗಳನ್ನು ನೀಡಿ, ಅವರಿಗೆ ಶುಭ ಹಾರೈಸಿದರು. ಮೊದಲನೇಯ ಸಂಪರ್ಕ ತರಬೇತಿಯಲ್ಲಿ 72 ಅಭ್ಯರ್ಥಿಗಳ ಪೈಕಿ 69 ಜನ ಹಾಜರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪ್ರತಿಭಾ ಮಠ, ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಶ್ರೀ ಸುಜಿತ ಮಲ್ಲಿಕಾರ್ಜುನ ಕತ್ತಿ, ಮಾನ್ಯ ಪ್ರಧಾನ ವ್ಯವಸ್ಥಾಪಕರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ನಡೆಸಿಕೊಟ್ಟರು.

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಣೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ ಹಾಗೂ ಮೈಸೂರು ವಿಭಾಗದಲ್ಲಿ ಆಚರಿಸಲಾಯಿತು.

## ಬೆಂಗಳೂರು ವಿಭಾಗ



**ಬೆಂಗಳೂರು:** ಸಂಯುಕ್ತ ಸಹಕಾರಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ದಿನಾಂಕ: 08.03.2019ರಂದು ಹೋಟೆಲ್ ಪಾರಿಜಾತ ಗೇಟ್ ವೇ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕಿಯಾದ ಶ್ರೀಮತಿ ಶೋಭಾರವರು ನೆರವೇರಿಸಿಕೊಟ್ಟರು.

ಕಾರ್ಯಕ್ರಮವು ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಕಾರ್ಯಕ್ರಮದ ಮೂಲಕ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀಮತಿ ರಶ್ಮಿ ಜಿ. ಕೆ.ಎ.ಎಸ್, ಮಾನ್ಯ ಜಂಟಿ ನಿರ್ದೇಶಕರು (ಆಡಳಿತ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಮತ್ತು ಪ್ರಾಜೆಕ್ಟ್ ಮ್ಯಾನೇಜರ್ ಡಿಪಿಎಆರ್ (ಇ-ಗವರ್‌ನೆನ್ಸ್), ಬೆಂಗಳೂರು ಇವರು ನರೆವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಕೆ.ಎಂ. ಆಶಾ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು, ನಿಬಂಧಕರ ಕಛೇರಿ, ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಎಸ್.ವಿ. ಸಂಧ್ಯಾ, ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಶ್ರೀಮತಿ ಗೀತಾ ಕರುಣಾಕರ ಬಾಬು, ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಶ್ರೀಮತಿ ಲಕ್ಷ್ಮೀ ಅಶ್ವಿನ್‌ಗೌಡ, ಮಾನ್ಯ ಐಆರ್‌ಎಸ್ ಅಧಿಕಾರಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಭಾಗವಹಿಸಿದ್ದರು.

ಬೆಳಗ್ಗೆ 11 ರಿಂದ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀಮತಿ ಶಾಂತಾ ನಾಗರಾಜ್ ಮಾನ್ಯ ಕೌಟುಂಬಿಕ ಆಪ್ತ ಸಲಹೆಗಾರರು, ಬೆಂಗಳೂರು. ಇವರು ಮಹಿಳಾ ಸಬಲೀಕರಣ ವಿಷಯದ ಬಗ್ಗೆ ಉಪನ್ಯಾಸ ಮಾಡಿದರು. ಶ್ರೀಮತಿ ಮೀನಾಕ್ಷಿ ಖಂಡಿಮಠ್ ಮಾನ್ಯ ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ವಿಷಯದ ಬಗ್ಗೆ ಉಪನ್ಯಾಸ ಮಾಡಿದರು.

ಭೋಜನ ವಿರಾಮದ ನಂತರ, ಮಧ್ಯಾಹ್ನ 2:30 ರಿಂದ 4:30 ರವರೆಗೆ ಸಂವಾದ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಮೀನಾಕ್ಷಿ ಖಂಡಿಮಠ್, ಮಾನ್ಯ ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀಮತಿ ಪದ್ಮ ಎನ್.ಆರ್. ಮಾನ್ಯ ವಕೀಲರು, ರಾಜ್ಯ ಶ್ರೇಷ್ಠ ನ್ಯಾಯಾಲಯ, ಬೆಂಗಳೂರು, ಶ್ರೀಮತಿ ಇಂದಿರಾ ಮಾನ್ಯ ಸಂಸ್ಥಾಪಕ ಅಧ್ಯಕ್ಷರು, ಇಂದಿರಾ ಫುಡ್ಸ್, ಬೆಂಗಳೂರು. ಕುಮಾರಿ ದಿವ್ಯಾ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು, ಶ್ರೀಮತಿ ಶಾಂತಾ ಹೆಗಡೆ, ಯೋಗಾ ಪ್ರಾಧ್ಯಾಪಕರು, ಆರ್ಟ್ ಆಫ್ ಲಿವಿಂಗ್, ಬೆಂಗಳೂರು, ಶ್ರೀಮತಿ ಶೋಭಾ ಮಾನ್ಯ ಸಂಸ್ಥಾಪಕ ಅಧ್ಯಕ್ಷರು ವಿ ಅಂಡ್ ವಿ ವಿಜನರಿ ಅಸೋಸಿಯೇಷನ್, ಬೆಂಗಳೂರು, ಇವರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳಾ ಸಹಕಾರಿಗಳು

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು ತಾವು ನಡೆದುಬಂದ ಹಾದಿ, ತಮ್ಮ ಕ್ಷೇತ್ರದಲ್ಲಿ ತಾವು ಮಾಡಿದ ಸಾಧನಯನ್ನು ತಿಳಿಸಿಕೊಟ್ಟರು, ಹೆಣ್ಣು ಸಮಾಜದ ಕಣ್ಣು, ಆಕೆ ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಸ್ನೇಹಿತೆಯಾಗಿ, ಎಲ್ಲಾ ರೂಪದಲ್ಲೂ ಬಹುಮುಖ್ಯ ಪಾತ್ರ ವಹಿಸುತ್ತಾಳೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ.ಬಿ.ಹೆಚ್. ಕೃಷ್ಣಾರೆಡ್ಡಿಯವರು ನೇರವೇರಿಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀಮತಿ ಸಿಂಧುರವರು ನೆರವೇರಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಒಟ್ಟು 105 ಜನ ಭಾಗವಹಿಸಿದ್ದರು

## ಬೆಳಗಾವಿ ವಿಭಾಗ

**ಬೆಳಗಾವಿ:** ದಿನಾಂಕ ಮಾರ್ಚ್ 08 ರಂದು ಪ್ರತಿ ವರ್ಷ ಅಂತರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 08 ಮಾರ್ಚ 2019 ಶುಕ್ರವಾರ ಬೆಳಿಗ್ಗೆ 10:00 ಗಂಟೆಗೆ ಹೋಟೆಲ್ ಮಧುಬನ ರೆಸಿಡೆನ್ಸಿ, ಅಗ್ನಿಶಾಮಕದಳ ಕಛೇರಿ ಹತ್ತಿರ, ಗೋವಾವೆಸ್ ಬೆಳಗಾವಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸೀತವ್ವ ಜೋಡಟ್ಟಿ, ಇವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ರಾಜೇಶ್ವರಿ ಈರನಟ್ಟಿ, ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಡಾ॥ ನಮ್ರತಾ ಎಸ್ ಸರ್ವಿ(ಬಿ.ಎ.ಎಮ್.ಎಸ್) ವೈದ್ಯರು, ಶ್ರೀ ಬನಶಂಕರಿ ಕ್ಲಿನಿಕ್, ಗದಗ ಹಾಗೂ ಶ್ರೀಮತಿ ಶಾಂತಿ ನಾಯಕರ, ಮಾನ್ಯ ಅಧ್ಯಕ್ಷರು, ಭೂಮಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ, ಹೊನ್ನಾವರ, ಇವರುಗಳು ಭಾಗವಹಿಸಿದ್ದರು.

ಕಾರ್ಯಕ್ರಮವು ಶ್ರೀಮತಿ ಗೀತಾ ಕಮ್ಮಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು, ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ, ಇವರು ನಡೆಸಿಕೊಟ್ಟರು, ಇವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ, ಅಂತರಾಷ್ಟ್ರೀಯ ಮಹಿಳಾ ದಿನದ ಆಚರಣೆಯ ಹಿನ್ನೆಲೆಯನ್ನು ತಿಳಿಸುತ್ತಾ, 1914 ರಲ್ಲಿ ಜರ್ಮನಿಯಲ್ಲಿ ಮಾರ್ಚ 08 ನ್ನು ಮಹಿಳೆಯರ ದಿನವನ್ನಾಗಿ ಆಚರಿಸಿದರು, ಅದರ ಉದ್ದೇಶ ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಡಬೇಕು ಎನ್ನುವುದಾಗಿತ್ತು, ಅದರ ತತ್ಪರಿಣಾಮವಾಗಿ ಜರ್ಮನಿಯಲ್ಲಿ 1919ರಲ್ಲಿ ಮಹಿಳೆಯರಿಗೆ ಮತದಾನ ಮಾಡುವ ಹಕ್ಕು ದೊರಕಿತು, ಈಗ ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ಕೂಡ ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದಾರೆ, ಮಹಾತ್ಮಾ ಗಾಂಧೀಜಿಯವರ ಪ್ರಕಾರ ಮಹಿಳೆಯರನ್ನು ದುರ್ಬಲರಾದವರು ಅಂತ ತಿಳಿದುಕೊಳ್ಳುವುದು ತಪ್ಪು, ಅದು ನಮ್ಮ ಮೂಢ ನಂಬಿಕೆ ಮತ್ತು ನಾವು ಈ ಸಮಾಜಕ್ಕೆ ಮಾಡುವಂತಹ ಅಸಮಾನತೆ ಮತ್ತು ಇದು ನ್ಯಾಬದ್ಧವಾದದಲ್ಲ ಎನ್ನುವ ಮಾತನ್ನು ಹೇಳಿದ್ದರು. ಮಹಿಳೆ ಸೃಷ್ಟಿಯ ಸೊಬಗು, ಭೂಮಿ ಮೇಲಿನ ಒಂದು ಅದ್ಬುತ ಸೃಷ್ಟಿ, ಮಹಿಳೆ ಕ್ಷಮಯಾ ಧರಿತ್ರಿ, ಕರುಣಾಮಯಿಯೆಂದು ವರ್ಣಿಸಲ್ಪಡುತ್ತಾಳೆ, ಈಗಿನ ದಿನಮಾನಗಳಲ್ಲಿ ಹಲವಾರು ಕ್ಷೇತಗಳಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ. ಹೆಣ್ಣಿಗೆ ಏಕಾಗ್ರತೆ ಮತ್ತು ಸಾಧಿಸಬೇಕೆಂಬ ಛಲ ಹೆಚ್ಚು ಇರುತ್ತದೆ, ಇದಕ್ಕೆ ಸಾಕ್ಷಿಯಾಗಿ, ಸಣ್ಣ ವಯಸ್ಸಿನಲ್ಲಿಯೇ ಸಾಧನೆಗೈದ ಫಲಕ್ ಮುಚ್ಚಾಲ್‌ವರ ಉದಾಹರಣೆಯನ್ನು ನೀಡಿದರು, ಫಲಕ ಮುಚ್ಚಾಲ್ ಇವರು ತಮ್ಮ ಏಳನೇ ವಯಸ್ಸಿನಲ್ಲಿಯೇ ಹಾಡನ್ನು ಹಾಡಿ, ದೇಣಿಗೆ ಎತ್ತಿ ಬಂದ ಹಣವನ್ನು ಕಾರ್ಗಿಲ್ ಯುದ್ದದಲ್ಲಿ ಹುತಾತ್ಮರಾದ ಯೋಧರ ಕುಟುಂಬಗಳಿಗೆ



ದಾನ ಮಾಡಿದರು. ತಮ್ಮ ಹಾಡಿನ ಮೂಲಕ ಸಂಗ್ರಹವಾದ ಹಣದಿಂದ ಸಾವಿರಾರು ಮಕ್ಕಳಿಗೆ ಉಚಿತವಾಗಿ ಹೃದಯದ ಶಸ್ತ್ರ ಚಿಕಿತ್ಸೆ ಮಾಡಿಸಿದ್ದಾರೆ, ಎಂದು ಅವರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದರು.

ಸಮಾರಂಭದ ಉದ್ಘಾಟಕರಾದ ಶ್ರೀಮತಿ ಸೀತವ್ವ ಜೋಡಟ್ಟಿ ಇವರು, ತಮ್ಮ ಸಂಸ್ಥೆಯ ಹುಟ್ಟಿನ ಮೂಲ ಉದ್ದೇಶವನ್ನು ವಿವರಿಸುತ್ತಾ, ಮಾಸ್ ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಯು 8 ಸಪ್ಟೆಂಬರ 1997 ರಂದು, ದೇವದಾಸಿಯರೂ ಕೂಡಿ ನಿರ್ಮಿಸಿದ ಸಂಸ್ಥೆಯಾಗಿದೆ, ಇದರ ಮೂಲ ಉದ್ದೇಶ ಮಹಿಳೆಯರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರನ್ನಾಗಿ ಮಾಡುವುದು. ಮಹಿಳೆಯರ ಅಭಿಪ್ರಾಯದ ವಿರುದ್ಧ ನಡೆಯುತ್ತಿರುವ ಬಾಲ್ಯ ವಿವಾಹ, ಅನ್ಯಾಯ, ಅತ್ಯಾಚಾರ ಹಾಗೂ ಶೋಷಣೆ ತಡೆಗಟ್ಟುವುದು ಈ ಸಂಸ್ಥೆಯ ಧ್ಯೇಯವಾಗಿದೆ. ಸಮಾಜದಲ್ಲಿ ಮಹಿಳೆಯರ ಕುರಿತು ಜರುಗುವ ಎಲ್ಲಾ ರೀತಿಯ ಅನ್ಯಾಯಗಳ ವಿರುದ್ಧ ಬದಲಾವಣೆ ತರುವುದು ಇವರ ಮೂಲ ಮಂತ್ರವಾಗಿದೆ ಎಂದು ತಿಳಿಸಿದರು. ತಮ್ಮ ಇಂತಹ ಕಾರ್ಯಗಳಿಗಾಗಿಯೇ ಭಾರತ ಸರ್ಕಾರವು ಜನವರಿ, 2018 ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಜೇಶ್ವರಿ ಈರನಟ್ಟಿ, ಇವರು ಹೆಣ್ಣು ಅಬಲೆ ಅಲ್ಲ, ಅವಳು ಸಬಲೆ, ಸ್ತ್ರೀಯು ಕುಟುಂಬಕ್ಕೆ ಭಾರ ಎಂದು ಭಾವಿಸಬಾರದು ಬದಲಾಗಿ ಅವಳನ್ನು ಹೊನ್ನು ಎಂದು ತಿಳಿಯಿರಿ, ಪ್ರಾಚೀನ ಕಾಲದಿಂದಲೂ ಹಿಡಿದು ಈವರೆಗೂ ಸಹ ಮಹಿಳೆಯರು ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಉದಾಹರಣೆಗಾಗಿ ಝಾನ್ಸಿರಾಣಿ ಲಕ್ಷ್ಮೀಬಾಯಿ, ಓನಕೆ ಓಬವ್ವ, ಕಿತ್ತೂರ ರಾಣಿ ಚೆನ್ನಮ್ಮ, ಇಂದಿರಾ ಗಾಂಧಿ, ಕಲ್ಪನಾ ಚಾವ್ಲಾ, ಇಂತಹ ವೀರ ಮಹಿಳೆಯರು, ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮನೆಯಲ್ಲಿ ಒಂದು ಹೆಣ್ಣುಮಗು ಜನಿಸಿದರೆ, ಅವಳ ಹುಟ್ಟಿನ ಸ್ಮರಣಾರ್ಥ ಒಂದು ಗಿಡವನ್ನು ನೆಡಿರಿ ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಭಾರತಿ ಮಗುದಮ್, ಮಹಿಳೆ ಒಂದು ಬಾಳಿನ ಕಣ್ಣು, ಈ ಸೃಷ್ಟಿಗೆ ಕಾರಣ ಹೆಣ್ಣು, ಹೆಣ್ಣು ಕರುಣಾಮಯಿ, ಸಹನಾಮಯಿ ಎಂದು ವರ್ಣಿಸಿದರು. 1910 ರಲ್ಲಿ ಜೆಟ್ಲಿನ್ ಎಂಬ ಮಹಿಳೆ ಸಮಾನ ವೇತನಕ್ಕಾಗಿ ಹೋರಾಡಿದರು. ಅನಾದಿ ಕಾಲದಲ್ಲೂ ಸಹ ಮಹಿಳೆಯರಿಗೆ ಉತ್ತಮ ಸ್ಥಾನ ಮಾನವಿತ್ತು. ಶಿವಶರಣರಾದ ಬಸವಣ್ಣನವರು ತಮ್ಮ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರು ಹೆಣ್ಣು–ಗಂಡು ಒಂದು ತೇರಿನ ಎರಡೂ ಚಕ್ರಗಳು, ಎರಡೂ ಸಮವಾಗಿ ಹೋಗಬೇಕು ಎಂದು ಅಭಿಪ್ರಾಯಪಟ್ಟರು. ಈಗಿನ ಕಾಲದಲ್ಲಿ ಹೆಣ್ಣು

ಮಕ್ಕಳಿಗಾಗಿ ಸರ್ಕಾರ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ ಆದ್ದರಿಂದ ಮಹಿಳೆಯರು ಆ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಮೃತಾ ಸರ್ವಿ, ಇವರು ಹೆಣ್ಣು ಒಂದು ಅದ್ಭುತ ಶಕ್ತಿ, ಹೆಣ್ಣಿಗೆ ಇನ್ನೊಂದು ಜೀವಕ್ಕೆ ಜನ್ಮ ನೀಡುವ ಶಕ್ತಿ ಇದೆ. ನಾರಿಯು ಎಲ್ಲಿ ಪೂಜಿಸಲ್ಪಡುತ್ತಾಳೋ ಅಲ್ಲಿ ದೇವರು ನೆಲೆಸಿರುತ್ತಾರೆ, ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆ ಅಪಾರ, ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆ ಸಾಧನೆ ಗೈದಿದ್ದಾಳೆ ಎಂದು ತಿಳಿಸಿದರು, ಅವರು ಅರುಣಿಮಾ ಸಿನ್ಹಾರವರು ಅಪಘಾತದಲ್ಲಿ ಕಾಲು ಕಳೆದುಕೊಂಡರೂ ಸಹ ಹಿಂಜರಿಯದೆ ಮೌಂಟ ಎವರೆಸ್ಟ ಶಿಖರವನ್ನು ಹತ್ತಿ ಸಾಧನೆಗೈದು ಬೇರೆಯವರಿಗೆ ಸ್ಫೂರ್ತಿಯಾದ ಕಥೆಯನ್ನು ಸಭೆಯಲ್ಲಿ ಹಂಚಿಕೊಂಡರು.

ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದ ಶ್ರೀಮತಿ ಸರಸ್ವತಿ. ಎನ್. ರವಿ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಇವರು, ಪ್ರಸ್ತುತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಾದ– ವರದಕ್ಷಿಣೆ, ಕೌಟುಂಬಿಕ ಕಲಹ, ಲೈಂಗಿಕ ದೌಜನ್ಯ, ಶಿಕ್ಷಣದಿಂದ ವಂಚಿತರಾಗುವುದು, ಆಧುನಿಕ ಜಗತ್ತಿನ ಪ್ರಲೋಭಗಳು, ಸಾಮಾಜಿಕ ಮತ್ತು ಆರ್ಥಿಕ ಕಟ್ಟುಪಾಡುಗಳು, ಭ್ರೂಣ ಹತ್ಯೆ, ಬಾಲ್ಯ ವಿವಾಹಗಳ ಬಗ್ಗೆ ತಿಳಿಸಿ, ಸ್ತ್ರೀಯರು ಈ ಎಲ್ಲಾ ಸಮಸ್ಯೆಗಳ ವಿರುದ್ಧ ಶ್ರಮಿಸುತ್ತ ಹಲವಾರು ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿದ್ದಾರೆ ಎಂದು ಮಹಿಳೆಯರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರದ ಅವಧಿಯಲ್ಲಿ ಸ್ತ್ರೀ–ಸಮಸ್ಯೆ, ಸಮಾನತೆ ಹಾಗೂ ಸಾಧನೆ ಕುರಿತು ಶ್ರೀಮತಿ ಸರಸ್ವತಿ. ಎನ್. ರವಿ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಇವರು ಉಪನ್ಯಾಸ ನೀಡಿದರು.

ತದ ನಂತರ ಮಹಿಳಾ ಸಬಲೀಕರಣದಲ್ಲಿ ಉಂಟಾಗುವ ಅಡ್ಡಿ ಆತಂಕಗಳ ಬಗ್ಗೆ ಶ್ರೀಮತಿ ಶಾಂತಿ ನಾಯಕರ, ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಮಹಾದೇವಿ ಬೋವಿ, ನಿರ್ದೇಶಕರು, ಶುಭ ಮಂಗಳ ಮಹಿಳಾ ವಿವಿಧ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ ಮತ್ತು ಶ್ರೀಮತಿ ಶಿಲ್ಪಾ ಹೊಸಮನಿ, ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ, ಇವರು ಮಹಿಳೆಯರು ಶಿಕ್ಷಣವನ್ನು ಪಡೆಯದಿದ್ದರೆ ಆಗುವ ಅನಾಹುತಗಳ ಬಗ್ಗೆ ತಮ್ಮ ಏಕಪಾತ್ರ ಅಭಿನಯ ಮಾಡುವುದರ ಮೂಲಕ ಮನರಂಜನೆ ನೀಡುವುದಲ್ಲದೇ ಮಹಿಳೆಯರು ಶಿಕ್ಷಣ ಪಡೆಯಿರಿ, ಶಿಕ್ಷಣದಿಂದ ವಂಚಿತರಾಗದಿರಿ ಎಂಬ ಸಂದೇಶವನ್ನು ಸಾರಿದರು. ಮಧ್ಯಾಹ್ನದ ಅವಧಿಯಲ್ಲಿ ವಿಷಯವಾರು ಸಾಮೂಹಿಕ ಚರ್ಚೆ (ಸಂವಾದ ಕಾರ್ಯಕ್ರಮ) ಆಯೋಜಿಸಲಾಗಿತ್ತು.



## ಸಂವಾದ ಕಾರ್ಯಕ್ರಮ

ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಇವರು ಸಂವಾದಕಾರರಾಗಿ ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂವಾದದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಸೀತವ್ವ ಜೋಡಟ್ಟಿ, ಇವರು ತಮ್ಮ ಅಭಿಪ್ರಾಯವನ್ನು ಸಭೆಗೆ ಮಂಡಿಸಿದರು.

ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಶಾಂತಿ ನಾಯಕರ, ಇವರು ಈ ವಿಷಯ ಕುರಿತು ತಮ್ಮ ಅಭಿಪ್ರಾಯ ಹೇಳಿದರು. ಸ್ತ್ರೀ ಆರೋಗ್ಯ, ವಿಷಯದ ಕುರಿತು ಡಾ॥ ನಮೃತಾ ಸರ್ವಿ, ಯವರು ಸಂವಾದ ನಡೆಸಿದರು. ಮಹಿಳೆಯರ ಆರೋಗ್ಯಕ್ಕಾಗಿ ಸರಕಾರಿ ಸೌಲಭ್ಯಗಳು ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಭಾರತಿ ಮಗದುಮ್, ಇವರು ಮಾಹಿತಿಗಳನ್ನು ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಅಶ್ವಿನಿ ಕಮ್ಮಾರ, ಇವರು ನಡೆಸಿಕೊಟ್ಟರು, ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ, ಇವರು ನಡಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ 50 ಸೌಹಾರ್ದ ಸಹಕಾರಿಗಳಿಂದ 144 ಮಹಿಳೆಯರು ಭಾಗವಹಿಸಿದ್ದರು.

## ಕಲಬುರಗಿ ವಿಭಾಗ



## ಪ್ರಕೃತಿಯ ಪ್ರತಿರೂಪವೇ ಮಹಿಳೆ – ಜ್ಯಾಂತಿಕರ್

**ಬೀದರ:** ಬೀದರ ನಗರದ ನೌಬಾದ ಹತ್ತಿರದ ಸಹಾರ್ದ ತರಬೇತಿ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೀದರ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತ್ತು.

ಕಾರ್ಯಕ್ರಮವನ್ನು ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಶಾಲಿನಿ ಚಿಂತಾಮಣಿ ಉದ್ಘಾಟಿಸಿ ಮಾತನಾಡಿ ಮಹಿಳೆ ಸೃಷ್ಟಿಯ ಪ್ರತಿರೂಪ ಮಹಿಳೆಗೆ ಅವಕಾಶ ನೀಡಿದಾಗ ಪುರುಷರಂತೆ ಸಮಾನವಾಗಿ ನಿಲ್ಲಬಲ್ಲರು. ಇಂದು ಪ್ರತಿ

ಕ್ಷೇತ್ರದಲ್ಲಿಯು ಮಹಿಳೆ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ. ಅವಕಾಶ ಸಿಕ್ಕಾಗ ಅದನ್ನು ಸದುಪಯೋಗ ಪಡೆಸಿಕೊಂಡು ಮಾದರಿಯಾಗಿ ಕಾರ್ಯನಿರ್ವಹಿಸುವ ಮೂಲಕ ಮಹಿಳೆ ಯಾವುದರಲ್ಲಿಯೂ ಕಡಿಮೆ ಇಲ್ಲ ಎಂಬತೆ ಕಾರ್ಯ ಮಾಡಿತೋರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು. ಮಹಿಳೆಗೆ ಗೌರವ ಇರುವ ಕಡೆ ಎಲ್ಲಾ ಕೆಲಸಗಳು ಸರಳವಾಗಿ ಮುಗಿಯುತ್ತದೆ. ಸ್ತ್ರೀ ಕೇವಲ ಮನೆಗೆಲಸಕ್ಕೆ ಮಾತ್ರ ಸಿಮೀತವಾದಗೆ ಸಮಾಜದ ಎಲ್ಲಾ ರಂಗದಲ್ಲಿ ಅಭಿವೃದ್ಧಿಹೊಂದಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಅವರು ಮಾತನಾಡಿ ಎಲ್ಲಿ ನಾರಿಯರಿಗೆ ಪೂಜಿಸುತ್ತಾರೆ ಅಲ್ಲಿ ದೇವತೆಗಳು ನೆಲಸುತ್ತಾರೆ. ಪ್ರಕೃತಿಯ ಪ್ರತಿರೂಪವೇ ಮಹಿಳೆ ತಾಯಿಯಾಗಿ, ಮಡದಿಯಾಗಿ, ಮಗಳಾಗಿ, ಸೋಸೆಯಾಗಿ ಪ್ರಮುಖವಾದ ಜವಾಬ್ದಾರಿ ವಹಿಸಿಕೊಳ್ಳುವುದರ ಮೂಲಕ ಉತ್ತಮ ಸಮಾಜ ಕಟ್ಟುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾಳೆ, ಇಂದು ಅಂತಹ ಸಾಧನೆ ಮಾಡಿರುವ ಮಹಿಳೆಯನ್ನು ನೇನೆಯುವ ಮೂಲಕ ಅವರ ಆದರ್ಶಗಳನ್ನು ಸಮಾಜದಲ್ಲಿ ಬಿತ್ತಬೇಕಾಗಿದೆ, ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆಯ ಶ್ರಮ ಇರುತ್ತದೆ ಎಂದು ತಿಳಿಸಿದರು.

ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದಾಳೆ ರಕ್ಷಣಾ ಸಚಿವರಾಗಿ, ವಿದೇಶಾಂಗ ಸಚಿವರಾಗಿ, ಮುಂತಾದ ದೇಶದ ಅತ್ಯುನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಮಹಿಳೆಗೆ ಗೌರವ ಮತ್ತು ಅವಕಾಶವನ್ನು ಕೊಡುವ ಮೂಲಕ ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಅಭಿವೃದ್ಧಿಯತ್ತ ಸಾಗಿಸಬೇಕಾಗಿದೆ. ಈ ರೀತಿಯಲ್ಲಿ ಎಲ್ಲಾ ರಂಗದಲ್ಲಿ ಅಭಿವೃದ್ಧಿಯಾಗಿದಾಗ ಮಾತ್ರ ಮಹಿಳಾ ದಿನಕ್ಕೆ ವಿಶೇಷ ಅರ್ಥ ಬರುತ್ತದೆ ಎಂದು ಕಾರ್ಯಕ್ರಮದ ಮುಖ್ಯ ಅಥಿತಿ ಸ್ಥಾನವನ್ನು ವಹಿಸಿಕೊಂಡಿದ ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿ,. ಬೆಂಗಳೂರು ಇದರ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು ಆದ ಶ್ರೀಮತಿ ಶಕುಂತಲಾ ಬೆಲ್ದಾಳೆ ಇವರು ಮಾತನಾಡಿ ಸ್ತ್ರೀ ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಪುರುಷ ಪ್ರಧಾನ ಸಮಾಜ ಇಂದಿಗು ಅವಳಿಗೆ ಸಂಪೂರ್ಣ ಸ್ವತಂತ್ರ ನೀಡಿಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆ ಚುನಾಯಿತರಾಗಿದ್ದರು ಅವರ ಗಂಡಂದಿರು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ ಅವರೆ ಅವರ ಹೆಸರಲ್ಲಿ ಅಧಿಕಾರ ಚಲಾಯಿಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು. ನಮ್ಮ ಹಕ್ಕುಗಳಿಗೆ ಹೊರಾಟದ ಅಗತ್ಯವಿದೆ, ಮಹಿಳೆಗೆ ಕೇವಲ ಮನೆಕೆಲಸಕ್ಕೆ ಮೀಸಲಾಗಿಲ್ಲ ಎಂಬುದನ್ನು ನಾವು ಕೆಲಸ ಮಾಡಿತೋರಿಸಬೇಕಾಗಿದೆ ಎಂದರು. ಮಹಿಳೆಗೆ ಅವಕಾಶ ನೀಡುವಲ್ಲಿ ಇಂದಿಗೂ ನಮ್ಮ ಸಮಾಜ ಸಂಪೂರ್ಣ ಸ್ವಾತಂತ್ರ ನೀಡುತ್ತಿಲ್ಲ ಆದರಿಂದಲೇ ಅನೇಕ ಅವಕಾಶದಿಂದ ವಂಚಿತರಾಗುತ್ತಿದ್ದಾರೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿರುವ ಶ್ರೀಮತಿ ಪಾವನಿ ಕುಲ್ಕರ್ಣಿಯವರು ಸಾಮಾಜಿಕ ಭದ್ರತೆಯಲ್ಲಿ ಮತ್ತು ಪಿಂಚಣಿಯಲ್ಲಿನ ಸೌಲಭ್ಯಗಳು ಅವುಗಳನ್ನು ಯಾವ ರೀತಿಯಲ್ಲಿ ಪಡೆಯಬೇಕು ಎಂದು ಮಾಹಿತಿ ನೀಡಿದರು.

ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಸ್ವಸಹಾಯ ಕಲ್ಪನೆ ಅತ್ಯಗತ್ಯ ಉಳಿತಾಯ ಕಲ್ಪನೆಯನ್ನು ಇಂದು ಎಲ್ಲರಲ್ಲಿ ಮೂಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳೆ ಸ್ವಸಹಾಯದ ಮೂಲಕ ಸಹಕಾರಿ ರಂಗ ಬಲಗೊಳಿಸಬೇಕಾಗಿದೆ ಎಂದು ಸಂಪನ್ಮೂಲ ವ್ಯಕ್ತಿಯಾದ ಸಿರಾಜೋದಿನ ತಿಳಿಸಿದರು. ಇದೇ ಸಂದರ್ಭದಲ್ಲಿ ಭಾರತದಲ್ಲಿ ಸ್ವಸಹಾಯ ಪದ್ದತಿ ಬೆಳೆದು ಬಂದಿರುವ ದಾರಿ ಯಶಸ್ವಿಯ ಕುರಿತು ಮಾಹಿತಿ ನೀಡಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಸ್ವಾಗತ ಮತ್ತು ಪ್ರಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ರಾಜಶೇಖರ ಹೆಚ್ ನಡೆಸಿಕೊಟ್ಟರು. ಸಭೆಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀಮತಿ ಸವಿತಾ ಜಿ.ಕೆ, ಜಗನಾಥ ಕರಂಜೆ, ಕ್ರಾಂತಿಕುಮಾರ ಕುಲಾಲ, ನಂದಾವಿವೇಕಾನಂದ, ಸತೀಷ ಪಾಟೀಲ್, ಮುಖ್ಯಕಾರ್ಯನಿರ್ವಾಹಕರಾದ ಅಮೃತ ಹೊಸಮನಿ, ಸೌಹಾರ್ದ ಜಿಲ್ಲಾ ಸಂಯೋಜಕರಾದ ವೀರಶೆಟ್ಟಿ, ಸಿಬ್ಬಂದಿಗಳಾದ ಮಲ್ಲಿನಾಥ ಪಾಟೀಲ್ ಉಪಸ್ಥಿತರಿದರು. ಕು. ವಿಜಯಲಕ್ಷ್ಮೀ ಪ್ರಾರ್ಥಿಸಿದರು, ವೀರಶಟ್ಟಿ ನಿರೂಪಿಸಿದರು. ಮಮತಾ ಹುಗ್ಗಿ ವಂದಿಸಿದರು.

ಇಂದಿನ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಜಿಲ್ಲೆಯ ಸಹಕಾರಿಗಳಿಂದ 73 ಜನ ಮಹಿಳಾ ಪ್ರತಿನಿಧಿಗಳು ಮಹಿಳಾ ಮುಖ್ಯಕಾರ್ಯನಿರ್ವಾಹಕರು ಒಕ್ಕೂಟದ ನಿರ್ದೇಶಕರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

## ಮೈಸೂರು ವಿಭಾಗ



**ಮೈಸೂರು:** ಮೈಸೂರು ಪ್ರಾಂತದಲ್ಲಿ ಕಾರ್ಯನಿರ್ವಹಿಸುವ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳು ಮತ್ತು ಮಹಿಳಾ ಸಿಬ್ಬಂದಿಗಳಿಗಾಗಿ ದಿನಾಂಕ: 08.03.2019ರಂದು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಹೋಟೆಲ್ ಸಿಪಾಯಿ ಗ್ರಾಂಡ್, ಎಂ.ಜಿ.ರಸ್ತೆ, ಜೆಎಸ್ಎಸ್ ಆಸ್ಪತ್ರೆ ಎದುರು ಮೈಸೂರಿನಲ್ಲಿ ಅಯೋಜಿಸಲಾಗಿತ್ತು. ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಡಾ॥ ಅರ್ಪಿತ ಪ್ರತಾಪಸಿಂಹ ಹಾಗೂ ವಿಶೇಷ ಆಹ್ವಾನಿತರಾಗಿ ಶ್ರೀಯುತ ಹೆಚ್. ವಿ ರಾಜೀವ್ ರವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಮಹಿಳಾ ಸಹಕಾರಿ ಬ್ಯಾಂಕ್ ಲಿ., ಮೈಸೂರು ಇದರ ಅಧ್ಯಕ್ಷರಾದ ಶ್ರೀಮತಿ ಡಾ॥ ಎಂ.ವಿ. ಬೃಹದಂಬ

ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಹೇಮಾನಂದೀಶ್, ಸಮಾಜ ಸೇವಕರು, ಶ್ರೀಮತಿ ಡಾ॥ ಶ್ವೇತ ಮಡಪ್ಪಾಡಿ, ಜಾನಪದ ಕಲಾವಿದರು ಮೈಸೂರು. ಹಾಗೂ ಡಾ॥ ಆರ್. ಹೆಚ್ ಪವಿತ್ರ ಸಹಪ್ರಾಧ್ಯಪಕರು ಮೈಸೂರು ಆಗಮಿಸಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಶ್ರೀಯುತ ವೈ. ಕುಮಾರ್ ಮಾನ್ಯ ಪ್ರಾಂತೀಯ ಅಧಿಕಾರಿ, ಮೈಸೂರು ಇವರು ನಡೆಸಿಕೊಟ್ಟರು. ನಂತರದಲ್ಲಿ ನಡೆದ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಡಾ॥ ಆರ್.ಹೆಚ್ ಪವಿತ್ರ ಸಹಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತ ಗಂಗೋತ್ರಿ ಮೈಸೂರು ಇವರು ಭಾಗವಹಿಸಿ "ಮಹಿಳಾ ಸಬಲೀಕರಣ" ಹಾಗೂ "ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ" ಕುರಿತು ವಿಶೇಷ ಕಾರ್ಯಗಾರ ನೀಡಿದರು. ತದ ನಂತರದದಲ್ಲಿ ಸಮರ್ಥ ಮತ್ತು ಸಮೃದ್ಧ ಭಾರತಕ್ಕಾಗಿ ಮಹಿಳೆಯರ ಪಾತ್ರ ವಿಷಯದ ಕುರಿತು ಸಂವಾದ ಕಾರ್ಯಕ್ರಮ ಜರುಗಿತು. ಸಂವಾದದಲ್ಲಿ ಶ್ರೀಮತಿ ಡಾ. ಎಂ.ಶಾರದ ಪ್ರಾಂಶುಪಾಲರು, ನಟರಾಜ ವಸತಿ ಮತ್ತು ಪ್ರಥಮ ದರ್ಜೆ ಕಾಲೇಜು ಮೈಸೂರು, ಹೆಚ್.ವಿ.ಶ್ವೇತಾ, ಸನ್ನದು ಲೆಕ್ಕಪರಿಶೋಧಕರು, ಮೈಸೂರು ಹಾಗೂ ಶ್ರೀಮತಿ ಡಾ॥ ಆರ್.ಹೆಚ್ ಪವಿತ್ರ ಸಹಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತ ಗಂಗೋತ್ರಿ, ಮೈಸೂರು ಇವರು ಭಾಗವಹಿಸಿದ್ದರು. ಕು. ರೇಣುಕ ಎಂ.ವಿ ರವರು ನಿರೂಪಿಸಿದರು. ಶ್ರೀಯುತ ಶಂಕರ್ ಎಸ್ ರವರು ವಂದಿಸಿದರು. ಕಾರ್ಯಾಗಾರದಲ್ಲಿ ಒಟ್ಟು 35 ಸೌಹಾರ್ದ ಸಹಕಾರಿಯಿಂದ 60 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಸಂಯುಕ್ತ ಸಹಕಾರಿಯಿಂದ ಈ ರೀತಿಯ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಆಯೋಜಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಕಾರ್ಯಕ್ರಮದಲ್ಲಿ ಕಾನೂನು ಅಧಿಕಾರಿಯಾದ ಶ್ರೀಯುತ ಶಿವಕುಮಾರ್ ಬಿರಾದಾರ, ಹಿರಿಯ ಅಧಿಕಾರಿಯಾದ ಶ್ರೀಯುತ ಗುರುಪ್ರಸಾದ್ ಬಂಗೇರರವರು, ಮತ್ತು ಮೈಸೂರು ಜಿಲ್ಲೆಯ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ಹಾಗೂ ಮೈಸೂರು ಪ್ರಾಂತದ ಎಲ್ಲಾ ಸಿಬ್ಬಂದಿಗಳು ಭಾಗವಹಿಸಿದ್ದರು.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಣೆ



ಶಿವಮೊಗ್ಗ: ವಾತ್ಸಲ್ಯ ರೈತ ಮಹಿಳಾ ಸೌಹಾರ್ದ ಸಹಕಾರಿ ನಿ., ಆಯನೂರು, ಸಹಕಾರಿಯಲ್ಲಿ ದಿನಾಂಕ 08.03.2019ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.



ಬೆಂಗಳೂರು: ಜನನಿಧಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯಲ್ಲಿ ದಿನಾಂಕ 08.03.2019ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.



ವಿಜಯಪುರ: ಶ್ರೀ ವರಮಹಾಲಕ್ಷ್ಮೀ ಮಹಿಳಾ ಸಹಕಾರಿ ನಿ., ವಿಜಯಪುರ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 08.03.2019ರಂದು ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಕೆ. ಬಿದರಕುಂದಿ ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಚಂದ್ರಿಕಾ ದೊಡ್ಡಿಹಾಳ, ಉಪನ್ಯಾಸಕಿ, ಹಾಗೂ ಶ್ರೀ ಮಲ್ಲಿಕಾರ್ಜುನ ಬಿದರಕುಂದಿ, ಅಕೌಟೆಂಟ್ ಇವರು ಭಾಗವಹಿಸಿದರು ಹಾಗೂ ಇಶಾನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ. ಇದರ ಅಧ್ಯಕ್ಷರಾದ ಶ್ರೀ ಕೆ. ಬಿ. ಬಿದರಕುಂದಿ, ಶ್ರೀ ಎನ್, ಎಮ್ ಹಿರೇಮಠ, ಬಿ.ಎಸ್. ಅಮೀನಗಡ, ಶ್ರೀ ಎಮ್,ಎಮ್, ಹಿರೇಮಠ ಇವರು ಉಪಸ್ಥಿತರಿದ್ದರು

## ಪ್ರವರ್ತಕರ ಸಭೆ



ಮಂಡ್ಯ: ಉದ್ದೇಶಿತ ನುಡಿ ಭಾರತಿ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯು ನುಡಿ ಭಾರತಿ ಪತ್ರಿಕೆ ಸಂಪಾದಕರಾದ ಬಸವನಗೌಡ ರವರು ಅಧ್ಯಕ್ಷತೆಯಲ್ಲಿ ನಡೆಯಿತು. ಒಟ್ಟು 14 ಸದಸ್ಯರು ಭಾಗವಹಿಸಿದರು.



ಮಂಡ್ಯ: ನಾಗಮಂಗಲ ತಾಲ್ಲೂಕು ಉದ್ದೇಶಿತ ಶಿಕ್ಷಣ ಇಲಾಖೆ ಪದವೀಧರರ ಸೌಹಾರ್ದ ಸಹಕಾರಿಯ ಪ್ರವರ್ತಕರು ಸಭೆಯು ಸರ್ಕಾರಿ ನೌಕರರ ಸಹಕಾರ ಸಂಘ ಉಪಾಧ್ಯಕ್ಷರಾದ ಶಿವಣ್ಣ ರವರ ನೇತೃತ್ವದಲ್ಲಿ ನಡೆಯಿತು..

## ಮೈಸೂರು ವಿಶ್ವವಿದ್ಯಾಲಯದ ಥರ್ಡ್‌ಸೆಕ್ಟರ್ ಸಂಪನ್ಮೂಲ ಸಂಶೋಧನೆ ಕೇಂದ್ರ ಮೈಸೂರು ಇವರ ನೇತೃತ್ವದಲ್ಲಿ ಅಂತರ ರಾಷ್ಟ್ರೀಯ ವಿಚಾರ ಗೋಷ್ಠಿ – ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಯೋಗ.

### ಸುಸ್ಥಿರ ಅಭಿವೃದ್ಧಿ ಸಾಧಿಸುವಲ್ಲಿ ಸಹಕಾರಿಗಳ ಪಾತ್ರ ಮಹತ್ವದ್ದು – ಪ್ರೊ. ಹೇಮಂತಕುಮಾರ, ಕುಲಪತಿಗಳು

ದಿನಾಂಕ 01.04.2019 ರಂದು ಮೈಸೂರಿನ ವಿಜ್ಞಾನ ಭವನದಲ್ಲಿ "ಸುಸ್ಥಿರ ಅಭಿವೃದ್ಧಿ ಮತ್ತು ಸಹಕಾರ ಸಂಸ್ಥೆಗಳು ಎಂಬ ವಿಷಯವಾಗಿ ಅಂತರ ರಾಷ್ಟ್ರೀಯ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಹೇಮಂತಕುಮಾರ ರವರು ನೇರವೇರಿಸಿ ದೇಶದ ಸುಸ್ಥಿರ ಅಭಿವೃದ್ಧಿಯ ಬಗ್ಗೆ ಚಿಂತನೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನವು ನಡೆಯುವುದು ಅವಶ್ಯಕ. ಈ ಪ್ರಕ್ರೀಯೆಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರವು ಅತ್ಯಂತ ಮಹತ್ವದಾಗಿದೆ ಎಂದು ತಿಳಿಸಿದರು. ಸಹಕಾರಿ ಕ್ಷೇತ್ರ ಬೆಳವಣಿಗೆಯಾಗುವುದರ ಜೊತೆಗೆ ಸುಸ್ಥಿರ ಅಭಿವೃದ್ಧಿಯನ್ನು ಗಮನಿಸಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಸಂಯೋಜಕರಾದ ಪ್ರೊ ಯಶವಂತ ಡೊಂಗ್ರೆಯವರು ಅತಿಥಿಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿ ಕಾರ್ಯಕ್ರಮದ ಸ್ವರೂಪವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖ ವಿಷಯಗಳ ಉಪನ್ಯಾಸಕಾರರಾಗಿ ಅಂತರ ರಾಷ್ಟ್ರೀಯ ಮೈತ್ರಿಸಂಸ್ಥೆಯ ಡಾ. ಬಾಲು ಅಯ್ಯರ್ ಆಸ್ಟ್ರೇಲಿಯ ದೇಶದ ಡಾ. ಅಂಥೋನಿ ಜೆನ್ಸಿನ್ ಇಂಡೋನೇಶಿಯಾದ ರಾಬಿ ತುಳುಸ್, ಜಪಾನಿನ ಡಾ. ಅಕೀರಾ ಕುರಿಮೋಟೊ, ಆಸ್ಟ್ರೇಲಿಯ ದೇಶದ ಶ್ರೀ ಮಾರಿಸ್ ಅಲ್ವಮಾನ್, ಇವರುಗಳ ಭಾಗವಹಿಸಿ ಉಪನ್ಯಾಸ ನೀಡಿದರು ಮತ್ತು



ಪ್ರತಿನಿಧಿಗಳ ಜೊತೆಗೆ ವಿಚಾರ ವಿನಿಮಯ ಮಾಡಿದರು.

ಈ ಕಾರ್ಯಕ್ರಮದಕ್ಕೆ ಸಂಯುಕ್ತ ಸಹಕಾರಿಯ ಸಹಯೋಗ ನೀಡುವುದರ ಜೊತೆಗೆ ಪ್ರತಿನಿಧಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯ ಶ್ರೀ ಸಿ. ಎಸ್ ಪರಶಿವ ಮೂರ್ತಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ತರಬೇತಿ ಅಧಿಕಾರಿ ಶ್ರೀ ವಿ.ಜೆ ಕಾರಕೂನ್ ಇವರುಗಳು ಭಾಗವಹಿಸಿದರು. ವಿವಿಧ ರಾಜ್ಯಗಳ, ಸಂಸ್ಥೆಗಳ, 68 ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಭಾಗವಹಿಸಿದ ಅಂತರ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿಗಳು




ಅಂತರ ರಾಷ್ಟ್ರೀಯ ಸೆಮಿನಾರ್‌ನಲ್ಲಿ ಭಾಗವಹಿಸಿದ ಪ್ರತಿನಿಧಿಗಳು



## ಸಪ್ತರ್ಷಿ ಸೌಹಾರ್ದ ಸಹಕಾರಿಗೆ ಭೇಟಿ

ಪ್ರೊ. ಅಕೀರಾ ಕುರಿಮೊಟೊ ಹಾಗೂ ಇಂಡೊನೆಶಿಯಾದ ರಾಬಿ ತುಳುಸ್ ರವರು ಮೈಸೂರು ವಿಶ್ವವಿದ್ಯಾಲಯ ಥರ್ಡ್ ಸೆಕ್ಟರ್ ರಿಸರ್ಚ್ ವಿಭಾಗದ ಮುಖ್ಯಸ್ಥ ಶ್ರೀ ಯಶವಂತ ಡೊಂಗ್ರೆಯವರೊಂದಿಗೆ ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿಗೆ ಭೇಟಿ.

# 17ನೇ ಲೋಕಸಭಾ ಚುನಾವಣೆ – 2019

## ತಪ್ಪದೇ ಮತದಾನ ಮಾಡಿ

ದೇಶದ ಲೋಕಸಭಾ ಚುನಾವಣೆಗೆ ನಿಗದಿಯಾಗಿದೆ ನಮ್ಮದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ದೇಶ. ದೇಶದ 130 ಕೋಟಿ ಜನರಲ್ಲಿ ಸುಮಾರು 90 ಕೋಟಿ ಜನರು ಮತದಾನ ಮಾಡಲು ಹಕ್ಕುಳ್ಳವರು. 543 ಜನ ಪ್ರತಿನಿಧಿಗಳನ್ನು ಆಯ್ಕೆಮಾಡುವ ಅಧಿಕಾರ ಹೊಂದಿದವರು ಮತದಾನದ ಬಲದಿಂದಲೇ ಉತ್ತಮ ಸರಕಾರಿಗಳ ರಚನೆ ಸಾಧ್ಯ ಎಂಬುದು ಎಲ್ಲರೂ ತಿಳಿದಿರುವ ವಿಷಯ.

ಆದ್ದರಿಂದ ಇಂತಹ ಪವಿತ್ರವಾದ ಕಾರ್ಯದಲ್ಲಿ ಯಾವುದೇ ಆಮಿಷಗಳಿಗೆ ಬಲಿಯಾಗದೇ ನಿಮ್ಮ ಪಾಲಿನ ಕರ್ತವ್ಯವನ್ನು ಮತದಾನ ಮಾಡುವುದರ ಮೂಲಕ ನಿರ್ವಹಿಸಬೇಕೇಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ವಿನಂತಿಸಿದ್ದಾರೆ.

ನಿಮ್ಮ ವಿಧಾನಸಭಾ ಕ್ಷೇತ್ರ ಮತ್ತು ಮತಗಟ್ಟೆ ಹಾಗೂ ಇನ್ನಿತರ ವಿವರಗಳನ್ನು ತಿಳಿಯಲು ನಿಮ್ಮ ಗುರುತಿನ ಚೀಟಿಯ ಸಂಖ್ಯೆಯನ್ನು ಈ ಕೆಳಗೆ ತಿಳಿಸಿರುವ ನಮೂನೆಯಲ್ಲಿ 9731979899 ಸಂಖ್ಯೆಗೆ ಎಸ್‌ಎಂಎಸ್ ಮುಖಾಂತರ ಕಳುಹಿಸಿ

KAEPIC<"space"> ಗುರುತಿನ ಚೀಟಿ ಸಂಖ್ಯೆ

ಉದಾಹರಣೆ: KAEPIC XYZ1509201

ನಿಮ್ಮ VOTE ಮಾಡಬೇಕಾದ ಭಾಗದ ಸಂಖ್ಯೆ, ಮತಗಟ್ಟೆ ಸಂಖ್ಯೆ ಮತ್ತು VOTER LIST ನಲ್ಲಿನ ನಿಮ್ಮ ಕ್ರಮ ಸಂಖ್ಯೆಯನ್ನು ತಿಳಿಯಲು ಈ ಕೆಳಗಿನ ಲಿಂಗ್ ನಿಂದ ತಿಳಿದುಕೊಳ್ಳಬಹುದಾಗಿದೆ.




ceokarnataka.kar.nic.in/SearchWithEpicNo_New.aspx#

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ

## ಪ್ರಬಂಧ ಸ್ಪರ್ಧೆಯ ವಿಜೇತರು

ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಪ್ರಬಂದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಉತ್ತಮ ಪ್ರಬಂಧಗಳಿಗೆ ಬಹುಮಾನವಾಗಿ 3000/–, 2000/–, 1000/–, 750/–ಗಳ ಮೊದಲನೇ, ಎರಡನೇ, ಮೂರನೇ ಹಾಗೂ ಮೂರು ಸಮಾಧಾನಕರ ನಗದು ಬಹುಮಾನವನ್ನು ಸಂಯುಕ್ತ ಸಹಕಾರಿ ವತಿಯಿಂದ ಕೊಡಲಾಗುವುದೆಂದು ತಿಳಿಸಿದ್ದರು. ದಿನಾಂಕ 08.03.2019ರಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಪ್ರಬಂದ ಸ್ಪರ್ಧೆಯ ವಿಜೇತರಿಗೆ ಬಹುಮಾನವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ರವರು ವಿತರಿಸಿದರು.

ಪ್ರಥಮ ಬಹುಮಾನ



ಶ್ರೀಮತಿ ಸವಿತ ಎನ್. ಇ

ದ್ವಿತೀಯ ಬಹುಮಾನ



ಶ್ರೀ ವೆಂಕಟೇಶನಾಯ್ಕ

ತೃತೀಯ ಬಹುಮಾನ



ಶ್ರೀ ಪಾಲರಾಜ ಎ.

ಸಮಾಧಾನಕರ ಬಹುಮಾನ



ಶ್ರೀ ಶಂಕರ ಎಸ್

ಸಮಾಧಾನಕರ ಬಹುಮಾನ



ಶ್ರೀಮತಿ ದಿವ್ಯ ಟಿ.

ಸಮಾಧಾನಕರ ಬಹುಮಾನ



ಕುಮಾರಿ ರೇಣುಕ ಎಂ.ವಿ.

# ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಶಾಸನಬದ್ಧ ಕಾರ್ಯಗಳು

- **ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ :** ಆರ್ಥಿಕ ವರ್ಷ ಮುಕ್ತಾಯವಾಗಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ, ಲೆಕ್ಕಪರಿಶೋಧನೆಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅಂತಿಮಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಆಡಳಿತ ಮಂಡಲಿಗೆ ಮಂಡಿಸಿ, ಅನುಮೋದನೆ ಪಡೆದುಕೊಂಡು ಏಪ್ರಿಲ್ 30ರೊಳಗಾಗಿ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕವಾಗಿರುವ ಲೆಕ್ಕಪರಿಶೋಧಕರಿಗೆ ಸಲ್ಲಿಸಿ, ಲೆಕ್ಕಪರಿಶೋಧನೆಯ ಕಾರ್ಯ ನಡೆಸಬೇಕಿದೆ.
- ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಇರುವ ಒಬ್ಬರು ಲೆಕ್ಕಪರಿಶೋಧಕರನ್ನು ಮುಂದಿನ ವರ್ಷದ ಲೆಕ್ಕಪರಿಶೋಧನೆಗಾಗಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಆಯ್ಕೆ ಮಾಡಿಕೊಂಡು, ಸದರಿಯವರಿಂದ ಲೆಕ್ಕಪರಿಶೋಧನೆ ಮಾಡಿಸಲು ಕ್ರಮ ಇಡುವುದು ಅಗತ್ಯ.
- **ವರ್ಷಾಂತ್ಯದ ಆರ್ಥಿಕ ಮಾಹಿತಿ ಸಲ್ಲಿಕೆ :** ಸಂಯುಕ್ತ ಸಹಕಾರಿಯು ಕಳುಹಿಸುವ ವರ್ಷಾಂತ್ಯದ ಆರ್ಥಿಕ ಮಾಹಿತಿ ನಮೂನೆಯು ತಲುಪಿದ ಕೂಡಲೇ ಭರ್ತಿ ಮಾಡಿ ಆದಷ್ಟು ಶೀಘ್ರವಾಗಿ ಸಂಯುಕ್ತ ಸಹಕಾರಿಯ ಆಯಾ ಭಾಗದ ಪ್ರಾಂತೀಯ ಕಛೇರಿಗಳಿಗೆ ಕಳುಹಿಸಲು ಕ್ರಮವಿಡುವುದು. ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಲು ಸೂಕ್ತ ಗಮನ ನೀಡಲು ಕೋರಲಾಗಿದೆ. ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನಗಳಲ್ಲಿ ತಮ್ಮ ಸಹಕಾರಿಯು ವಿವಿಧ ಅನರ್ಹತೆಗೊಳಗಾಗುವುದನ್ನು ತಪ್ಪಿಸಿ. ಈಗಾಗಲೇ ಹಿಂದಿನ ವರ್ಷಗಳಲ್ಲಿ ಪಾವತಿಸಿರದ ಸಹಕಾರಿಗಳು ಆದಷ್ಟು ಶೀಘ್ರವಾಗಿ ಪಾವತಿಸಲು ಸೂಕ್ತ ಕ್ರಮವಿಡುವುದು.
- **ಚುನಾವಣೆ ಮಾಹಿತಿ :** ತಮ್ಮ ಸಹಕಾರಿಯ ನಿರ್ದೇಶಕರ ಚುನಾವಣೆ/ಪದಾಧಿಕಾರಿಗಳ ಚುನಾವಣೆ 2019–20ನೇ ಸಾಲಿನಲ್ಲಿ ನಡೆಯಬೇಕಿದ್ದಲ್ಲಿ, ಅಗತ್ಯ ಪೂರ್ವ ತಯಾರಿ ಮಾಡಿಕೊಳ್ಳಿ. ಪದಾವಧಿ ಮುಕ್ತಾಯಕ್ಕೆ 180 ದಿಗಳ ಮೊದಲು ಸಹಕಾರಿಗಳ ಜಿಲ್ಲಾ ಚನಾವಣಾಧಿಕಾರಿಗಳಿಗೆ ಜಿಲ್ಲಾ ಉಪನಿಬಂಧಕರುಗಳಿಗೆ ಮಾಹಿತಿ ಸಲ್ಲಿಸಿ, ನಿಗದಿತ ಅವಧಿಯೊಳಗೆ ಚುನಾವಣೆ ನಡೆಯುವಂತೆ ನೋಡಿಕೊಳ್ಳಿ. ಚುನಾವಣಾ ಪ್ರಕ್ರಿಯೆ ಮುಗಿದ ತಕ್ಷಣ ಚುನಾವಣಾ ಫಲಿತಾಂಶವನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿ. 2018–19ನೇ ಸಾಲಿನಲ್ಲಿ ತಮ್ಮ ಸಹಕಾರಿಯ ನಿರ್ದೇಶಕರ/ಪದಾಧಿಕಾರಿಗಳ ಚುನಾವಣೆ ನಡೆದಿದ್ದಲ್ಲಿ, ಇದುವರೆಗೂ ವರದಿ ಸಲ್ಲಿಸದಿದ್ದಲ್ಲಿ ತಕ್ಷಣ ಕಳುಹಿಸಲು ಅಗತ್ಯ ಕ್ರಮವಿಡಿ.
- **ವರ್ಷದ ಪ್ರಥಮ ಮಂಡಲಿಯ ಸಭೆಯಲ್ಲಿ ಸಹಕಾರಿಯ ನಿರ್ದೇಶಕರು ಬಹಿರಂಗಪಡಿಸಬೇಕಾದ ವಿಷಯ :** ಎಲ್ಲಾ ಸೌಹಾರ್ದ ಸಹಕಾರಿಗಳ ನಿರ್ದೇಶಕರು ತಮ್ಮ ಸಹಕಾರಿಯ ಪ್ರತಿ ಸಹಕಾರಿ ವರ್ಷದ ಮೊದಲನೆಯ ಆಡಳಿತ ಮಂಡಳಿಯ ಸಭೆಯಲ್ಲಿ ತಮ್ಮ ಹಾಗೂ ತಮ್ಮ ಹತ್ತಿರದ ಸಂಬಂಧಿಗಳ ವ್ಯವಹಾರ ಹಾಗೂ ಆಸಕ್ತಿ ಇರುವ ಸಂಸ್ಥೆಗಳ ವಿವರ ಮತ್ತು ಪದಾಧಿಕಾರಿಗಳಾಗಿರುವ ಸಂಸ್ಥೆಗಳ ವಿವರಗಳನ್ನು ಬಹಿರಂಗಗೊಳಿಸತಕ್ಕದ್ದು. ಅಂತಹ ವಿವರಗಳನ್ನು ಮಂಡಳಿಯ ಸಭೆಯ ನಡವಳಿಗಳಲ್ಲಿ ದಾಖಲಿಸತಕ್ಕದ್ದು.
- **ವರ್ಷದ ಅರ್ಹ ಮತದಾರರ ಪಟ್ಟಿ ಪ್ರಕಟಿಸಿ :** ಕಾಯ್ದೆ ಕಲಂ 32(1)(ಡಿ) ಅಡಿ ಪ್ರಸಕ್ತ ವರ್ಷದ ಅರ್ಹ ಮತದಾರರ ಪಟ್ಟಿಯನ್ನು ಏಪ್ರಿಲ್ 30 ರೊಳಗೆ ಪ್ರಕಟಿಸುವುದು ಮುಖ್ಯ ಕಾರ್ಯನಿರ್ವಾಹಕನ ಜವಾಬ್ದಾರಿಯಾಗಿರುತ್ತದೆ. ಇದನ್ನು ಪಾಲಿಸಲು ಸೂಚಿಸಲಾಗಿದೆ.

### ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 5,320 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 3024 ಪ್ರಕರಣಗಳು ಸೇರಿದಂತೆ ಒಟ್ಟು 8344 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 4,010 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,362 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 186 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1035 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 846 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 73 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 70 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 703 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

**ಎನ್.ಸಿ.ಡಿ.ಸಿ ಯಿಂದ ಸಹಕಾರಿಗಳಿಗೆ ಹಣಕಾಸಿನ ನೆರವನ್ನು ನೀಡುವ ಸಲುವಾಗಿ ಸಾಲದ ಅರ್ಜಿಯನ್ನು ವೆಬ್‌ಸೈಟ್ ನಲ್ಲಿ ಲಭ್ಯವಿರುವುದನ್ನು ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.**

| राष्ट्रीय सहकारी विकास निगम<br>National Cooperative Development Corporation | | 4, सिरी इन्स्टीट्युशनल एरिया, हौज खास, नई दिल्ली – 110016<br>4, Siri Institutional Area, Hauz Khas, NEW DELHI – 110016<br>दूरभाष/Phone: 26567475, 26962612, 26962379, 26567140<br>फेक्स:/Fax: 0091-011-26962370, 26516032<br>Website: www.ncdc.in Email: r.vanitha@ncdc.in |
|---|---|---|

No.NCDC:5-2/2016-MIS

Dated: February 08, 2019.

From

Shri Sundeep Kumar Nayak,
Managing Director

To

The Secretary,
Incharge of Cooperation Department,
All States/Union Territories.

Sub: Common Loan Application Form for financial assistance on NCDC's website – Reg.

Sir,

It is to inform that a revised and easily accessible Common Loan Application Form has been made available on Home page of NCDC website www.ncdc.in. Applicants may access Common Loan Application Form as per activity and purpose of the loan which may be downloaded and submitted in Regional Office or Head Office of the Corporation alongwith supporting documents.

2. Hence, you are requested that the above facility may be brought to the notice of the concerned departments and suitable proposals may be formulated in accordance with the application forms. Concerned departments may be instructed accordingly.

3. For project related information and assistance, interested applicants may contact the Regional Office as well as Head Office of the Corporation.

Yours faithfully,

8/2/19

(R. Vanitha)
Chief Director (MIS)
For Managing Director

## ದಿ ಪಾವಗಡ ಸೌಹಾರ್ದ ಸಹಕಾರಿಯಿಂದ ಅನ್ನದಾಸೋಹ ಕಾರ್ಯಕ್ರಮ

**ಪಾವಗಡ:** ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ ಆಪರೇಟಿವ್ ಲಿ., ನ ಸಹಯೋಗದೊಂದಿಗೆ, ಶ್ರೀಮತಿ ನಾರಮ್ಮ ಹೆಂಜಾರೆಡ್ಡಿ ಚಾರಿಟಬಲ್ ಟ್ರಸ್ಟ್ ಹಾಗೂ ಸ್ಥಳೀಯ ಅನ್ನ ದಾಸೋಹ ಸಮಿತಿಯ ಸಹ ಭಾಗಿತ್ವದೊಂದಿಗೆ ಪಾವಗಡ ಸೌಹಾರ್ದ ಸಹಕಾರಿಯ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್ ಕೃಷ್ಣಾರೆಡ್ಡಿರವರ ನೇತೃತ್ವದಲ್ಲಿ ಹಾಗೂ ಸಹಕಾರಿ ಆಡಳಿತ ಮಂಡಳಿ ಸದಸ್ಯರು, ಶಾಖಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಂದ ಅನಂತಪುರ ಜಿಲ್ಲೆಯ ಮಡಕ ಶಿರಾ ತಾಲೂಕಿನ ಹೇಮಾವತಿ ಎಂಬ ಗಡಿಗ್ರಾಮದಲ್ಲಿ ಶ್ರೀ ಹೆಂಜೇರು ಸಿದ್ದೇಶ್ವರ ಸ್ವಾಮಿ ಜಾತ್ರ ಮಹೋತ್ಸವದ ಪ್ರಯುಕ್ತ ಸುಮಾರು 1,00,000/– ಭಕ್ತಾದಿಗಳಿಗೆ ಬೆಳಿಗ್ಗೆ 8.30ರಿಂದ ಸಂಜೆ 5.00ರವರೆಗೆ ಸತತವಾಗಿ ಅನ್ನದಾಸೋಹವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.



## ಉದ್ಘಾಟನಾ ಕಾರ್ಯಕ್ರಮ




**ತುಮಕೂರು:** ತುಮಕೂರು ಜಿಲ್ಲೆಯ ಶಿವಗಂಗಾ ಕಲ್ಯಾಣ ಮಂಟಪದಲ್ಲಿ ನಡದ ಕೊರಟಗೆರೆ ತಾಲ್ಲೂಕಿನ ಕಲ್ಪತರು ಪರಿವರ್ತನಾ ಸೌಹಾರ್ದ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ತುಮಕೂರಿನ ನಿರ್ದೇಶಕರಾದ ಶ್ರೀ ಗಂಗಾಧರಯ್ಯ, ಮಾಜಿ ಶಾಸಕರಾದ ಶ್ರೀ ಸುಧಾಕರ್ ಲಾಲ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್. ಹನುಮಾನ್, ತುಮೂಲ್ ನಿರ್ದೇಶಕರಾದ ಶ್ರೀ ಈಶ್ವರಯ್ಯ, ಪಂಚಾಯತಿ ಸದಸ್ಯ ಶ್ರೀ ಕೆ.ಎನ್. ಲಕ್ಷ್ಮೀನಾರಾಯಣ್, ತಾಪಂ ಮಾಜಿ ಸದಸ್ಯ ಶ್ರೀ ಜಿ.ಎಲ್. ಹನುಮಂತರಾಯಪ್ಪ, ಕೊರಟಗೆರೆಯ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷರಾದ ಪ್ರೇಮ ಮಹಾಲಿಂಗಪ್ಪ, ಸಹಕಾರಿ ಸಲಹೆಗಾರ ಶ್ರೀ ಶಂಕರ್ ಹೆಗಡೆ, ತಾಲ್ಲೂಕು ವೀರಶೈವ ಮಹಾಸಭಾದ ಮಾಜಿ ಅಧ್ಯಕ್ಷ ಶ್ರೀ ಪರ್ವತಯ್ಯ, ಕಲ್ಪತರು ಪರಿವರ್ತನಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಕುಮಾರ್ ಉಪಾಧ್ಯಕ್ಷರಾದ ಶ್ರೀ ಕೆ.ಬಿ. ಸುನೀಲ್, ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮ



**ಪಾವಗಡ:** ದಿನಾಂಕ 22.02.2019 ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ – ಆಪರೇಟಿವ್ ಲಿಮಿಟೆಡ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರಿಗೆ ಸಹಕಾರಿ ವತಿಯಿಂದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಬೆಂಗಳೂರಿನ ಆಡಳಿತ ಕಚೇರಿ ಕಟ್ಟಡ ಪಾವಗಡ ಸೌಹಾರ್ದ ಸೌಧದಲ್ಲಿ ನೆರವೇರಿಸಲಾಯಿತು.

## ಬಳ್ಳಾರಿ ಜಿಲ್ಲಾ ಸಹಕಾರಿಗಳ ಸಮಾವೇಶ




**ಹೊಸಪೇಟೆ:** ಸಹಕಾರ ಭಾರತಿ ವತಿಯಿಂದ ಹೊಸಪೇಟೆಯಲ್ಲಿ ನಡೆದ ಬಳ್ಳಾರಿ ಜಿಲ್ಲಾ ಸಹಕಾರಿಗಳ ಸಮಾವೇಶದ ಅಧ್ಯಕ್ಷತೆಯನ್ನು ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯ ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಸಮಸ್ಯೆಗಳ ಕುರಿತು ಸಹಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

## ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ




**ಶಿವಮೊಗ್ಗ:** ದಿನಾಂಕ 08.03.2019ರಂದು ವಕೀಲರ ಸೌಹಾರ್ದ ಸಹಕಾರಿಯ ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಶ್ರೀಮತಿ ಪ್ರಭಾವತಿ ಎಂ. ಹಿರೇಮಠ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಿವಮೊಗ್ಗ ಇವರು ನೇರವೆ–ರಿಸಿದರು. ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಬಿ.ವೈ. ರಾಘವೇಂದ್ರ, ಲೋಕಸಭಾ ಸದಸ್ಯರು, ಶಿವಮೊಗ್ಗ, ಇವರು ನೇರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎನ್. ಒಡೆಯರ್, ರವರು ವಹಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಜಿ. ಮಧು, ಅಧ್ಯಕ್ಷರು, ವಕೀಲರ ಸಂಘ, ಶ್ರೀ ಎ.ಆರ್ ಶಶಿಧರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಇವರು ಉಪಸ್ಥಿತರಿದ್ದರು.



**ರಾಯಚೂರು:** ರಾಯಚೂರು ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆ.

### ಶುಭಧನಲಕ್ಷ್ಮೀ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಹೊಸಪೇಟೆ ಸಹಕಾರಿ ವತಿಯಿಂದ ಬಿಲನ ಮೂಲಕ ಮತದಾನ ಜಾಗೃತಿ ಕಾರ್ಯ



SRI SHUBHADHANALAXMI
SOU SAH NI HOSPETE
* DUPLICATE RECEIPT *
AGENT No. : 001006
RECEIPT DATE: 11/03/19
RECEIPT No. : 771
ACCOUNT No. : 80
ACC. NAME :
PRV. BAL. : ₹41
DEP. AMT. : ₹
CUR. BAL. : ₹41
ACC. OPN DT.: 27/11/18
* VOTE4 STRONG NATION *
YOUR VOTE YOUR RIGHT

## ಕೊಪ್ಪಳ ಜಿಲ್ಲಾ ಸಹಕಾರ ಭಾರತಿ ಕಾರ್ಯಕ್ರಮ

**ಕೊಪ್ಪಳ:** ದಿನಾಂಕ 03.03.2019 ರಂದು ಕುಷ್ಠಗಿ ನಗರದಲ್ಲಿ ಕೊಪ್ಪಳ ಜಿಲ್ಲಾ ಸಹಕಾರ ಭಾರತಿ ಗಂಗಾವತಿ ತಾಲ್ಲೂಕಿನ ಸಹಕಾರ ಭಾರತಿಯ ಪ್ರಧಾನ ಕಾರ್ಯದರ್ಶಿಯಾಗಿ ಋಷಿ ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಆನಂದ ಕೊಟ್ರಪ್ಪ ರವರು ಆಯ್ಕೆಯಾಗಿರುತ್ತಾರೆ. ಕಾರ್ಯಕ್ರಮದಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯ, ಸಂಯುಕ್ತ ಸಹಕಾ–ರಿಯ ನಿರ್ದೇಶಕರಾದ ಶ್ರೀ ಶ್ರೀಧರ ಜಿ. ಶ್ರೀ ನಾಗಲಿಂಗಪ್ಪ ಪತ್ತಾರ, ಶ್ರೀ ಗಿರಿಯಪ್ಪ ಹೊಸಕೇರಿ, ಶ್ರೀ ವಿರೂಪಾಕ್ಷಪ್ಪ ಮಾಷ್ಠಿ, ಎಲ್ ಆನಂದ ಹಾಗೂ ಶ್ರೀ ಮಹೇಶ. ಎ.ಕೆ. ರವರು ಉಪಸ್ಥಿತರಿದ್ದರು.




## ಗ್ರಾಹಕರ ಸಮಾವೇಶ

**ಉಡುಪಿ:** ಶ್ರೀ ಮಹಾಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ತೆಕ್ಕಟ್ಟೆ ಸಹಕಾರಿಯಲ್ಲಿ ಗ್ರಾಹಕರ ಸಮಾವೇಶ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಸದಾಶಿವ ಶೆಟ್ಟಿ, ಮುಖ್ಯ ಕಾರ್ಯನಿರ್ವಾಹಕರಾದ ಬಿ. ಚಂದ್ರಕಾಂತ್ ಶೆಟ್ಟಿ, ಉಳ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಯು. ಸೀತಾರಾಮ ಅಡಿಗ, ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಸುರೇಂದ್ರ ಹೆಗ್ಡೆ, ಉಪಾಧ್ಯಕ್ಷ ಸುಧಾಕರ ಶೆಟ್ಟಿ, ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು



## Farmer Cooperative Spinning Mills ನ ಅಧ್ಯಕ್ಷರಾಗಿ ಆಯ್ಕೆ

ಹಿರಿಯ ಸಹಕಾರಿಯಾದ ಶ್ರೀ ಆರ್.ಎನ್ ದೇಶಪಾಂಡೆ, ಹುಲಕೋಟಿಯ farmer cooperative spinning mills ಇದರ ಅಧ್ಯಕ್ಷರಾಗಿ 4ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂಸ್ಥೆಯು ರಾಜ್ಯ ಮಟ್ಟದ ವ್ಯಾಪ್ತಿಯುಳ್ಳದಾಗಿದ್ದು ರಾಜ್ಯದ ಹತ್ತಿ ಬೆಳಗಾರರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಯಾಗಿದೆ. 5 ವರ್ಷಗಳ ಅವಧಿಯ ಅಧ್ಯಕ್ಷತೆಯ ಪದವಿಯನ್ನು ಸತತವಾಗಿ 4ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿರುವ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಶ್ರೀಯುತರನ್ನು ಅಭಿನಂದಿಸಿದ್ದಾರೆ.



## ಆರ್‌ಜಿಬಿ ಸದಸ್ಯರಾಗಿ ವೈ.ಟಿ. ಪಾಟೀಲ ಆಯ್ಕೆ



**ಕೆಂಭಾವಿ:** ಹೊಸಪೇಟೆಯಲ್ಲಿ ನಡೆದ 14ನೇ ಇಪ್ಕೋ ಪ್ರಾತಿನಿಧಿಕ (ಆರ್‌ಜಿಬಿ) ಸರ್ವ ಸದಸ್ಯರ ಚುನಾವಣೆಯಲ್ಲಿ ಯಡಿಯಾಪುರ ಗ್ರಾಮದ ವೈ.ಟಿ ಪಾಟೀಲ ರವರು ಆಯ್ಕೆಯಾಗಿದ್ದಾರೆ. ನೂತನ ಆರ್‌ಜಿಬಿ ಸದಸ್ಯರಾಗಿ ಆಯ್ಕೆಯಾದ ವೈ.ಟಿ. ಪಾಟೀಲ್‌ರವರಿಗೆ ಶಹಾಪುರ ಕ್ಷೇತ್ರದ ಶಾಸಕ ಶರಣಬಸಪ್ಪಗೌಡ ದರ್ಶನಾಪುರ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಲಿಂಗನಗೌಡ ಮಾಲಿಪಾಟೀಲ್, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಸಿದ್ದನಗೌಡ ಪೋಲೀಸ್ ಪಾಟೀಲ್, ಡಿಸಿಸಿ ನಿರ್ದೇಶಕ ಬಾಪುಗೌಡ ಪಾಟೀಲ, ಕೆಪಿಸಿಸಿ ವೈದ್ಯರ ಘಟಕದ ಅಧ್ಯಕ್ಷ ಡಾ. ಕಿರಣಜಕರೆಡ್ಡಿ, ಮುಖಂಡರಾದ ಶರಣಬಸವ ಡಿಗ್ಗಾವಿ. ಕೆಂಭಾವಿ ಬ್ಲಾಕ್ ಅಧ್ಯಕ್ಷ ಬಸನಗೌಡ ಚಿಂಚೋಳಿ, ಪುರಸಭೆ ಸದಸ್ಯ ಮಹಿಪಾಲರೆಡ್ಡಿ ಡಿಗ್ಗಾವಿ, ಶೇಖರಗೌಡ ಪಾಟೀಲ, ಶಂಕರಗೌಡ (ಶಿವನಂದಿ) ಗೌಡಪ್ಪಗೌಡ ಯಡಿಯಾಪುರ, ಅಯ್ಯನಗೌಡ ಪಾಟೀಲ ಮಾಲಹಳ್ಳಿ ಸೇರಿ ಅನೇಕರು ಹರ್ಷ ವ್ಯಕ್ತಪಡಿಸಿದ್ದಾರೆ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಶ್ರೀಯುತರನ್ನು ಅಭಿನಂದಿಸಿದ್ದಾರೆ

## ನಂದಿನಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಮತದಾನ ಜಾಗೃತಿ ಅಭಿಯಾನ



**ಮಂಗಳೂರು:** ದಿನಾಂಕ 31.03.2019ರಂದು ನಂದಿನಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯಿಂದ ಪ್ರಜಾಪ್ರಭುತ್ವದ ನೆಲಗಟ್ಟಿನಲ್ಲಿ ಭದ್ರವಾದ ಸರಕಾರ ನೀಡವ ನಿಟ್ಟಿನಲ್ಲಿ ಮತದಾನ ಮಾಡಬೇಕಾಗಿದೆ. ಹಣ, ಹೆಂಡದಂತಹ ಅಮಿಷಕ್ಕೆ ಒಳಾಗಾಗದೆ ಪ್ರಜಾಪ್ರಭುತ್ವದ ಮಹತ್ವ ಅರಿತು ಮತದಾನ ಮಾಡಿ ಎಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ನೀಲಯ್ಯ ಕೋಟ್ಯಾನ್ ಕಟೀಲು ಹೇಳಿದರು. ಮತದಾನ ಜಾಗೃತಿ ಅಭಿಯಾನವು ಕಟೀಲು ಬಸ್ ನಿಲ್ದಾಣದಲ್ಲಿ ಶೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ ಕ್ಲಬ್ ಹಾಗೂ ಜಿಲ್ಲಾಡಳಿತ ದಕ್ಷಿಣ ಕನ್ನಡ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ, ನೆಹರು ಯುವ ಕೇಂದ್ರ ಮಂಗಳೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಶ್ರಯದಲ್ಲಿ ದುರ್ಗಾಂಬಿಕ ಯುವಕ ಮಂಡಲ ಗಿಡಿಗೆರೆ ಹಾಗೂ ಇನ್ನಿತರ ಸಂಘ ಸಂಸ್ಥೆ ಸಹಕಾರದಲ್ಲಿ ಭಾರತ ಚುನಾವಣಾ ಆಯೋಗ ಮತದಾರರದಲ್ಲಿ ಮತದಾನದ ಬಗ್ಗೆ ಜಾಗೃತಿ ಅಭಿಯಾನ – 2019 ಬೀದಿ ನಾಟಕ ಪ್ರದರ್ಶಿಸಲಾಹಿತು. ಕಾರ್ಯಕ್ರಮದಲ್ಲಿ ಕಟೀಲು ನಂದಿನಿ ವಿವಿದ್ದೋದ್ದೇಶ ಸೌಹಾರ್ದ ಸಂಸ್ಥೆಯ ಮುಖ್ಯ ನಿರ್ವಾಹಕ ಶಶಿಧರ ಶೆಟ್ಟಿ ಕೆರಮ, ಎಕ್ಕಾರು ವಿಜಯ ಯುವ ಸಂಗಮ ಅಧ್ಯಕ್ಷ ದೀಕ್ಷಿತ್, ರಾಜೇಂದ್ರ ಪ್ರಸಾದ್ ಎಕ್ಕಾರು, ತಾಲೂಕು ಯುವಜನ ಒಕ್ಕೂಟದ ಅಧ್ಯಕ್ಷ ಗಿರೀಶ್ ಶೆಟ್ಟಿ ಎಕ್ಕಾರು, ಕಟೀಲು ಸ್ಪೋರ್ಟ್ಸ್ ಆ್ಯಂಡ್ ಗೇಮ್ಸ್ ಕ್ಲಬ್ ಕೇಶವ ಕಟೀಲು ಮೊದಲಾದವರು ಉಪಸ್ಥಿತರಿದ್ದರು.


## ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನೂತನ ಕಟ್ಟಡಕ್ಕೆ ಸ್ಥಳಾಂತರ

ಚಿತ್ರದುರ್ಗ: ನಗರದ ಹೊಳಲ್ಕೆರೆ ರಸ್ತೆಯ ಆದರ್ಶ ಸೌಹಾರ್ದ ಪತ್ತಿನ ಸಹಕಾರಿಯನ್ನು ಚಿಕ್ಕಪೇಟೆಯ ಹೊಸ ಕಟ್ಟಡಕ್ಕೆ ದಿನಾಂಕ 30.03.2019ರಂದು ಸ್ಥಳಾಂತರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಆರ್ ತಿಪ್ಪೇಸ್ವಾಮಿ ಮತ್ತು ಇತರೆ ಪದಾಧಿಕಾರಿಗಳು ಸಹಕಾರಿಯ ನೂತನ ಕಛೇರಿಯಲ್ಲಿ ಶ್ರೀ ಲಕ್ಷ್ಮೀ ಗಣಪತಿ ಪೂಜೆಯನ್ನು ನೇರವೇರಿಸಿದರು. ಸಹಕಾರಿಯು ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದ್ದು ಸದಸ್ಯರು ಎಂದಿನಂತೆ ಸಹಕಾರ ನೀಡಲು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ಕೋರಿದರು.



## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಅಶ್ವತ್ಥಪುರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು



ಶ್ರೀ ನಾಗರಾಜ ಭಟ್
ಅಧ್ಯಕ್ಷರು



ಶ್ರೀ ಕೆ.ಎನ್. ಶ್ರೀನಿವಾಸ ರಾವ್
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಎಸ್. ಎ ರಾಮಚಂದ್ರ ರಾವ್, ಶ್ರೀ ಎಂ. ಆರ್ ರಮೇಶ್, ಶ್ರೀ ಎಂ. ಮುರಳೀಧರ್. ಶ್ರೀಮತಿ ವೀಣಾ ಮಹೇಶ್ ಭಟ್, ಶ್ರೀ ಟಿ. ಎಸ್. ಸತ್ಯನಾರಾಯಣ, ಶ್ರೀ ಎ. ರಮೇಶ, ಶ್ರೀ ಪಿ.ಆರ್ ಶುಭಕರ್, ಶ್ರೀ ಎಂ. ಹೆಚ್. ಮಂಜುನಾಥ್ ಮತ್ತು ಶ್ರೀಮತಿ ಕೆ.ಜಿ. ಸವಿತಾ ಆಯ್ಕೆಯಾಗಿರುತ್ತಾರೆ.

### ಶ್ರೀ ಜಡೆ ಶಂಕರಲಿಂಗ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು



ಶ್ರೀ ಬಿ.ಕೆ ಹಂಪಾಗೋಳ
ಅಧ್ಯಕ್ಷರು



ಶ್ರೀ ಮಹಾಲಿಂಗಪ್ಪ ಹೆರಲಾಗಿ
ಉಪಾಧ್ಯಕ್ಷರು

### ಜಗಜ್ಯೋತಿ ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಯಾದಗಿರಿ



ಶ್ರೀ ಭೀಮನಗೌಡ ಮಾಲೀಪಾಟೀಲ
ಅಧ್ಯಕ್ಷರು



ಶ್ರೀ ಶಾಂತಗೌಡ ಪಾಟೀಲ
ಉಪಾಧ್ಯಕ್ಷರು

### ಕಲ್ಪತರು ಪರಿವರ್ತನಾ ಸೌಹಾರ್ದ ಸಹಕಾರಿ ನಿ., ತುಮಕೂರು



ಶ್ರೀ ಹೆಚ್. ಪಿ. ಶಿವಕುಮಾರ
ಅಧ್ಯಕ್ಷರು



ಶ್ರೀ ಕೆ. ಬಿ. ಸುನೀಲ್
ಉಪಾಧ್ಯಕ್ಷರು

### ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ



ಶ್ರೀ ಬಿ.ಟಿ. ಭದ್ರೀಶ್
ಅಧ್ಯಕ್ಷರು

# 31 ಮಾರ್ಚ್ 2019 ವರ್ಷಾಂತ್ಯಕ್ಕೆ ವಿವಿಧ ಸೌಹಾರ್ದ ಸಹಕಾರಿಗಳು / ಸೌಹಾರ್ದ ಬ್ಯಾಂಕುಗಳ ಹಣಕಾಸಿನ ಪ್ರಗತಿ ವಿವರ

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸ್ವಂತ ನಿಧಿ | 27.41 |
| ಒಟ್ಟು ಠೇವಣಿ | 104.36 |
| ಸಾಲಗಳು | 70.84 |
| ಒಟ್ಟು ಎನ್‌ಪಿಎ ಅನುಪಾತ | 1.27% |
| ನೆಟ್ ಎನ್‌ಪಿಎ ಅನುಪಾತ | 0.00% |
| ನಿವ್ವಳ ಲಾಭ | 2.31 |
| ಒಟ್ಟು ವಹಿವಾಟು | 175.20 |
| ನಿವ್ವಳ ವಹಿವಾಟು | 26.02 |
| ಸಿಆರ್‌ಎಆರ್ | 31.2% |
| ಒಟ್ಟು ವ್ಯವಹಾರದ ಲಾಭ | 1.32% |

## ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 3.48 |
| ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | 21.26 |
| ಒಟ್ಟು ಠೇವಣಿ | 163.50 |
| ಸಾಲಗಳು | 125.22 |
| ದುಡಿಯುವ ಬಂಡವಾಳ | 188.23 |
| ಒಟ್ಟು ವಹಿವಾಟು | 288.72 |
| ಹೂಡಿಕೆ | 53.25 |
| ನಿವ್ವಳ ಲಾಭ | 3.47 |
| ಸಿಡಿ ಅನುಪಾತ | 76.59% |
| ಒಟ್ಟು ಎನ್‌ಪಿಎ ಅನುಪಾತ | 4.70% |

## ಶುಶ್ರುತಿ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಬೆಂಗಳೂರು

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 154.00 |
| ಸಾಲಗಳು | 107.00 |
| ಹೂಡಿಕೆ | 32.00 |
| ನಿವ್ವಳ ಲಾಭ | 1.72 |
| ಒಟ್ಟು ಎನ್‌ಪಿಎ ಅನುಪಾತ | 2.95% |

## ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 669 |
| ಸಾಲಗಳು | 453 |
| ಸಿಡಿ ಅನುಪಾತ | 69.69% |
| ನೆಟ್ ಎನ್‌ಪಿಎ ಅನುಪಾತ | 1.97% |
| ಸಿಆರ್‌ಎಆರ್ | 11.37% |
| ತೆರಿಗೆ ಮೊದಲ ಲಾಭ | 9.02 |
| ತೆರಿಗೆ ನಂತರದ ಲಾಭ | 4.93 |
| ಒಟ್ಟು ವ್ಯವಹಾರ | 1122 |

## ವಿಕಾಸ್ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 401 |
| ಸಾಲಗಳು | 263 |
| ಒಟ್ಟು ವಹಿವಾಟು | 664 |
| ಒಟ್ಟು ಎನ್‌ಪಿಎ ಅನುಪಾತ | 4.17% |
| ನೆಟ್ ಎನ್‌ಪಿಎ ಅನುಪಾತ | 2.42% |
| ತೆರಿಗೆ ಮೊದಲ ಲಾಭ | 8.85 |
| ತೆರಿಗೆ ನಂತರದ ಲಾಭ | 4.23 |

### ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 30.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ತೆರಿಗೆ ಮೊದಲ ಲಾಭ | 1.86 |
| ತೆರಿಗೆ ನಂತರದ ಲಾಭ | 1.22 |
| ದುಡಿಯುವ ಬಂಡವಾಳ | 74.88 |
| ಒಟ್ಟು ವಹಿವಾಟು | 83.60 |
| ಒಟ್ಟು ಎನ್‌ಪಿಎ ಅನುಪಾತ | 0.30% |
| ನೆಟ್ ಎನ್‌ಪಿಎ ಅನುಪಾತ | 0.00% |
| ಆರ್‌ಓಎ | 1.71% |
| ಎನ್‌ಐಎಂ | 4.02% |

### ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಪುತ್ತೂರು

| ಆರ್ಥಿಕ ಅಂಶಗಳು | 30.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 178.28 |
| ಸಾಲಗಳು | 130.11 |
| ಶೇರುಗಳು | 8.13 |
| ಒಟ್ಟು ವ್ಯವಹಾರ | 308 |
| ದುಡಿಯುವ ಬಂಡವಾಳ | 203.30 |
| ಸದಸ್ಯರು | 30371 |
| ನಿವ್ವಾಳ ಲಾಭ | 3.51 |
| ಸಿಡಿ ಅನುಪಾತ | 72.98% |

### ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ನಿ., ಕಲಬುರಗಿ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 99 ಲಕ್ಷ |
| ಒಟ್ಟು ಠೇವಣಿ | 19.63 ಕೋಟಿ |
| ಸಾಲಗಳು | 10.8 ಕೋಟಿ |
| ಕಾಯ್ದಿಟ್ಟ ನಿಧಿಗಳು | 1.96 ಕೋಟಿ |
| ಹೂಡಿಕೆ | 9.5 ಕೋಟಿ |
| ನಿವ್ವಳ ಲಾಭ | 58 ಲಕ್ಷ |

### ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 2.54 |
| ಒಟ್ಟು ಠೇವಣಿ | 213.74 |
| ಸಾಲಗಳು | 219.76 |
| ನಿವ್ವಳ ಲಾಭ | 3.35 |
| ಸದಸ್ಯರು | 10,493 |
| ಒಟ್ಟು ವಹಿವಾಟು | 552 |

### ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹೊಸಪೇಟೆ

| ಆರ್ಥಿಕ ಅಂಶಗಳು | 30.03.2019 ಕ್ಕೆ ಇದ್ದಂತೆ |
|---|---|
| ಒಟ್ಟು ಠೇವಣಿ | 1,30,09,133 |
| ಸಾಲಗಳು | 1,11,24,314 |
| ಒಟ್ಟು ವ್ಯವಹಾರ | 2,41,33,447 |
| ನಿವ್ವಾಳ ಲಾಭ | 4,94,472 |
| ಒಟ್ಟು ವಹಿವಾಟು | 6,43,64,032 |

### ಮಾನವಿ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನವಿ

| ಆರ್ಥಿಕ ಅಂಶಗಳು | 30.03.2019 ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಶೇರು ಬಂಡವಾಳ | 969.00 |
| ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | 1543.79 |
| ಹೂಡಿಕೆ | 10,459.60 |
| ಒಟ್ಟು ಠೇವಣಿ | 28,524.16 |
| ಸಾಲಗಳು | 19,710.04 |
| ಒಟ್ಟು ವ್ಯವಹಾರ | 48,234.00 |
| ದುಡಿಯುವ ಬಂಡವಾಳ | 32,747.92 |
| ನಿವ್ವಾಳ ಲಾಭ | 455.00 |
| ಸದಸ್ಯರು | 22,375.00 |
| ಎನ್‌ಪಿಎ | 4.47 |
| ಸಿಆರ್‌ಎಆರ್ | 16.35% |
| ಬ್ಯಾಂಕಿನ ಸಿಬ್ಬಂದಿಗಳು | 106.00 |

### ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಉಡುಪಿ

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ |
|---|---|
| ನಿವ್ವಳ ಲಾಭ | 1,11,69,542 |
| ಅನುತ್ಪಾದಕ ಆಸ್ತಿಗೆ ಕಾದಿರಿಸಿದ್ದು (N.P.A.) | 12,01,087 |
| ಸದಸ್ಯರ ಠೇವಣಾತಿಗಳು | 39,00,05,048 |
| ಸದಸ್ಯರ ಸಾಲಗಳು | 31,29,00,595 |
| ಸಹಕಾರಿ ಬ್ಯಾಂಕಗಳಲ್ಲಿ ಹೂಡಿಕೆ | 15,53,00,000 |
| ಪಾಲು ಬಂಡವಾಳ | 2,11,51,000 |
| ಕ್ಷೇಮ ನಿಧಿ | 3,14,72,635 |

### ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು

| ಆರ್ಥಿಕ ಅಂಶಗಳು | 31.03.2019 ಕ್ಕೆ ಇದ್ದಂತೆ |
|---|---|
| ಪಾಲು ಬಂಡವಾಳ | 1,32,05.400.00 |
| ನಿಧಿಗಳು | 3,82,77,022,17 |
| ಠೇವಣಿಗಳು | 140,79,45,574.33 |
| ಇತರ ಬಾಕಿ ಮತ್ತು ಕಾಯ್ದಿರಿಸಿದ್ದು | 15,62,737.74 |
| ನಿವ್ವಳ ಲಾಭ | 2,06,83,026.70 |
| ಸ್ಥಿರಾಸ್ತಿಗಳು | 2,57,50,866.32 |
| ಸಾಲಗಳು | 116,56,03,305.51 |
| ಹೂಡಿಕೆಗಳು | 23,18,22,925.00 |
| ಇತರ ಆಸ್ತಿಗಳು | 29,88,379.04 |
| ಅಂತಿಮ ಶಿಲ್ಕು ಮತ್ತು ಬ್ಯಾಂಕ್ ಲೆಕ್ಕ | 5,55,08,285.07 |

### ಡಿಸಿಬಿಎಂ – 2ನೇ ಕಂಟ್ಯಾಕ್ಟ ಕ್ಲಾಸ್

ಸಂಯುಕ್ತ ಸಹಕಾರಿಯು ಇದೇ ಜನವರಿ 1 2019ರಂದು ಪ್ರಾರಂಭಿಸಿರುವ ಡಿಸಿಬಿಎಂ ದೂರ ಶಿಕ್ಷಣ ತರಬೇತಿಯ 2ನೇ ಕಂಟ್ಯಾಕ್ಟ ಕಾರ್ಯಕ್ರಮವು ದಿನಾಂಕ 27 & 28 ಏಪ್ರಿಲ್ 2019 ರಂದು ಆರ್.ಐ.ಸಿ.ಎಂ ಬೆಂಗಳೂರು ಹಾಗೂ ಬೆಲ್ಲದ ಬಾಗೇವಾಡಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್, ಬೆಲ್ಲದ ಬಾಗೇವಾಡಿ ಬೆಳಗಾವಿ ಜಿಲ್ಲೆಯ ಎರಡು ಸ್ಥಳಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.00ರ ವರೆಗೆ ನಡೆಯಲಿದೆ ಎಲ್ಲ ಅಭ್ಯರ್ಥಿಗಳು ಭಾಗವಹಿಸಲು ಸೂಚಿಸಿದೆ.

ಅಭ್ಯರ್ಥಿಗಳು ಕಂಟ್ಯಾಕ್ಟ ಕ್ಲಾಸ್ ಹಾಜರಾಗುವಾಗ ಕೇಸ್ ಸ್ಟಡಿ ವರದಿಗಳನ್ನು ಸಲ್ಲಿಸಲು ಸೂಚಿಸಿದೆ.

## ಪ್ರಗತಿ ಪಥದಲ್ಲಿ ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ.

ಗ್ರಾಮೀಣ ಪ್ರದೇಶದಲ್ಲಿ ಅಗ್ರಮಾನ್ಯ ಬ್ಯಾಂಕು ಎಂದು ಹೆಸರು ಪಡೆದಿರುವ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕು 2018–19ನೇ ವರ್ಷದಲ್ಲಿ ಒಟ್ಟು ರೂ.315.27 ಲಕ್ಷ ಲಾಭಗಳಿಸುವುದರೊಂದಿಗೆ ಶೇ. 99.18ರಷ್ಟು ಸಾಲ ವಸೂಲಿ ಮಾಡಿ ದಾಖಲೆ ನಿರ್ಮಿಸಿದೆ. ಆದಾಯ ತೆರಿಗೆ ಮತ್ತು ಇತರ ಅನುವುಗಳನ್ನು ರೂ.152.22 ಲಕ್ಷ ನಿವ್ವಳ ಲಾಭ ಉಳಿಸಿಕೊಂಡಿರುತ್ತದೆ.

ಗ್ರಾಮೀಣ ಜನತೆಯ ಅದರಲ್ಲೂ ರೈತ ಬಾಂಧವರ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ದೃಢಸಂಕಲ್ಪದೊಂದಿಗೆ ಸೇವೆ ಸಲ್ಲಿಸುತ್ತಾ ಅಭಿವೃದ್ಧಿ ಹೊಂದುತ್ತದೆ. ಬ್ಯಾಂಕು 28 ಕೋಟಿ 35 ಲಕ್ಷ ಸ್ವಂತ ಬಂಡವಾಳ ಹೊಂದಿದ್ದು, ರೂ 296 ಕೋಟಿ 37 ಲಕ್ಷ ದುಡಿಯುವ ಬಂಡವಾಳ ಹೊಂದಿದೆ. ರೂ.263 ಕೋಟಿ 58 ಲಕ್ಷ ಠೇವು ಸಂಗ್ರಹಿಸಲಾಗಿದ್ದು, ರೂ 129 ಕೋಟಿ 95 ಲಕ್ಷ ಸಾಲ ವಿತರಿಸಲಾಗಿದೆ. ಬೆಲ್ಲದ–ಬಾಗೇವಾಡಿಯಲ್ಲಿ ಪ್ರಧಾನ ಕಛೇರಿ ಹೊಂದಿದ್ದು ಜಿಲ್ಲೆಯ ವಿವಿಧ ಸ್ಥಳಗಲ್ಲಿ ಒಟ್ಟು 16 ಶಾಖೆಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತ ಗ್ರಾಹಕರಿಗೆ ತ್ವರಿತಗತಿಯಲ್ಲಿ ಸೇವೆ ಸಲ್ಲಿಸುತ್ತವೆ. ಗ್ರಾಹಕರ ಅನುಕೂಲತೆಗಾಗಿ ಬ್ಯಾಂಕಿನ ಮುಖ್ಯ ಶಾಖೆ ಬೆಲ್ಲದ ಬಾಗೇವಾಡಿಯಲ್ಲಿ ATM ಪ್ರಾರಂಭಿಸಿ, ರುಪೇ ಗ್ರಾಹಕರಿಗೆ (Rupay Debit Card) ಹಾಗೂ POS Machine ಗಳನ್ನು ವಿತರಿಸಲಾಗಿದೆ. ಸದ್ಯದಲ್ಲಿ ಗ್ರಾಹಕರಿಗೆ IMPS ಹಾಗೂ Mobile Banking ಸೌಲಭ್ಯ ನೀಡುವ ಯೋಜನೆ ಹೊಂದಿದ್ದು, ಸಂಬಂಧಿಸಿದ ಕಂಪನಿಯೊಂದಿಗೆ ಮಾಡಿಕೊಳ್ಳಲಾಗಿದೆ.

ಬ್ಯಾಂಕಿನ ಪ್ರಗತಿಗೆ ನಮ್ಮ ಬ್ಯಾಂಕಿನ ಸದಸ್ಯರೂ, ಮಾಜಿ ಕೃಷಿ ಸಚಿವರು ಹಾಗು ಹುಕ್ಕೇರಿ ಶಾಸಕರಾದ ಮಾನ್ಯಶ್ರೀ ಉಮೇಶ ವಿ. ಕತ್ತಿ ಮಾಜಿ ಸಂಸದರಾದ ಮಾನ್ಯಶ್ರೀ ರಮೇಶ ವಿ. ಕತ್ತಿ ಇವರ ಮಾರ್ಗದರ್ಶನ, ನಿರ್ದೇಶಕ ಮಂಡಳಿಯ ನಿಸ್ವಾರ್ಥ ಸೇವೆ, ಸದಸ್ಯರ, ಗ್ರಾಹಕರ ಅಭಿಮಾನ ಮತ್ತು ಸಿಬ್ಬಂದಿ ಸೇವಾ ಮನೋಭಾವವೇ ಕಾರಣವೆಂದು ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುಜೀತ ಮ. ಕತ್ತಿ ಇವರು ತಿಳಿಸಿದ್ದಾರೆ. ಬ್ಯಾಂಕಿನ ಪ್ರಗತಿಗಾಗಿ ಸಹಕರಿಸುವ ಎಲ್ಲ ಸದಸ್ಯರಿಗೂ ಹಾಗೂ ಠೇವುದಾರರಿಗೂ ಕೃತಜ್ಞತೆಯನ್ನು ಸಲ್ಲಿಸಿರುತ್ತಾರೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ರೂ. '3.51 ಕೋಟಿ ನಿವ್ವಳ ಲಾಭ'

**ಪುತ್ತೂರು :** ಪುತ್ತೂರಿನ ದರ್ಬೆಯಲ್ಲಿ ಪ್ರಧಾನ ಕಛೇರಿ ಹೊಂದಿ ರಾಜ್ಯವ್ಯಾಪಿ ಕಾರ್ಯವ್ಯಾಪ್ತಿ ಹೊಂದಿರುವ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತವು 31-03-2019 ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ರೂ. 3.51 ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. 2001 ರಲ್ಲಿ ಆರಂಭಗೊಂಡ ಸಹಕಾರಿಯು 17 ಶಾಖೆಗಳ ಮೂಲಕ ಕಾರ್ಯಾಚರಿಸುತ್ತಿದ್ದು, ನಿರಂತರ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ.

ಪ್ರಸ್ತುತ 30,371 ಸದಸ್ಯರನ್ನು ಹೊಂದಿದ್ದು, 178.28 ಕೋಟಿ ಠೇವಣಿಯನ್ನು ಸಂಗ್ರಹಿಸಿ, 130.11 ಕೋಟಿ ಸಾಲ ವಿತರಿಸಿರುವ ಸಹಕಾರಿಯ ದುಡಿಯುವ ಬಂಡವಾಳವು 203.30 ಕೋಟಿ, ಪಾಲು ಬಂಡವಾಳ ರೂ. 8.13 ಕೋಟಿ ಇರುತ್ತದೆ.

ಸಹಕಾರಿಯು ಸದಸ್ಯರಿಂದ ಠೇವಣಾತಿ ಸಂಗ್ರಹಣೆ, ಸದಸ್ಯರಿಗೆ ವಿವಿಧ ಸಾಲ ಸೌಲಭ್ಯ, ಇ-ಸ್ಟಾಂಪಿಂಗ್, ವೆಸ್ಟರ್ನ್ ಯೂನಿಯನ್ ಮನಿ ಟ್ರಾನ್ಸ್‌ಫರ್, ಎಕ್ಸ್‌ಪ್ರೆಸ್ ಮನಿ, ಸಾಮಾನ್ಯ ಹಾಗೂ ಜೀವ ವಿಮಾ ಸೌಲಭ್ಯ, ಸೇಫ್ ಲಾಕರ್ ಸೌಲಭ್ಯ, ಪಾನ್ ಕಾರ್ಡ್ ಸೌಲಭ್ಯ, ಮುಂತಾದ ಸೇವೆಗಳನ್ನು ನೀಡುತ್ತಿದೆ ಎಂದು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಸ್ ಆರ್ ಸತೀಶ್ಚಂದ್ರ ಹಾಗೂ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ಬೆಳವಣಿಗೆಗೆ ಕಾರಣಕರ್ತರಾದ ಸದಸ್ಯರಿಗೆ, ಗ್ರಾಹಕರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿರುತ್ತಾರೆ.

## ಆರ್ಥಿಕ ಭದ್ರತೆ ಹಾಗೂ ಆರೋಗ್ಯಕರ ಬೆಳವಣಿಗೆ ಪ್ರಥಮ ಆದ್ಯತೆ – ಮೋಹಿತ್ ಮಸ್ಕಿ
## ಸುಕೋ ಬ್ಯಾಂಕ್ ಬೆಳ್ಳಿ ಹಬ್ಬದ ಆಚರಣೆಯ ಸಂಭ್ರಮದ ಪತ್ರಿಕಾ ಗೋಷ್ಠಿ

**ಬಳ್ಳಾರಿ:** ಸಹಕಾರಿ ಕ್ಷೇತ್ರದಲ್ಲಿ ವಿಶ್ವಾಸಾರ್ಹವಾಗಿ ಬೆಳೆಯುತ್ತಿರುವ 'ಸುಕೋ ಬ್ಯಾಂಕ್' ತನ್ನ 'ಬೆಳ್ಳಿ ಹಬ್ಬ'ದ ಆಚರಣೆಯ ಸಂದರ್ಭದಲ್ಲಿ 2018-19ರ ಆರ್ಥಿಕ ಸಾಲಿನಲ್ಲಿ ಒಟ್ಟು 1122 ಕೋಟಿ ರೂಪಾಯಿ ವಹಿವಾಟನ್ನು ನಡೆಸಿ, ಶೇ. 40 ರಷ್ಟು ಪ್ರಗತಿ ಸಾಧಿಸಿರುತ್ತದೆ. ಒಟ್ಟು ಲಾಭ 9 ಕೋಟಿ ರೂಪಾಯಿ ಆಗಿದ್ದು, ತೆರಿಗೆ ಪಾವತಿಯ ನಂತರ ನಿವ್ವಳ ಲಾಭ 4.93 ಕೋಟಿ ರೂಪಾಯಿ ಲಾಭ ಗಳಿಸಿದೆ.

ಸುಕೋ ಬ್ಯಾಂಕ್‌ನ ಅಧ್ಯಕ್ಷ ಶ್ರೀ ಮೋಹಿತ್ ಮಸ್ಕಿ ಅವರು ಬ್ಯಾಂಕ್‌ನ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕದ ಸಹಕಾರಿ ಕ್ಷೇತ್ರದಲ್ಲಿ ಸುಕೋ ಬ್ಯಾಂಕ್ ಭದ್ರವಾಗಿ ತಳವೂರಿ, ಪ್ರತೀ ವರ್ಷವೂ ತನ್ನ ಒಟ್ಟಾರೆ ವ್ಯವಹಾರವನ್ನು ವೃದ್ಧಿಗೊಳಿಸಿಕೊಳ್ಳುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸುಕೋ ಬ್ಯಾಂಕ್ ಕರ್ನಾಟಕದ 16 ಜಿಲ್ಲೆಗಳಲ್ಲಿ ಕಾರ್ಯ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿದ್ದು 28 ಶಾಖೆಗಳಲ್ಲಿ ತನ್ನ ವ್ಯವಹಾರವನ್ನು ನಡೆಸಿದೆ. ಶೇ. 40 ರಷ್ಟು ಪ್ರಗತಿ ಸಾಧಿಸಿರುವ ಬ್ಯಾಂಕ್ ಒಟ್ಟು 669 ಕೋಟಿ ರೂಪಾಯಿ ಠೇವಣಿ ಹೊಂದಿ, ಒಟ್ಟು 453 ಕೋಟಿ ರೂಪಾಯಿ ಸಾಲ ವಿತರಣೆ ಮಾಡಿದೆ ಎಂದರು.

ಬ್ಯಾಂಕ್‌ನ ಎನ್‌ಪಿಎ (ನಿವ್ವಳ ಅನುತ್ಪಾದಕ ಆಸ್ತಿ) ಶೇ. 1.97 ರಷ್ಟಿದ್ದು, ಇದು ಸುಕೋ ಬ್ಯಾಂಕ್‌ನ ಆರ್ಥಿಕ ಭದ್ರತೆ ಮತ್ತು ಆರೋಗ್ಯವನ್ನು ಸೂಚಿಸುತ್ತದೆ ಎಂದು ಹೇಳಿದರು.

### 'ಸುಕೋ ಸೋಲಾರ್ ಶಕ್ತಿ'

ಸುಕೋ ಬ್ಯಾಂಕ್ ತನ್ನ ಬೆಳ್ಳಿ ಹಬ್ಬದ ಅಂಗವಾಗಿ ಹೊಸದಾಗಿ 'ಸುಕೋ ಸೋಲಾರ್ ಶಕ್ತಿ' ಯೋಜನೆಯನ್ನು ಜಾರಿ ಮಾಡಿದ್ದು, 25 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಅತಿ ಕಡಿಮೆ ಸಮಾನ ಮಾಸಿಕ ಕಂತುಗಳಲ್ಲಿ (ಇಎಂಐ – ಪ್ರತಿ ಕಿಲೋ ವ್ಯಾಟ್‌ಗೆ ರೂಪಾಯಿ 872/– ಮಾತ್ರ) ಸೋಲಾರ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿದ್ಯುತ್ ಉತ್ಪಾದಿಸುವ ಯೋಜನೆ ಇದಾಗಿದೆ. ಈ ಯೋಜನೆಯಲ್ಲಿ 300 ಕ್ಕೂ ಹೆಚ್ಚಿನ ಜನರು ಹೆಸರು ನೋಂದಣಿ ಮಾಡಿಕೊಂಡು, ಸೋಲಾರ್ ತಂತ್ರಜ್ಞಾನದ ಮೂಲಕ ವಿದ್ಯುತ್ ಉತ್ಪಾದನೆಗೆ ಆಸಕ್ತಿ ತೋರಿದ್ದಾರೆ ಎಂದರು.



### ಯುಪಿಐ ಹಣ ಪಾವತಿ ತಂತ್ರಜ್ಞಾನ

ಸುಕೋ ಬ್ಯಾಂಕ್ ಕೇಂದ್ರ ಸರ್ಕಾರದ ಯುಪಿಐ ಹಣ ಪಾವತಿ ತಂತ್ರಜ್ಞಾನದ ವ್ಯವಸ್ಥೆಗೆ ಒಳಪಟ್ಟ ಕರ್ನಾಟಕದ ಪ್ರಪ್ರಥಮ ಸಹಕಾರಿ ಬ್ಯಾಂಕ್ ಎನ್ನುವ ಕೀರ್ತಿಯನ್ನು ಹೊಂದಿದ್ದು, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಅನೇಕ ಪ್ರಥಮಗಳ ಗೌರವಕ್ಕೆ ಪ್ರಾಪ್ತಿಯಾಗಿದೆ ಎಂದರು.

### ರುಪೇ – ಪ್ಲಾಟಿನಂ ಕಾರ್ಡ್

ಸುಕೋ ಬ್ಯಾಂಕು, ರುಪೇ ಪ್ಲಾಟಿನಂ ಕಾರ್ಡ್ ವಿತರಣೆ ಮಾಡುತ್ತಿರುವ ಕರ್ನಾಟಕದ ಪ್ರಥಮ ಸಹಕಾರಿ ಬ್ಯಾಂಕ್ ಆಗಿರುತ್ತದೆ. ಬ್ಯಾಂಕ್‌ನ ಯಾವುದೇ ಖಾತೆದಾರರು ಈ ಕಾರ್ಡ್ ಪಡೆಯಲು ಅರ್ಹರು. ಸುಕೋ ಬ್ಯಾಂಕ್‌ನ ರುಪೇ ಪ್ಲಾಟಿನಂ ಕಾರ್ಡ್ ಮೂಲಕ ಆನ್‌ಲೈನ್ ಶಾಪಿಂಗ್ ಮಾಡುವವರಿಗೆ ವಿವಿಧ ಬಗೆಯ ರಿಯಾಯಿತಿಗಳು/ಆಕರ್ಷಕ ಕೊಡುಗೆಗಳು ಹಾಗೂ ಕ್ಯಾಶ್‌ಬ್ಯಾಕ್ ಸೌಲಭ್ಯ ಸಿಗಲಿದೆ. ಈ ಕಾರ್ಡ್ ಪಡೆಯುವ ಖಾತೆದಾರರು ಕನಿಷ್ಠ ಹಣವನ್ನು (Minimum Balance) ಖಾತೆಯಲ್ಲಿ ಹೊಂದಿರಬೇಕಾದ ಅನಿವಾರ್ಯತೆ ಇಲ್ಲ. ಎಲ್ಲಾ ಗ್ರಾಹಕರು ಈ ಕಾರ್ಡ್‌ನ ಸೌಲಭ್ಯ ಪಡೆಯಬೇಕು ಎಂದು ಅವರು ಹೇಳಿದರು.

ಸುಕೋ ಬ್ಯಾಂಕ್‌ನ ಅಭಿವೃದ್ಧಿ ಮತ್ತು ಸಾಧನೆಯಲ್ಲಿ ಸಹಕಾರ ತೋರಿದ ನಮ್ಮೆಲ್ಲಾ ಗ್ರಾಹಕರು ಮತ್ತು ಷೇರುದಾರರ ಸಹಕಾರಕ್ಕೆ ಧನ್ಯವಾದಗಳು ಎಂದರು.

ಈ ಸಂದರ್ಭದಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪರಿಮಳಾಚಾರ್ಯ ಎಸ್. ಅಗ್ನಿಹೋತ್ರಿ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಯಾದ ಶ್ರೀ ವೆಂಕಟೇಶ್‌ರಾವ್ ಅವರು ಉಪಸ್ಥಿತರಿದ್ದರು.

## ಉದ್ಘಾಟನಾ ಕಾರ್ಯಕ್ರಮ




**ಕಲಬುರಗಿ:** ಸಹಕಾರಿಗಳ ಸದಸ್ಯರು ಪ್ರಮಾಣಿಕವಾಗಿ ಸಾಲ ಮರುಪಾವತಿ ಮಾಡುವುದರಿಂದ ಸಹಕಾರಿಗಳ ಏಳಿಗೆಗೆ ಆಧಾರವಾಗುತ್ತೆ ಎಂದು ಕಲಬುರಗಿ ನಗರದಲ್ಲಿ ಶ್ರೀ ಗುರುನಾಥ ಜ್ಯಾಂತಿಕರ್, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರು ಉದ್ಘಾಟಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅದೇ ರೀತಿ ಶ್ರೀ ಮ.ಘ.ಚ. ಅಭಿನವ ಸಿದ್ದಲಿಂಗ ಶಿವಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ಜ್ಯೋತಿ ಬೆಳಗಿಸುವ ಮೂಲಕ ದಿವ್ಯ ಸಾನಿಧ್ಯ ವಹಿಸಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್‌ರವರು ಮಾತನಾಡಿ ಇಂದು ಸಹಕಾರಿಗಳು ಉತ್ತಮ ರೀತಿಯಲ್ಲಿ ಸೇವೆಯನ್ನು ಸದಸ್ಯರಿಗೆ ಒದಗಿಸುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು. ಸಂಯುಕ್ತ ಸಹಕಾರಿಯ ಮತ್ತೊರ್ವ ನಿರ್ದೇಶಕರಾದ ವೈ.ಟಿ. ಪಾಟೀಲ್‌ರವರು ಮಾತನಾಡಿ ಸಹಕಾರ ಕ್ಷೇತ್ರ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಮಾತಾನಾಡಿ ಸಂಯುಕ್ತ ಸಹಕಾರಿ ನೀಡುವ ತರಬೇತಿಗಳಿಗೆ ತಪ್ಪದೆ ಹಾಜರಿದ್ದು ತರಬೇತಿಯ ಉಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ಕೊನೆಯಲ್ಲಿ ಎಸ್.ಎಸ್.ಪಾಟೀಲ್ ಕರ್ನಾಟಕ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳದ ನಿರ್ದೇಶಕರು ಸಹಕಾರಿಯ ಏಳಿಗೆಯಲ್ಲಿ ನಿರ್ದೇಶಕರ ಪಾತ್ರ ಅತಿ ಮಹತ್ವದಾಗಿರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀಸಿದ್ದಿ ಸಂಕಲ್ಪ ಸೌಹಾರ್ದ ಸಹಕಾರಿ ನಿ.ಕಲಬುರಗಿ ಸಹಕಾರಿಯ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಭೇಟಿ

**ಬೀದರ:** ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ಭೇಟಿ ನೀಡಿ ಸಹಕಾರಿಯು ಉತ್ತಮವಾಗಿ ನಡೆಸಿಕೊಂಡು ಹೋಗುವ ಕುರಿತು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಶಿವಕುಮಾರ ಮಾಲಿಪಾಟೀಲ, ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಜಿಲ್ಲಾ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ ಉಪಸ್ಥಿತರಿದ್ದರು.



## ಸಾಧನೆಯ ಯಶದತ್ತ ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ

**ಮಂಗಳೂರು:** ಒಡಿಯೂರು ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರ ಸಾಧನಾಶಕ್ತಿಯಿಂದ, ಮಾತೆ ಸಾಧ್ವಿ ಮಾತಾನಂದಮಯಿಯವರ ಆಶೀರ್ವಾದದಿಂದ ಮತ್ತು ಗ್ರಾಹಕರ ಬಂಧುಗಳ ಪ್ರೋತ್ಸಾಹದಿಂದ ಸಹಕಾರಿಯು 2018–19ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅದ್ಭುತ ಸಾಧನೆಯ ಗುರಿಯನ್ನು ತಲುಪಿರುತ್ತದೆ. 2011ನೇ ಏಪ್ರಿಲ್ 20ರಂದು ಒಡಿಯೂರಿನ ಒಡೆಯ ಶ್ರೀಗುರುಗಳ ಅಮೃತ ಹಸ್ತದಿಂದ ಉದಯಿಸಿದ ಸಹಕಾರಿಯ ಯಶಸ್ವಿ 8 ವರ್ಷಗಳನ್ನು ಪೂರೈಸುವ ಈ ಶುಭ ಸಂದರ್ಭದಲ್ಲಿ 2018–19ನೇ ವರ್ಷಾಂತ್ಯಕ್ಕೆ 14 ಶಾಖೆಗಳೊಂದಿಗೆ ಸುಮಾರು 1.32 ಕೋಟಿ ಪಾಲು ಬಂಡವಾಳದೊಂದಿಗೆ ಸುಮಾರು 18468 ಸದಸ್ಯರನ್ನು ಹೊಂದಿರುತ್ತದೆ. ತನ್ನ ಸದಸ್ಯರಿಂದ ಸುಮಾರು 140.79 ಕೋಟಿ ಠೇವಣಿಯನ್ನು ಸ್ವೀಕರಿಸಿ ರೂ. 116.56 ಕೋಟಿ ಸಾಲವನ್ನು ವಿತರಿಸಿರುತ್ತದೆ. ಸುಮಾರು 257.35 ಕೋಟಿ ವ್ಯವಹಾರವನ್ನು ದಾಖಲಿಸಿ ಸುಮಾರು 260.50 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ ಹಾಗೂ 2018–19ನೇ ಸಾಲಿನಲ್ಲಿ ರೂ. 2.06 ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. ಸಹಕಾರಿಯ ಕಾವೂರು ಮತ್ತು ಸುರತ್ಕಲ್‌ನಲ್ಲಿ ಸ್ವಂತ ಕಟ್ಟಡವನ್ನು ಹೊಂದಿರುತ್ತದೆ. ಇಷ್ಟೊಂದು ದೊಡ್ಡ ಮಟ್ಟದ ಬೆಳವಣಿಗೆ ಸೌಹಾರ್ದ ಸಹಕಾರಿಗಳ ಇತಿಹಾಸವನ್ನು ಮೆಚ್ಚುವಂಥ ಸಾಧನೆ ಎಂದರೆ ಅತಿಶಯೋಕ್ತಿವಲ್ಲವೆಂದೇ ಹೇಳಬಹುದೆಂದು ಹಾಗೂ ಸಹಕಾರಿಯು ಸರ್ವತೋಮುಖವಾಗಿ ಬೆಳೆಯುತ್ತಿದೆ ಎಂದು ತಿಳಿಯಲು ಆಡಳಿತ ಮಂಡಳಿಯು ಹೆಮ್ಮೆ ಪಡುತ್ತಿದೆ ಎಂದು ಸಹಕಾರಿಯ ಅಧ್ಯಕ್ಷರಾದ ಲಯನ್ ಎ. ಸುರೇಶ್ ರೈ ಎಂಜಿಎಫ್ ತಿಳಿಸಿದ್ದಾರೆ.

# ಪಾಲು ಬಂಡವಾಳ ಸಂಗ್ರಹಿಸದೆ, ಒಂದು ಸಹಕಾರ ಸಂಸ್ಥೆಯನ್ನು ನೋಂದಾಯಿಸಬಹುದೇ? – ಒಂದು ವಿಮರ್ಷೆ

ಸಿ.ಎನ್. ಪರಶಿವಮೂರ್ತಿ

ಸದಸ್ಯರೇ ಸಹಕಾರ ಸಂಸ್ಥೆಯ ಬಂಡವಾಳ, ಸದಸ್ಯರ ಪಾಲು ಬಂಡವಾಳವೇ ಸಹಕಾರ ಸಂಸ್ಥೆ ಜೀವಾಳ, ಪಾಲು ಬಂಡವಾಳವೇ ಸಂಸ್ಥೆಯ ಆರ್ಥಿಕ ಸಬಲತೆಗೆ ಆಧಾರ, ದುಡಿಯುವ ಬಂಡವಾಳವೇ ಸಹಕಾರ ಸಂಸ್ಥೆಯ ಶಕ್ತಿ, ಸದಸ್ಯರ ಹಕ್ಕು ಭಾದ್ಯತೆ ಚಲಾಯಿಸಲು ಆ ಸಹಕಾರ ಸಂಸ್ಥೆಯ ಹಕ್ಕು ಜವಾಬ್ದಾರಿ ನಿರ್ವಹಿಸಲು ಮತ್ತು ಸಂಸ್ಥೆಯ ಸೌಲತ್ತುಗಳನ್ನು ಪಡೆಯಲು ಪಾಲು ಬಂಡವಾಳವೇ ಆಧಾರ, ಸದಸ್ಯರ ಪಾಲು ಬಂಡವಾಳವಿಲ್ಲದ ಸಂಸ್ಥೆ ಅಸ್ತಿತ್ವ ಸಹಕಾರ ತತ್ವಕ್ಕೆ ವಿರುದ್ಧ.

ಸಹಕಾರ ಸಂಸ್ಥೆಯ, ಮೂಲ ಉದ್ದೇಶ "ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ" ಎಂಬ ಮೂಲ ತತ್ವದ ಜೊತೆಗೆ "ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಢೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥೆ". ಅಂದರೆ ಒಂದು ಸಹಕಾರ ಸಂಸ್ಥೆ ಧರ್ಮ ಸಂಸ್ಥೆಯಲ್ಲಿ, ಅದು ಒಂದು ಆರ್ಥಿಕ ಸಂಸ್ಥೆ. ಇದಕ್ಕೆ ಪೂರಕವಾಗಿ ಅಂತರ ರಾಷ್ಟ್ರೀಯ ಸಹಕಾರ ಒಕ್ಕೂಟ ಪ್ರಾರಂಭದಲ್ಲಿ ಆರು ಸಹಕಾರ ತತ್ವಗಳನ್ನು ರೂಪಿಸಿದೆ. ಅದರಂತೆ (1) ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ (2) ಪ್ರಜಾಸತ್ತಾತ್ಮಕ ನಿಯಂತ್ರಣ (3) ಸಮಾನ ಲಾಭ ಹಂಚಿಕೆ (4) ಬಂಡವಾಳದ ಮೇಲೆ ಮಿತವಾದ ಬಡ್ಡಿ (5) ಸಹಕಾರ ಶಿಕ್ಷಣ (6) ಸಹಕಾರಿಗಳಲ್ಲಿ ಸಹಕಾರ. ಏಳನೇ ತತ್ವವಾಗಿ 1995 ರಲ್ಲಿ ಸಮಾಜಿಕ ಕಳಕಳಿ ಎಂಬ ತತ್ವವನ್ನು ಅಂತರ ರಾಷ್ಟ್ರೀಯ ಸಹಕಾರ ಒಕ್ಕೂಟ ಸೇರಿಸಿದೆ.

ಈ ಲೇಖನದ ಉದ್ದೇಶಕ್ಕಾಗಿ ಮೊದಲು ಸಹಕಾರಿ ತತ್ವಗಳನ್ನು ಪರಿಶೀಲಿಸೋಣ. (1) ಸ್ವಯಂ ಪ್ರೇರಿತ ಮತ್ತು ಸದಸ್ಯತ್ವ – ವ್ಯಕ್ತಿಯ ಅವಶ್ಯಕತೆಯನ್ನು ಪಡೆಯಲು ಮತ್ತು ಯಾರ ಒತ್ತಡಕ್ಕೂ ಒಳಗಾಗದೆ ಸೇವೆ ಪಡೆಯಲು ಸದಸ್ಯತ್ವ ಪಡೆದ ವ್ಯಕ್ತಿ. ಸದಸ್ಯತ್ವವೆಂದರೆ ಒಂದು ಸಹಕಾರ ಸಂಸ್ಥೆಯ ಸದಸ್ಯತ್ವಕ್ಕೆ ನಿಗದಿ ಪಡಿಸಿದ ಪಾಲು ಬಂಡವಾಳ, ಸಹಕಾರ ಸಂಘಗಳ ನಿಯಮ 1960ರ, ನಿಯಮ 5(1)(ಡಿ) ಅಡಿ ಗರಿಷ್ಟ ಪ್ರಮಾಣದ ಪಾಲುಬಂಡವಾಳ ನಿಗದಿ ಪಡಿಸಲು ಸೂಚಿಸಿದೆ. (ಕರ್ನಾಟಕ ಸೌಹಾರ್ದ ಕಾಯಿದೆ 1997ರ ಕಲಂ.10 2(XI) ಮತ್ತು (XVII) ರಲ್ಲಿ ಪಾಲು ಬಂಡವಾಳದ ಬಿನ್ನ ಉಲ್ಲೇಖ ಇದೆ.) ಕನಿಷ್ಠ ಒಂದು ಷೇರನ್ನಾದರೂ ಪಡೆದಿರಬೇಕೆಂಬ ಶರತ್ತುಗೊಳಪಟ್ಟ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.4, 6, 7 ನೋಂದಣಿ ಮತ್ತು ಕಲಂ.16 ಮತ್ತು 17ರಲ್ಲಿ ಸದಸ್ಯತ್ವಕ್ಕೆ ಅರ್ಹತೆ ಮತ್ತು ಅನರ್ಹತೆ ನಿಗದಿ ಪಡಿಸಿದೆ. ಸೌಹಾರ್ದ ಕಾಯಿದೆ 1997ರ ಕಲಂ.4 ಮತ್ತು 5 ರಲ್ಲಿ ನೋಂದಾವಣೆಗೆ ಸಲ್ಲಿಸುವ ಅರ್ಜಿಯಲ್ಲಿ ಸದಸ್ಯರು ಪಾಲುಬಂಡವಾಳದ ಬಗ್ಗೆ ಉಲ್ಲೇಖ ಇದೆ.

ಈ ಎಲ್ಲಾ ಅವಕಾಶಗಳಲ್ಲಿ ಒಂದು ಸಹಕಾರ ಸಂಸ್ಥೆ ಸ್ಥಾಪಿಸಲು/ನೋಂದಾಯಿಸಲು ಪ್ರತಿ ಸದಸ್ಯ ಪಾಲು ಬಂಡವಾಳ ಹೂಡತಕ್ಕದ್ದು ಅಂದರೆ, ಸದಸ್ಯತ್ವ ಪಡೆಯಲು ಪ್ರತಿಯೊಬ್ಬ ಸದಸ್ಯನಿಗೂ ಪಾಲುಬಂಡವಾಳದ ಕನಿಷ್ಠ ಒಂದು ಷೇರು ಹೊಂದಿರಬೇಕು. ಸದಸ್ಯತ್ವ ನೀಡುವಾಗ ಪ್ರತಿ ಸಹಕಾರ ಸಂಸ್ಥೆ ಷೇರು ಬಂಡವಾಳ ಸ್ವೀಕರಿಸಿ ಆಡಳಿತ ಮಂಡಳಿ ಒಪ್ಪಿಗೆ ನೀಡಿದ ನಂತರವೇ ಸದಸ್ಯತ್ವ ನೀಡಲಾಗುತ್ತಿದೆ. (ಇದಕ್ಕೆ ಪೂರ್ವದಲ್ಲಿ ನೋಂದಾವಣೆಗೆ ಸಲ್ಲಿಸುವ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿಗಳು ನೋಂದಾವಣೆ ಆದ ದಿನಾಂಕದಂದೇ ಸದಸ್ಯರಾಗಿದ್ದಾರೆಂದು ಭಾವಿಸತಕ್ಕದೆಂದು ಕಾಯಿದೆ ಅವಕಾಶ ಕಲ್ಪಿಸಿದೆ.)

ಈ ಉದ್ದೇಶಕ್ಕಾಗಿ ನಿಬಂಧಕರು ಪ್ರತಿಯೊಂದು ವರ್ಗದ ಸಹಕಾರ ಸಂಸ್ಥೆಗಳ ನೋಂದಾವಣೆಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ನೋಂದಾವಣೆ ಮಾಡುವ ಅಧಿಕಾರಿಗಳಿಗೆ ಸೂಚಿಸಿದೆ. ಇದು ಕಾಯಿದೆಯಲ್ಲಿ 10 ವಿವಿಧ ಕುಟುಂಬಗಳಿಗೆ ಸೇರಿದ ಬಿಡಿ ಸದಸ್ಯರು ಸಾಕೆಂದಿದ್ದರೂ, ಈ ಮೇಲ್ಕಂಡ ನಿಬಂಧಕರ ಸುತ್ತೋಲೆಯನ್ನು ಕೆಳಮಟ್ಟದ ಅಧಿಕಾರಿಗಳು ಪಾಲಿಸುತ್ತಿದ್ದಾರೆ. ಈ ಮಾರ್ಗದರ್ಶಿ ಸುತ್ತೋಲೆಯಲ್ಲಿ ಪ್ರತಿಯೊಂದು ಸಹಕಾರ ಸಂಸ್ಥೆಯು ಪ್ರಸ್ತಾವನೆ ಸ್ವೀಕರಿಸಿದಾಗ ಕನಿಷ್ಠ ಪ್ರಮಾಣದ ಸದಸ್ಯರು ಮತ್ತು ಕನಿಷ್ಠ ಪ್ರಮಾಣದ ಪಾಲು ಬಂಡವಾಳ ಸಂಗ್ರಹಿಸಲು ಸೂಚಿಸುತ್ತಾರೆ. ಅದರಂತೆ ಬಂದ ಪ್ರಸ್ತಾವನೆಗಳನ್ನು ಮಾತ್ರ ನೋಂದಾಯಿಸಲಾಗುತ್ತಿದೆ. ಷರತ್ತು ಪೂರೈಸಲಾಗದಿದ್ದರೆ, ಅವಧಿಯನ್ನು ವಿಸ್ತರಿಸಲಾಗುತ್ತಿದೆ. ನೋಂದಾವಣೆ ಆದ ನಂತರದ ವಿಮರ್ಷೆ ಈ ಲೇಖನದ ಉದ್ದೇಶ ಇಲ್ಲ.

ನಮ್ಮ ರಾಜ್ಯದಲ್ಲಿ – ರಾಷ್ಟದ ಬಹುರಾಜ್ಯಗಳಲ್ಲಿ ಕೆಲವು ವರ್ಗದ ಸಹಕಾರ ಸಂಸ್ಥೆಗಳನ್ನು ಸದಸ್ಯತ್ವ ನೀಡದೆ, ಪಾಲು ಬಂಡವಾಳ ಸಂಗ್ರಹಿಸದೇ ನೋಂದಾಯಿಸಲಾಗುತ್ತಿದೆ. ಈ ಬಗ್ಗೆ ಈ ಲೇಖನದಲ್ಲಿ ವಿಮರ್ಷೆ ಮಾಡಲು ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಮಟ್ಟದಲ್ಲಿ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸೌಹಾರ್ದ ಕಾಯಿದೆಯ ಸಂಯುಕ್ತ ಸಹಕಾರಿ. ಇದರ ಜೊತೆಗೆ ಕೆಲವು ವಿದ್ಯಾಸಂಸ್ಥೆಗಳು ಮತ್ತು ಆರೋಗ್ಯ ಸೇವಾ ಸಂಸ್ಥೆಗಳನ್ನು ಸೇರಿಸಬಹುದು. ಈ ಸಹಕಾರ ಸಂಸ್ಥೆಗಳನ್ನು ನೋಂದಾಯಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಸಹಕಾರ ವಿದ್ಯಾ ಸಂಸ್ಥೆಗಳು, ಸಹಕಾರಿ ಆ ಸೂತ್ರಗಳು ವ್ಯಕ್ತಿಗತ ಸದಸ್ಯರನ್ನು ಹೊಂದಿರುವ ಸಹಕಾರ

ಸಂಸ್ಥೆಗಳು. ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದಿರುವಂತಹ ಸಹಕಾರಿ ಸಂಸ್ಥೆಗಳೆಂದರೆ ಜಿಲ್ಲಾ ಸಹಕಾರಿ ಒಕ್ಕೂಟ, ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ. ಈ ಮೂರು ಸಂಸ್ಥೆಗಳ ಸದಸ್ಯತ್ವ ಸಹಕಾರ ಸಂಸ್ಥೆಗಳಿಗೆ ಮಾತ್ರ ಅರ್ಹತೆ ಇದೆ. ಈ ಸಹಕಾರ ಸಂಸ್ಥೆಗಳು ವ್ಯಕ್ತಿಗತ ಸದಸ್ಯತ್ವ ನೀಡುವುದಿಲ್ಲ. ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದಲ್ಲಿ ವಾರ್ಷಿಕ ಚಂದಾ ನಿಗದಿ ಪಡಿಸಿದ್ದರೂ, ಆ ಹಣವನ್ನು ಸಂಸ್ಕರಿಸಿದ ಪ್ರಮಾಣದನ್ವಯ ನಿಗದಿ ಪಡಿಸಿದ್ದರೂ, ಅದನ್ನು ಪಾವತಿಸದೇ ಇದ್ದರೂ, ಕ್ರಮ ಜರುಗಿಸಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂದರ್ಭದಲ್ಲಿ ವ್ಯವಹಾರಕ್ಕೆ ಪೂರಕವಾಗಿ ನಾಮಮಾತ್ರ ಸದಸ್ಯತ್ವ ನೀಡಿರಬಹುದು. ಅಂದರೆ ಈ ಮೇಲ್ಕಂಡ ಸಂಸ್ಥೆಗಳು ಸದಸ್ಯತ್ವ ನೀಡುವಾಗ ಅವರು ಪಾವತಿಸಬೇಕಾದ ಪಾಲು ಬಂಡವಾಳದ ಅವಕಾಶವನ್ನು ತನ್ನ ಉಪನಿಯಮಗಳಲ್ಲಿ ಅಳವಡಿಸಿಕೊಂಡಿಲ್ಲ. ಅವರ ಉಪನಿಯಮಗಳಲ್ಲಿ ವಾರ್ಷಿಕ ಚಂದಾ ಹಣ ನಿಗದಿ ಪಡಿಸಿದೆ. ಪಟ್ಟಣ ಬ್ಯಾಂಕ್ ಮತ್ತು ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳ ವ್ಯವಹಾರದ ಆಧಾರದ ಮೇಲೆ ವಾರ್ಷಿಕ ಶುಲ್ಕ ನಿಗದಿ ಪಡಿಸಿದೆ. ಆದರೆ ಅವರ ಸದಸ್ಯರ ಹೆಸರಿನಲ್ಲಿ ಪಾಲು ಬಂಡವಾಳವಿಲ್ಲ. ಈ ವಾರ್ಷಿಕ ಚಂದಾ ಪಾವತಿಸದಿದ್ದರೆ ಮತದಾನದ ಹಕ್ಕನ್ನು ನೀಡುವುದಿಲ್ಲ (ಚುನಾವಣೆಯೂ ಸೇರಿ). ಇದು ಕಲಂ.20ಕ್ಕೆ ಬಾಕಿ ಎಂದು ಪರಿಗಣಿಸಿ ಮತದಾನದ ಹಕ್ಕು ನೀಡುವುದಿಲ್ಲ. ಇದರ ಜೊತೆಗೆ ಎಲ್ಲಾ ಮೇಲ್ಕಂಡ ಸಹಕಾರ ಸಂಸ್ಥೆಗಳು ಸದಸ್ಯತ್ವ ನೀಡಬೇಕಾದರೆ, ಸಂಬಂಧಪಟ್ಟ ಸಂಸ್ಥೆಯಿಂದ ಅರ್ಜಿ ಸ್ವೀಕರಿಸಿ, ಮಂಡಳಿ ತೀರ್ಮಾನವಾದ ನಂತರ ಸದಸ್ಯತ್ವ ನೀಡಲಾಗುತ್ತಿದೆ. ಇದಕ್ಕೆ ಪ್ರವೇಶ ಶುಲ್ಕ ಮತ್ತು ಅರ್ಜಿ ಶುಲ್ಕ ಪಡೆಯುತ್ತಾರೆ.

ಈ ವಿಮರ್ಷೆ ಮಾಡುವಾಗ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಶಾಸನಬದ್ಧವಾಗಿ ರಚಿಸಿದ ಸಂಯುಕ್ತ ಸಹಕಾರಿಯೂ ಸಹ ವಾರ್ಷಿಕ ಚಂದಾ ನಿಗದಿ ಪಡಿಸಿ ಪಡೆಯುತ್ತಿದೆ. ಇದಕ್ಕೆ ಮೂಲ ಕಾರಣ ಕರ್ನಾಟಕ ಸೌಹಾರ್ದ ಕಾಯಿದೆ 1997ರ ಕಲಂ.53(1) ರಲ್ಲಿನ ಅವಕಾಶ.

“ರಾಜ್ಯದಲ್ಲಿ ಒಂದು ಸಂಯುಕ್ತ ಸಹಕಾರಿ ಇರತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಎಲ್ಲಾ ಸಹಕಾರಿಗಳು ಅಂಥ ಸಂಯುಕ್ತ ಸಹಕಾರಿಯು ಸದಸ್ಯರಾಗಿರತಕ್ಕದ್ದು.”

ಈ ಮೇಲ್ಕಂಡ ಅವಕಾಶದಂತೆ, ಸೌಹಾರ್ದ ಕಾಯಿದೆಯಲ್ಲಿ ನೋಂದಾಯಿತವಾದ ಸಹಕಾರಿ, ಸಂಯುಕ್ತ ಸಹಕಾರಿ ಸದಸ್ಯತ್ವವನ್ನು ಅದೇ ದಿನಾಂಕದಂದು ಪಡೆಯುತ್ತಿದೆ. ಇದಕ್ಕೆ ಸದಸ್ಯತ್ವಕ್ಕೆ ಅರ್ಜಿ ನೀಡಬೇಕಾಗಿಲ್ಲ ಮತ್ತು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ. ಅದಕ್ಕಾಗಿಯೇ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳಿಗೆ ವಾರ್ಷಿಕ ಚಂದಾ ನಿಗದಿ ಪಡಿಸಲು ಅವಕಾಶ ನೀಡಿದೆ. ಇದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆ ಕಲಂ.53ರಲ್ಲಿ ನಿಬಂಧಕರು ನಿರ್ವಹಿಸಬೇಕಾದ ಹಲವಾರು ಅಧಿಕಾರ/ಪ್ರಕಾರ್ಯಗಳನ್ನು ಈ ಸಂಯುಕ್ತ ಸಹಕಾರಿಗೆ ನೀಡಿದೆ. ಅವುಗಳೆಂದರೆ

**(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;**

**(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು;**

**(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;**

**(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;**

[(ಇ) *****]

**(ಎಫ್) ಅಗತ್ಯವಿರುವಾಗ ಮಂಡಳಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದರಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;**

**(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;**

**(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;**

**(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;**

**(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;**

**(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;**

**(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;**

**(ಎಂ) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;**

**(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;**

**(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು;**

**(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು;**

**(ಕ್ಯೂ) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;**

**(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು**

**ಕೈಗೊಳ್ಳುವುದು;**

**(ಎಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;**

[(ಟಿ) ******]

**[(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು: ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.]**

ಈ ಮೇಲ್ಕಂಡ ಅವಕಾಶದಂತೆ ಸಂಯುಕ್ತ ಸಹಕಾರಿ ಒಂದು ಶಾಸನ ಬದ್ದ ಪ್ರಕಾರ್ಯ ನಿರ್ವಹಿಸುವುದರಿಂದ ಮತ್ತು ನಿಬಂಧಕರ ಅಧಿಕಾರ ನಿರ್ವಹಿಸುತ್ತಿರುವುದರಿಂದ, ಆ ಸಂಸ್ಥೆಯು ಕಾರ್ಯಾಲಯ ನಿರ್ವಹಣೆಗೆ ವಾರ್ಷಿಕ ಚಂದಾ ನಿಗದಿ ಪಡಿಸುವುದರಲ್ಲಿ ತೊಡಕಿಲ್ಲ. ಆದರೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ, ಇಂತಹ ಅವಕಾಶ ಇಲ್ಲದೇ ಇರುವುದರಿಂದ, ಈ ಎಲ್ಲಾ ಒಕ್ಕೂಟ ಮತ್ತು ಮಹಾಮಂಡಳಗಳ ನೋಂದಾವಣೆ ಮಾಡುವಾಗ, ಈ ಎಲ್ಲಾ ಸಂಸ್ಥೆಗಳ ಆರ್ಥಿಕ ಸಂಸ್ಥೆಗಳು ಮತ್ತು ಅದರ ವ್ಯವಹಾರಿಕವಾಗಿ ಕಾರ್ಯನಿರ್ವಹಿಸಬೇಕಾದರೆ, ಸದಸ್ಯರಿಂದ ಪಾಲುಬಂಡವಾಳ ಸ್ವೀಕರಿಸಲೇಬೇಕು. ಇದರ ಜೊತೆಗೆ ಪಾಲು ಬಂಡವಾಳ ಹೂಡಿ ಆ ಸಂಸ್ಥೆಯ ಮಾಲೀಕನಾದಾಗ ಮಾತ್ರ ಅದರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಿಸಲು ಅರ್ಹ. ಸದಸ್ಯನಲ್ಲದವನಿಗೆ ಯಾವ ಶರತ್ತನ್ನು ನಿಗದಿ ಪಡಿಸಲಾಗದು. ಇದರ ಜೊತೆಗೆ ಕೆಲವು ಸಂದರ್ಭದಲ್ಲಿ ಸದಸ್ಯನಾಗಿದ್ದರೂ ಮತದಾನದ ಹಕ್ಕನ್ನು ಕಳೆದುಕೊಳ್ಳುವ ಬಗ್ಗೆ ಕಲಂ.20(ಬಿ)(3) ರಲ್ಲಿ ನಿರ್ಬಂದ ವಿಧಿಸಿರುವುದನ್ನು ಗಮನಿಸಿದಾಗ ಸದಸ್ಯತ್ವದ ಮಹತ್ವ ತಿಳಿಯುತ್ತದೆ. ಆದ್ದರಿಂದ ಯಾವುದೇ ಸಹಕಾರ ಸಂಸ್ಥೆಯಲ್ಲಿ ಸದಸ್ಯತ್ವ ಪಡೆಯಲು ಪಾಲು ಬಂಡವಾಳದ ಅವಶ್ಯಕತೆ ಇದೆ. ಇದರ ಆಧಾರದ ಮೇಲೆಯೇ ಷೇರು ವರ್ಗಾವಣೆ, ಷೇರು ಮೌಲ್ಯಮಾಪನ, ಷೇರು ಹೊಂದಾಣಿಕೆ ಬಗ್ಗೆ ಕಾಯಿದೆಯಲ್ಲಿ ಸೇರಿಸಿದೆ.

ಇದಕ್ಕೆ ಮತ್ತೊಂದು ವಿವರಣೆ ಅವಶ್ಯಕ, ಒಂದು ಜಿಲ್ಲಾ ಸಹಕಾರ ಒಕ್ಕೂಟ, ಆ ಜಿಲ್ಲೆಯಲ್ಲಿರುವ ಎಲ್ಲಾ ಸಹಕಾರ ಸಂಸ್ಥೆಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವುದಿಲ್ಲ. ಅರ್ಜಿ ನೀಡಿದರೂ, ಸದಸ್ಯತ್ವ ನೀಡುವುದಿಲ್ಲ, ಚುನಾವಣೆ ಸಂದರ್ಭದಲ್ಲಿ, ಅವರಿಗೆ ಅನುಕೂಲವಲ್ಲದ ಸಹಕಾರ ಸಂಸ್ಥೆಗಳಿಗೆ ಸದಸ್ಯತ್ವ ನೀಡಿದರೆ ಚುನಾವಣೆಯಲ್ಲಿ ತೊಡಕಾಗುತ್ತದೆ ಎಂದು. ಒಂದು ಉದಾಹರಣೆ ನೀಡುವುದಾದರೆ, ಒಂದು ಜಿಲ್ಲೆಯಲ್ಲಿ ನೋಂದಾಯಿತ ಸಹಕಾರ ಸಂಘಗಳು 1200 ಇದ್ದರೂ ಜಿಲ್ಲಾ ಸಹಕಾರ ಒಕ್ಕೂಟದ ಸದಸ್ಯರು 250 ಮಾತ್ರ. ಸದಸ್ಯತ್ವ ಸ್ವೀಕರಿಸುವುದು, ಆಡಳಿತ ಮಂಡಳಿ ಅಧಿಕಾರವಿದ್ದರೂ, ಮುಕ್ತ ಮತ್ತು ಸ್ವಯಂ ಪ್ರೇರಿತ ಸದಸ್ಯತ್ವಕ್ಕೆ ವಿರುದ್ದವಾಗಿದ್ದರೂ, ಇಂತಹ ಒಕ್ಕೂಟಗಳು ಈಗಲೂ ಅಸ್ತಿತ್ವದಲ್ಲಿದೆ. ಈ ಸಂಸ್ಥೆಗಳೂ ಲಾಭ, ನಷ್ಟ ಖಾತೆಯನ್ನು ನಿರ್ವಹಿಸುವುದಿಲ್ಲ, ಹಾಗೂ ಆದಾಯ ಮತ್ತು ಖರ್ಚು ಮಾತ್ರ ನಿರ್ವಹಿಸುತ್ತವೆ. ಆದರೆ ಸಹಕಾರ ಸಂಸ್ಥೆಗಳು ಒಂದು ಆರ್ಥಿಕ ಸಂಸ್ಥೆ ಎಂಬ ತತ್ವಕ್ಕೆ ವಿರುದ್ದವಾಗಿ ಇವು ಕೆಲಸ ನಿರ್ವಹಿಸುತ್ತಿವೆ. ಇದನ್ನು ನಿಬಂಧಕರು ನಿಯಂತ್ರಿಸಲೇಬೇಕು. ಇಲ್ಲವಾದರೆ ಇಂತಹ ಸಂಸ್ಥೆಗಳಿಗೆ ಸಹಕಾರ ಸಂಘಗಳ ಕಾಯಿದೆ ಕಲಂ.120ರಡಿ ನೋಂದಾವಣೆ ಶರತ್ತುಗಳಲ್ಲಿ ವಿನಾಯ್ತಿ ನೀಡಬೇಕು. ಕಲಂ.120 ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.

"ಕಲಂ.120 ನೋಂದಣಿ ಶರತ್ತುಗಳಿಂದ ಸಂಘಗಳಿಗೆ ವಿನಾಯಿತಿಯನ್ನು ನೀಡುವ ಅಧಿಕಾರ.

"ಈ ಕಾಯ್ದೆಯಲ್ಲಿ ಏನೇ ಅಡಕವಾಗಿದ್ದರೂ, ರಾಜ್ಯ ಸರ್ಕಾರವು, ಪ್ರತಿ ಸಂದರ್ಭದಲ್ಲಿಯೂ ರಾಜ್ಯ ಪತ್ರದಲ್ಲಿ ವಿಶೇಷ ಆದೇಶವನ್ನು ಪ್ರಕಟಿಸುವುದರ ಮೂಲಕ ಮತ್ತು ರಾಜ್ಯ ಸರ್ಕಾರವು ವಿಧಿಸಬಹುದಾದಂತಹ ಷರತ್ತುಗಳೇನಾದರೂ ಇದ್ದಲ್ಲಿ, ಅಂತಹ ಷರತ್ತುಗಳಿಗೊಳಪಟ್ಟು, ನೋಂದಣಿಗೆ ಸಂಬಂಧಿಸಿದಂತೆ ಈ ಕಾಯ್ದೆಯಲ್ಲಿ ವಿಧಾಯಕ ಮಾಡಿರತಕ್ಕವುಗಳ ಪೈಕಿ ಯಾವುದೇ ಅಗತ್ಯಗಳಿಂದ ಯಾವುದೇ ಸಹಕಾರ ಸಂಘವನ್ನು ವಿನಾಯ್ತಿಗೊಳಿಸಬಹುದು."

ಈ ಅಧಿನಿಯಮದಲ್ಲಿ ಏನೇ ಇದ್ದರೂ ಸಹ ಅಥವಾ ಕಲಂ.121 ರಲ್ಲಿ ಈ ಕಾಯಿದೆಯ ಕೆಲವು ಶರತ್ತುಗಳು ಅನ್ವಯವಾಗುವುದಿಲ್ಲವೆಂದು ವಿನಾಯ್ತಿ ನೀಡಬಹುದು. ಕಲಂ.121 ಈ ಕೆಳಕಂಡಂತೆ ಇದೆ.

"ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪ್ರಕಟಿಸುವ ಮೂಲಕ ಯಾವುದೇ ಸಹಕಾರ ಸಂಘವನ್ನು ಅಥವಾ ಯಾವುದೇ ಸಹಕಾರ ಸಂಘಗಳ ವರ್ಗಗಳನ್ನು ಈ ಕಾಯ್ದೆಯ ಯಾವುದೇ ಉಪಬಂಧಗಳಿಂದ ವಿನಾಯ್ತಿಗೊಳಿಸಬಹುದು ಅಥವಾ ಅಂತಹ ಉಪಬಂಧಗಳು ಅಂತಹ ಸಂಘಕ್ಕೆ ಅಥವಾ ಸಂಘಗಳ ವರ್ಗಗಳಿಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಮಾರ್ಪಾಡುಗಳೊಂದಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು."

### ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ

"ಸಂಯುಕ್ತ ಸಹಕಾರಿ" ಹೊರತು ಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ ನೋಂದಾವಣೆಯಾದ ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಸದಸ್ಯರಿಂದ ಪಾಲು ಬಂಡವಾಳ ಪಡೆದು ಸದಸ್ಯತ್ವ ನೀಡದೆ ಇದ್ದರೆ, ಅದನ್ನು ಸಹಕಾರ ಸಂಸ್ಥೆ ಎಂದು ಕರೆಯಲಾಗದು. ಸಹಕಾರ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು, ಧರ್ಮ ಸಂಸ್ಥೆಗಳಲ್ಲವೆಂದು ತಿಳಿಯಬೇಕು ಮತ್ತು ಹಾಗೇ ಮಾಡಲೇಬೇಕಾದರೆ ಮೇಲೆ ತಿಳಿಸಿದಂತೆ ಕಲಂ.120 ಮತ್ತು 121ರಲ್ಲಿ ಅಧಿಸೂಚನೆ ಮೂಲಕ ಮಾತ್ರ ಕಾರ್ಯನಿರ್ವಹಿಸಬಹುದು.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಡೆದ ಪ್ರಬಂದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಪ್ರಬಂದ

# ವಿಷಯ: ಮಹಿಳಾ ಸಬಲೀಕರಣ ಏಕೆ? ಹೇಗೆ?

ವೆಂಕಟೇಶನಾಯ್ಕ

ಪೀಠಿಕೆ

"ಮಮತೆ ತೋರುವ ದೇವರಾಗಿ
ಹಾಗೆ ಉಳಿದುಕೊಂಡಳು ಉಸಿರಲಿ ತಾಯಿಯಾಗಿ
ಮನೆಯ ಬೆಳಗುವ ದೀಪವಾಗಿ
ಮನೆಗೆ ಬಂದಳು ಮಡದಿಯಾಗಿ
ಪ್ರೀತಿ ವಾತ್ಸಲ್ಯದ ಚಿಲುಮೆ ಹರಿಸಿ
ಅಪ್ಪಿಕೊಂಡಳು ಮನೆಯ ಮಗಳಾಗಿ
ಏ ಹೆಣ್ಣೆ ಹೇಳು
ಹೇಗೆ ತೀರಿಸಲಿ ಈ ನಿಮ್ಮ ಋಣವ
ಯಕಶ್ಚಿತ ಒಂದು ಮಾನವ ಜೀವಿಯಾಗಿ"

ಮಹಿಳಾ ಸಬಲೀಕರಣ ಎಂದರೆ ಮಹಿಳೆಯರಲ್ಲಿ ಬೌದ್ಧಿಕವಾಗಿ, ರಾಜ–ಕೀಯವಾಗಿ, ಸಾಮಾಜಿಕ ಹಾಗೂ ಆರ್ಥಿಕ ಬಲವನ್ನು ಹೆಚ್ಚಿಸುವುದು. ಸಬಲೀಕರಣ ಶಕ್ತತೆ ಎಂದರೆ ಸಾಮಾನ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದು ಆಗಿದೆ. ಅಂದರೆ ನನ್ನ ಪ್ರಕಾರ ಮಹಿಳೆಯರು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಅವರ ಇಚ್ಚೆಗೆ ಅನುಸಾರವಾಗಿ ಆಯ್ಕೆ ಮಾಡುವ ಸ್ವಯಂ ಪ್ರೇರಿತವಾಗಿ ನಿರಂತರ ಬದಲಾವಣೆಯ ಬೆಳವಣಿಗೆ ಸಂಖ್ಯೆಯಲ್ಲಿ ಭಾಗವಹಿಸುವ ಹಾಗೂ ಸಾಮಾಜಿಕವಾಗಿ ಆರ್ಥಿಕವಾಗಿ ಹಾಗೂ ಧಾರ್ಮಿಕವಾಗಿ ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿ ಸ್ವತಂತ್ರವಾಗಿ ಭಾಗಿಯಾಗುವ ಯಾರ ಭಯವೂ ಇಲ್ಲದಂತೆ ಸ್ವ ದುಡಿಮೆಯೊಂದಿಗೆ ಆರ್ಥಿಕವಾಗಿ ಶಕ್ತಳಾಗುವ ಸಾಮರ್ಥ್ಯವನ್ನು ವೃದ್ಧಿಸುವುದು.

### ವೇದಗಳ ಕಾಲದಲ್ಲಿ ಮಹಿಳೆಯರ ಸ್ಥಿತಿಗತಿ :

ನಾಗರಿಕತೆಗಳ ಕಾಲದಲ್ಲಿ ಒಂದು ಉದಾಹರಣೆ ಸಿಂಧೂ ಬಯಲಿನ ನಾಗರಿಕತೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶವಿತ್ತು ಇದಕ್ಕೆ ಸಿಕ್ಕ ಪುರಾವೆ ಎಂದರೆ ಮಣ್ಣಿನ ಮಹಿಳೆಯ ವಿಗ್ರಹ ನಂತರ ವೇದಗಳ ಕಾಲದಲ್ಲಿ ಕೂಡ ಆಕೆಗೆ ಸಮಾನ ಅವಕಾಶವಿತ್ತು ಎನ್ನಲಾಗಿದೆ ಹೇಗೆಂದರೆ ಪ್ರಾಚೀನ ವೇದದಲ್ಲಿ

- ಅವಳು ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಬಹುದಾಗಿದೆ ವೇದಗಳನ್ನು ಕಲಿಯುವ ಅವಕಾಶವಿತ್ತು
- ಸ್ವಯಂವರ ಪದ್ಧತಿ ಜಾರಿಯಲ್ಲಿತ್ತು
- ವಿದುವೆಯರು ಮರು ವಿವಾಹವಾಗಲು ಅವಕಾಶ ಕಲ್ಪಿಸಲಾಗಿತ್ತು.
- ಸ್ವಯಂವರ ಪದ್ಧತಿ ಜಾರಿಯಲ್ಲಿತು
- ವೇದಗಳ ರಚನೆಯಲ್ಲೂ ಅವರ ಕೊಡುಗೆ ಇತ್ತು

ಉದಾಹರಣೆಗೆ ಆ ಕಾಲದ ಪ್ರಸಿದ್ಧ ವಚನಕಾರ್ತಿಯರು ಎಂದರೆ ಗಾರ್ಗಿ ಮೈತ್ರೇಯಿ ಲೋಕ ಮರ ಇತ್ಯಾದಿ ವೇದಗಳ ಕಾಲದ ಮಹಿಳಾ ವಿದ್ವಾಂಸರಾಗಿದ್ದರು

### ವೇದಗಳ ನಂತರದ ಮಹಿಳೆಯರ ಸ್ಥಿತಿಗತಿ

- ಮಹಿಳಾ ಸಾಗಾಣಿಕ
- ಸಾಮಾಜಿಕ ಜಾಲತಾಣಗಳಲ್ಲಿ ಮಹಿಳೆಯರ ಶೋಷಣೆ
- ವಿದ್ಯಾಭ್ಯಾಸದಿಂದ ವಂಚಿತರಾಗಿ ಬಾಲ ಕಾರ್ಮಿಕರಾಗಿ ದುಡಿಸಿಕೊಳ್ಳುವುದು
- ದುಡಿಮೆ ಸ್ಥಳದಲ್ಲಿ ಅವರಿಗೆ ಹಲವಾರು ಹಿಂಸೆಗೆ ಒಳಪಡಿಸಿ ಸರಿಯಾದ ಸವಲತ್ತನ್ನು ಕಲ್ಪಿಸಿಕೊಡುವುದು

ಇನ್ನು ಮಧ್ಯ ಯುಗದಲ್ಲಿ ಹೇಗಿತ್ತೆಂದರೆ ಹೆಣ್ಣು ಹುಟ್ಟುವುದು ಒಂದು ಭಾರ ಎಂಬ ಭಾವನೆ ಜನರಲ್ಲಿ ಬೇರುರಿತ್ತು. ಆದ್ದರಿಂದ ಅ ಕಾಲದಲ್ಲಿ ಕೆಲವು ಅನಿಷ್ಟ ಪದ್ದತಿಗಳು ಜಾರಿಗೆ ಬಂದವು

- ಮಹಿಳಾ ಸಾಗಣಿಕೆ
- ಸಾಮಾಜಿಕ ಜಾಲಾತಾಣಗಳಲ್ಲಿ ಮಹಿಳಾ ಶೋಷಣೆ
- ವಿದ್ಯಾಭ್ಯಾಸದಿಂದ ವಂಚಿತರಾಗಿ ಬಾಲಕಾರ್ಮಿಕರಾಗಿ ದುಡಿಸಿಕೊಳ್ಳುವುದು
- ದುಡಿಮೆ ಸ್ಥಳಗಳಲ್ಲಿ ಸರಿಯಾದ ಸವಲತ್ತು ನೀಡದಿರುವುದು

ಈಗ ಮಹಿಳೆಯರಿಗೆ ಸಬಲೀಕರಣ ಏಕೆ ಬೇಕು ಎಂಬುದನ್ನು ನೋಡೋಣ,

ಮಹಿಳೆಯರು ಕೂಡ ಮನುಷ್ಯ ಜೀವಿ ಅವಳಿಗೆ ತನ್ನದೇ ಆದ ಸಾಮರ್ಥ್ಯ ಹಾಗೂ ಶಕ್ತಿ ಇದೆ ಅವಳಿಗೂ ಆತ್ಮಾಭಿಮಾನದ ಜೊತೆಗೆ ಸ್ವಾವಲಂಬಿಯಾಗಿ ಬದುಕುವ ಅರ್ಹತೆ ಇದೆ ಇಷ್ಟೇ ಅಲ್ಲದೆ ಸಮಾಜದ ಏಳಿಗೆಯಲ್ಲಿ ಅವಳ ಪಾತ್ರ ಬಹುಮುಖ್ಯವಾಗಿದೆ ಎಲ್ಲರಂತೆ ಬೆಳೆಯುವ ಹಾಗೂ ಬೇರೆ ಬೇರೆ ಸ್ವಾತಂತ್ರ್ಯ ಸಾಮಾಜಿಕವಾಗಿ ಆರ್ಥಿಕವಾಗಿ ಧಾರ್ಮಿಕವಾಗಿ ಎಲ್ಲ ರಂಗಗಳಲ್ಲಿ ಸಾಮಾನ್ಯವಾಗಿ ಬೆಳೆಯುವ ಅವಕಾಶ ಅಗತ್ಯತೆ ಹೆಚ್ಚಾಗಿದೆ ಆದ್ದರಿಂದ ಅವಳನ್ನು ದುರ್ಬಳಕೆಯನ್ನು ಕಾಣದೆ ಅವಳಿಗೆ ತನ್ನ ಸಾಮರ್ಥ್ಯದ ಅರಿವು ಮೂಡಿಸಿ ಸರಳವಾಗಿ ಮಾಡಲು ಮಹಿಳಾ ಸಬಲೀಕರಣದ ಅಗತ್ಯತೆ ಹೆಚ್ಚಾಗಿದೆ.

ಮಹಿಳಾ ಸಬಲೀಕರಣ ಮಾಡುವುದು ಹೇಗೆ ಎಂಬುದನ್ನು ನೋಡೋಣ,

ಇತ್ತೀಚೆಗೆ ಭಾರತದಲ್ಲಿ ಮಹಿಳೆಯರ ಶಿಕ್ಷಣ ರಾಜಕೀಯ ಮಾಧ್ಯಮ ಕಲೆ

ಸಾಂಸ್ಕೃತಿಕ ಸೇವಾ ವಿಭಾಗಗಳು ಕ್ರೀಡೆ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ ಮೂಲ ಕಾರಣ ಭಾರತೀಯ ಸಂವಿಧಾನ ಮಹಿಳೆಯರಿಗೆ ಕೊಟ್ಟ ಕೆಲವು ವಿಧಿಗಳು. ಉದಾಹರಣೆಗೆ ಅನುಚ್ಛೇದ 14 ರಲ್ಲಿ ಸಮಾನತೆಯ 39 ರಲ್ಲಿ ರಾಜ್ಯದಿಂದ ತಾರತಮ್ಯ ಇರಕುಡದು 39(ಡಿ) ಯಲ್ಲಿ ಸಮಾನ ಅವಕಾಶ ಇತ್ಯಾದಿಗಳನ್ನು ಖಾತ್ರಿಪಡಿಸಿದೆ. ನಂತರ ಭಾರತದಲ್ಲಿ ಮಹಿಳೆಯರ ಶೋಷಣೆ ತಡೆಯಲು ಕೆಲವು ಕಾರ್ಯ ಗಳನ್ನು ಜಾರಿಗೆ ತರಲಾಗಿದೆ ಅವುಗಳೆಂದರೆ

- ಬಾಲ್ಯ ವಿವಾಹ ನಿಷೇದ ಕಾಯ್ದೆ–2006
- ವರದಕ್ಷಿಣೆ ನಿಷೇದ ಕಾಯ್ದೆ–1961
- ಸಮಾನ ವೇತನ ಕಾಯ್ದೆ–1976
- ಶಿಶುಹತ್ಯೆ ನಿಷೇದ ಕಾಯ್ದೆ–1971
- ಸತಿಪದ್ದತಿ ನಿಷೇದ ಕಾಯ್ದೆ–1829

ಉದಾ: * ಬಾಲ್ಯ ವಿವಾಹ * ಸತಿಪದ್ದತಿ * ಜೋಹಾರ್ ಪದ್ದತಿ * ಪರ್ದ ಪದ್ದತಿ * ದೇವದಾಸಿ ಪದ್ದತಿ ಇದಕ್ಕೆ ನಿದರ್ಶನವೆಂದರೆ ದೆಹಲಿ ಸುಲ್ತಾನರ ಕಾಲದಲ್ಲಿ ರಾಜ್ಯವಾಳಲು ಹೊದ ರಜಿಯ ಸುಲ್ತಾನ್ ತಮ್ಮ ಸಾಮ್ರಾಜ್ಯದಲ್ಲಿನ ಕುತಂತ್ರಿಗಳಿಂದ ಹತಳಾಗಿದರು. ಮಹಿಳಾ ಸಬಲೀಕರಣದ ಅಗತ್ಯತೆ ಹೆಚ್ಚಾಗಿದೆ.

### ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಸ್ಥಿತಿಗತಿ:

ಬ್ರಿಟಿಷರು ಭಾರತವನ್ನು ಸುಮಾರು 200 ವರ್ಷಗಳ ಕಾಲ ಆಳಿದರು ಅ ಸಂದರ್ಭದಲ್ಲಿ ಭಾರತೀಯ ಮಹಿಳೆಯ ಸ್ಥಿತಿಗತಿ ತುಂಬ ಶೂಚನೀಯವಾಗಿತ್ತು, ಮೌಢ್ಯ ಅಂಧಕಾರದಲ್ಲಿ ಸಂಪ್ರದಾಯಗಳ ಕಟಾಲೇಗಳಲ್ಲಿ ಅವಳನ್ನು ನೂಕಿ ಅತಿ ಕ್ರೋರವಾಗಿ ನಡೆಸಿಕೋಳ್ಳುತ್ತಿದರು ಇದನ್ನು ಸುಧಾರಿಸುವ ದೃಷ್ಟಿಯಿಂದ ಕೆಲವು ಬದಲಾವಣೆಗಳನ್ನು ತಂದ ಬ್ರಿಟಿಷರನ್ನು ಭಾರತದ ಸಂಪ್ರದಾಯವಾದಿಗಳು ತೀವ್ರವಾಗಿ ಟೀಕಿಸಲಾರಂಭಿಸಿದರು ಈ ಕಾಲದ ಕೆಲವು ಪ್ರಮುಕ ಮಹಿಳೆಯರು ಎಂದರೆ, ಸರೂಜಿನಿನಾಯ್ದು, ಅನಿಬೆಸೆಂಟ್, ಕದಂಬಿಗಂಗೂಲಿ, ಝನ್ಸಿರಾಣಿಲಕ್ಷಿಬಾಯಿ ಕಿತ್ತೂರುರಾಣಿಚನ್ನಮ್ಮ ಇತ್ಯಾದಿ.

### ಸ್ವತಂತ್ಯ ನಂತರ ಅವರ ಸ್ಥಿತಿ–ಗತಿ

ಸ್ವಾತಂತ್ರ್ಯ ಬಂದು ಸುಮಾರು ಏಳು ದಶಕಗಳು ಕಳೆದರೂ ಆಕೆಯ ಸ್ಥಿತಿ ಸುಧಾರಿಸಲು ಹರಸಾಹಸ ಪಡುವಂತಾಗಿದೆ ಇದಕ್ಕೆ ಮೂಲ ಕಾರಣವೆಂದರೆ ಭಾರತೀಯರಲ್ಲಿ ಇರುವ ಮೌಢ್ಯತೆ ಕಂದಾಚಾರ ಹಾಗೂ ಮೂಢನಂಬಿಕೆಗಳು ಇಂದಿನ ಈ ದಿನಗಳಲ್ಲಿ ಎದುರಿಸುತ್ತಿರುವ ಕೆಲವು ಪ್ರಮುಖ ಸಮಸ್ಯೆಗಳೆಂದರೆ

- ಬಾಲ್ಯವಿವಾಹ
- ವರದಕ್ಷಿಣೆ ಕಿರುಕುಳ
- ಶಿಶು ಹತ್ಯೆ ಲೈಂಗಿಕ ಕಿರುಕುಳ
- ದುಡಿಮೆ ಸ್ಥಳದಲ್ಲಿ ಲೈಂಗಿಕವಾಗಿ ಹಿಂಸೆ ನೀಡುವುದು
- ಕೌಟುಂಬಿಕ ಹಿಂಸಾಚಾರ ಅವಳನ್ನು ಭೋಗದ ವಸ್ತುವಂತೆ ಬಳಸುವುದು
- ವಿಧವಾ ಪುನರ್ ವಿವಾಹ ಕಾಯ್ದೆ – 1891

ಇವುಗಳ ಜೊತೆಗೆ ಇಂದಿನ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ ಅವುಗಳೆಂದರೆ.

- ಬೇಟಿ ಬಚಾವೋ ಬೇಟಿ ಪಡಾವೋ
- ಸುಕನ್ಯಾ ಸಮೃದ್ಧಿ ಯೋಜನೆ
- ಉಜ್ವಲ ಯೋಜನೆ
- ಧನಲಕ್ಷ್ಮಿ ಯೋಜನೆ
- ಮಾತೃಪೂರ್ಣ ಯೋಜನೆ
- ಭಾಗ್ಯಲಕ್ಷ್ಮಿ ಯೋಜನೆ ಇತ್ಯಾದಿ.

ಇದರೊಂದಿಗೆ ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣವನ್ನು ಹೆಚ್ಚಿನ ಪ್ರೋತ್ಸಾಹ ನೀಡುತ್ತದೆ. ಸ್ತ್ರೀಯರು ಸ್ವಾವಲಂಬಿಯಾಗಲು ಉದ್ಯೋಗಗಳಲ್ಲಿ ಹೆಚ್ಚು ಅವಕಾಶಗಳನ್ನು ಒದಗಿಸಿದೆ. ಲೈಂಗಿಕ ಕಿರುಕುಳ ದೌರ್ಜನ್ಯ ಮಾನ ಭಂಗ ಮೊದಲಾದ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದಕ್ಕಾಗಿ ಕಠಿಣ ಕಾನೂನುಗಳನ್ನು ಜಾರಿಗೆ ತಂದಿದೆ.

ಇತ್ತೀಚಿಗೆ ಪ್ರೇಮ ವಿವಾಹಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಪ್ರೇಮ ವಿವಾಹ ಮಾಡಿಕೊಂಡಿದ್ದ ಹೆಣ್ಣು ಮಕ್ಕಳು ತಮ್ಮ ಕುಟುಂಬದ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಸ್ವಸಹಾಯ ಸಂಘಗಳು ಸ್ವಯಂ ಉದ್ಯೋಗಿಗಳ ಸಂಘದಂತಹ ಸರ್ಕಾರೇತರ ಸಂಘಗಳು ಮಹಿಳೆಯರ ಹಕ್ಕುಗಳ ಬಗ್ಗೆ ಪ್ರಮುಖ ಪಾತ್ರವಹಿಸಿದೆ ಉದಾಹರಣೆಗೆ : ಸುಮಂಗಲಿ ಸೇವಾಶ್ರಮ.

### ಉಪಸಂಹಾರ

ಹೆತ್ತ ತಾಯಿ ಹೆಣ್ಣು, ನಮ್ಮನ್ನು ಹೊತ್ತು ನಿಂತಿರುವ ಭೂ ತಾಯಿ ಹೆಣ್ಣು, ಮನೆಗು ಮನಸ್ಸಿಗೂ ನಂದಾದೀಪ ಹೆಣ್ಣು, ಸಾಧನೆಯ ಪ್ರತೀಕ ಹೆಣ್ಣು ಅಂತ ಹೆಣ್ಣನ್ನು ಅವಮಾನಿಸಿ ಬದುಕುವ ಈ ಬದುಕು ಪ್ರಾಣಿಗಿಂತಲೂ ಅವಮಾನವಿಯ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅಪಾರವಾದ ಗೌರವ ಇದೆ. ಆ ಗೌರವಕ್ಕೆ ಧಕ್ಕೆ ಬಾರದಂತೆ ಅವಳನ್ನು ನೋಡಿಕೊಳ್ಳೋಣ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ಗಾದೆಯಂತೆ ಆಕೆಯನ್ನು ಸ್ವತಂತ್ರಗೊಳಿಸಿ ಅವಳ ಸಾಧನೆಯಲ್ಲಿ ನಾವು ಕೈ ಜೋಡಿಸೋಣ.

**ಜೈ ಕರ್ನಾಟಕ ಮಾತೆ ಜೈ ಸಹಕಾರ**

# ಸಂಭ್ರಮದ, ಹೊಸಚೈತನ್ಯದ ಧ್ಯೋತಕ – ಯುಗಾದಿ

ಶಂಕರ ಎಸ್

**ಯುಗ – ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ**
**ಹೊಸವರುಷಕೆ – ಹೊಸಹರುಷವ ಹೊಸತು ಹೊಸತು ತರುತಿದೆ**
**– ದ.ರಾ ಬೇಂದ್ರೆ**

ಪ್ರಕೃತಿಯು ತನ್ನ ಹಳೆಯ ತೊಗಲನ್ನು ಬಿಟ್ಟು ಹೊಸತೊಗಲನ್ನು ಮೈವೆತ್ತುತ್ತಾ ಬರುವ ಈ ಸುಸಮಯದಲ್ಲಿ ಇಡೀ ನಾಡು ಹೊಸತನದ ಗೆಟಪ್ಪಿನಲ್ಲಿದೆ. ಗಿಡ–ಮರ–ಬಳ್ಳಿಗಳು ತಮ್ಮ ಹಳೆಯ ರೂಪವನ್ನು ಬದಲಾಯಿಸಿಕೊಂಡು ಹೊಂಬಣ್ಣದ ಚಿಗುರೆಲೆಯನ್ನು ಹೊದ್ದು ಚಿನ್ನಾಟವಾಡುತ್ತಾ ತೂಗಾಡುತ್ತಿವೆ. ಸಂತನ ಆಗಮನದಿಂದ ಪುಳಕಿತರಾದಂತೆ ಇಡೀ ನಾಡು ತೋರುತ್ತಿದೆ. ಇಂತಹ ಹೊತ್ತಲ್ಲಿ ಇದಕ್ಕೆ ಸೆಡ್ಡು ಹೊಡೆಯುವಂತೆ ಸೂರ್ಯನು ತನ್ನ ರಣಬಿಸಿಲಿನಝಳವನ್ನು ತೋರುತ್ತಾ ಕುಹಕವಾಡುವಂತೆ ಜನರು ಬೆವರಲ್ಲಿ ಮೀಯುತ್ತಾ ಬಸವಳಿದಿದ್ದಾರೆ.

ಆದರೂ ವಸಂತ ಋತುವಿನ ಚೆಲುವು, ಮೋಹಕತೆಗೆ ಆನಂದ ತುಂದಿಲರಾಗಿದ್ದಾರೆ. ಅಲ್ಲದೆ, ಬಿಸಿಲ ಬೇಗೆಯ ನಿವಾರಣೆಗೆ ಮದ್ದೆಂಬಂತೆ ಹೊಂಗೆಯ ನೆರಳು, ತುಂಗೆಯ ಕಂಪು, ಬೇವು–ಮಾವುಗಳ ಗೊಂಚಲು – ಗೊಂಚಲುಗಳ ತೊನೆದಾಟ ಬಸವಳಿದ ಮನಕ್ಕೆ ಉಲ್ಲಾಸ ನೀಡುವಂತ್ತಿದೆ. ಬಿಸಿಲ ಬೇಗೆಯನ್ನು ತುಂಗೆ ಹೂವಿನ ಕಂಪು, ಮರಿದುಂಬಿಗಳ ಝೇಂಕಾರ, ಹೊಂಗೆ ಮರದ ನೆರಳು ಕೊಂಚ ತಗ್ಗಿಸುವಂತಿವೆ... ಭಾರತೀಯ ಸಂಸ್ಕೃತಿಯಲ್ಲಿ 'ಯುಗಾದಿ ಹಬ್ಬ'ಕ್ಕೆ ತನ್ನದೇ ಆದ ಒಂದು ಅತ್ಯುನ್ನತವಾದ ಸಾಂಸ್ಕೃತಿಕ ಮಹತ್ವವಿದೆ. ಆದುದರಿಂದ ಭಾರತೀಯರು ಅದರಲ್ಲೂ ದಕ್ಷಿಣ ಭಾರತದವರಲ್ಲಿ ಕರ್ನಾಟಕದ ಜನರು ತಮ್ಮ ಹೊಸ ವರುಷದ ದಿನವು 'ಯುಗಾದಿ'ಯ ದಿನದಿಂದಲೇ ಆರಂಭವಾಗುತ್ತದೆ ಎಂದು ನಂಬುತ್ತಾರೆ.

ಹೀಗೆ, ಯುಗಾದಿ ಹಬ್ಬವು ಜನರಲ್ಲಿ ಸಂಭ್ರಮ–ಸಡಗರ ನೀಡುವ ಜೊತೆಗೆ ಅವರ ಮನದಲ್ಲಿ ಹೊಸಭರವಸೆ, ಆಶಯ, ಗುರಿ, ಉದ್ದೇಶ, ಬಯಕೆ, ಕನಸನ್ನು ಚಿಗುರಿಸುತ್ತಾ ನವವರುಷಕ್ಕೆ ಆಶಾಕಿರಣವಾಗಿ ಬರುತ್ತಿದೆ. ಗ್ರಾಮೀಣರ ಆಡುಮಾತಿನಲ್ಲಿ ಹೇಳುವುದಾದರೆ, ಯುಗಾದಿಯು "ಉಗಾದಿ" ಎನಿಸಿಕೊಳ್ಳುತ್ತದೆ. ಉಗಾದಿ ಹಬ್ಬವು ಶಿಶಿರ ಋತು ಕಳೆದು ವಸಂತನಾಗಮನದ ಮೊದಲ ಹಬ್ಬ. ಇದು ಭಾರತೀಯರ ಪಾಲಿಗೆ 'ನವ ಮನ್ವಂತರ' ಅಲ್ಲದೆ, ಇದು ಭಾರತೀಯರಾದ ನಮ್ಮ ಪಾಲಿಗೆ 'ಹೊಸವರುಷ'.

ಯುಗಾದಿಯಂದು ಹರಳೆಣ್ಣೆಯನ್ನು ಮೈ– ಕೈಗೆ ಹಚ್ಚಿಕೊಂಡು, ಸ್ನಾನಮಾಡಿ, ಹೊಸಬಟ್ಟೆ ತೊಟ್ಟು ಸಂಭ್ರಮಿಸುವುದು ವಾಡಿಕೆ. ಅಲ್ಲದೆ ಅಂದು ಜೀವನದ ಸಮನ್ವಯ ಸೂತ್ರದ ಸಂಕೇತವಾದ 'ಬೇವು–ಬೆಲ್ಲ ತಿನ್ನುವುದು' ಒಂದು ಸತ್ಸಂಪ್ರದಾಯಕ್ಕೆ ಬರೆದ ಮುನ್ನುಡಿಯಾಗುತ್ತದೆ. ಬೇವು–ಬೆಲ್ಲ ತಿನ್ನುವುದರ ಮೂಲ ಉದ್ದೇಶವಿಷ್ಟೆ; ಕಷ್ಟ–ಸುಖ, ನೋವು ನಲಿವು ಪ್ರತಿಯೊಬ್ಬರ ಬಾಳಲ್ಲಿ ಸಮನಾಗಿರಲಿ ಎಂಬುದು. ಇಂಥ ಸದ್ಭಾವನೆಯನ್ನು ಯುಗಾದಿ ಎಲ್ಲರಿಗೂ ತಿಳಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ 'ಯುಗಾದಿ ಹಬ್ಬ'ಕ್ಕೆ ತನ್ನದೇ ಆದ ಒಂದು ಅತ್ಯುನ್ನತವಾದ ಸಾಂಸ್ಕೃತಿಕ ಮಹತ್ವವಿದೆ. ಆದುದರಿಂದ ಭಾರತೀಯರು ಅದರಲ್ಲೂ ದಕ್ಷಿಣ ಭಾರತದವರಲ್ಲಿ ಕರ್ನಾಟಕದ ಜನರು ತಮ್ಮ ಹೊಸವರುಷದ ದಿನವು 'ಯುಗಾದಿ'ಯ ದಿನದಿಂದಲೇ ಆರಂಭವಾಗುತ್ತದೆ ಎಂದು ನಂಬುತ್ತಾರೆ.



ಅದಕ್ಕಾಗಿಯೇ ಅಂದು ತಮ್ಮ ನೆಂಟರಿಷ್ಟರು, ಬಂಧು– ಬಾಂಧವರು, ಕುಟುಂಬವರ್ಗದವರೆಲ್ಲರೂ ಒಂದೆಡೆ ಸೇರಿ ಯುಗಾದಿಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಲು ತೊಡಗುತ್ತಾರೆ.

### ಒಲವು ವೃದ್ಧಿಯ ಯುಗಾದಿ:

ನಾವು ಸಂಬಂಧಗಳನ್ನೇ ಅನುಮಾನದಿಂದ ನೋಡುವಂತಹ ಪರಿಸ್ಥಿತಿಯ ದಿನಮಾನದಲ್ಲಿ ಯುಗಾದಿ ಹಬ್ಬವು, ಪರಸ್ಪರರಲ್ಲಿ ಒಲವು ವೃದ್ಧಿಸುವಂತಹ ಆಚರಣೆಯಾಗಿದೆ. ಕೆಲಸ–ಕಾರ್ಯದ ಕಾರಣದಿಂದಲೋ ಮತ್ಯಾವುದೋ ಕಾರಣದಿಂದಲೋ ಅಪರೂಪಕ್ಕೆ ಒಂದೆಡೆ ಸೇರುವ, ವೈಮನಸ್ಸಿನ ಕಾರಣದಿಂದಲೋ ದೂರಾಗಿರುವ ಸಂಬಂಧಿಕರನ್ನು ಮತ್ತೆ ಒಂದೆಡೆ ಸೇರಿಸುವಲ್ಲಿ ಇಂತಹ ಹಬ್ಬ–ಆಚರಣೆಗಳು ಸಹಕಾರಿಯಾಗುತ್ತವೆ.

ಅಲ್ಲದೆ, ಅಷ್ಟೇನೂ ಆಪ್ತರಾಗಿಲ್ಲದ, ಪರಸ್ಪರ ಗೌರವ, ಪ್ರೀತಿ, ವಿಶ್ವಾಸವಿರದವರ ನಡುವೆ ಆತ್ಮೀಯತೆ ಬೆಳೆಯಲು ಇವು ನಾಂದಿಯಾಡುತ್ತವೆ. ಕನ್ನಡದ ಶ್ರೇಷ್ಠ ಕವಿ ದ.ರಾ.ಬೇಂದ್ರೆ ಯವರ ಕವಿತೆ, 'ನಾನು ಬಡವ, ಆಕೆ ಬಡವಿ; ಒಲವೇ ನಮ್ಮ ಬದುಕು' ಎಂಬಂತೆ, ಯುಗಾದಿ ಹಬ್ಬವು ಎಲ್ಲರಲ್ಲೂ ಪ್ರೀತಿ, ವಿಶ್ವಾಸ, ಗೌರವ ಮನೋಭಾವನೆಯ ಒರತೆಯನ್ನು ಉಕ್ಕಿಸುತ್ತದೆ.

### ಸಹಬಾಳ್ವೆ–ಸಮನ್ವಯಕ್ಕೆ ನಾಂದಿ:

ಯುಗಾದಿ ಹಬ್ಬದಂದು ಬೇವು–ಬೆಲ್ಲ ತಿನ್ನುವ ಆಚರಣೆಯು ಒಂದು ವಿಶಿಷ್ಟ ಪರಿಕಲ್ಪನೆಯೇ ಸರಿ. ಸಿಹಿ–ಕಹಿ, ಸುಖ–ಕಷ್ಟ, ನಲಿವು–ನೋವು ಎಂಬ ಮಾತಿನಂತೆ, ಜೀವನದಲ್ಲಿ ಇವೆರಡರ ಸಮಾನ ಇರುವಿಕೆ ಅಗತ್ಯವಾಗಿದೆ. ಆಗ ಮಾತ್ರ ಜೀವನ ಸುಗಮವಾಗಿ ಸಾಗಲು ಸಾಧ್ಯ. ಆದರೆ, ಕಷ್ಟಕ್ಕಿಂತ ಸುಖವೇ ಬೇಕು ಎಂದು ಬಯಸುವವರು ಹೆಚ್ಚಿರುವ ಪರಿಸ್ಥಿತಿಯಲ್ಲಿ ಕಷ್ಟವನ್ನು, ಕಹಿಯನ್ನು, ನೋವನ್ನು ಬಯಸುವವರೇ ಇಲ್ಲವೆನ್ನುವಂತಾಗಿದೆ. ಆದರೆ, ಜೀವನ ಎನ್ನುವುದು ಕಷ್ಟ–ಸುಖಗಳ ಸಂಯೋಜನೆಯಾಗಿದೆ. ಹಾಗಾಗಿ, ಇವೆರಡು ಒಂದನ್ನೊಂದು ಬಿಟ್ಟಿರಲಾರವು.

ಇವು ಒಂಥರಾ ಕತ್ತಲು–ಬೆಳಕು, ರಾತ್ರಿ–ಹಗಲು ಹೇಗೆ ಒಂದನೊಂದು ಬಿಟ್ಟಿರಲಾರವೋ ಹಾಗೆಯೇ ಕಷ್ಟವಿಲ್ಲದೆ, ಸುಖವಿಲ್ಲ; ಸುಖವಿಲ್ಲದೆ ಕಷ್ಟವಿಲ್ಲ ಎಂಬುದು ಸತ್ಯವಾಗಿದೆ. ಈ ಆಶಯದಂತೆ ನಾವು ಯುಗಾದಿ ಹಬ್ಬದಲ್ಲಿ ಬೇವು– ಬೆಲ್ಲವನ್ನು ಹಂಚಿ ತಿನ್ನುತ್ತೇವೆ.

ಅದಕ್ಕೆಂತಲೇ ಯುಗಾದಿ ಅಂದರೆ, ಮತ್ತೊಂದು ಯುಗದ ಆದಿ; ಆರಂಭ; ಮನ್ವಂತರದ ಬದಲಾವಣೆಯ ಕಾಲ. ಈ ನವಮನ್ವಂತರವು ಸಕಲ ಜೀವಾತ್ಮರಿಗೂ ಲೇಸನ್ನು ತರಲಿ ಎಂಬುದು ಎಲ್ಲರ ಆಶಯವಾಗಲಿ ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

# RBI NEWS - MARCH 2019

K. Vittal Shetty, Banking consultant, Kohimavittal@Hotmail.com, Mobile : 9845699904

The next meeting of the MPC is scheduled from April 2 to 4, 2019.

| Policy Rates. Effective from February 07, 2019 | % |
|---|---|
| Policy Repo Rate | **6.25%** |
| Reverse Repo Rate | **6.00%** |
| **Marginal Standing Facility Rate** | 6.50% |
| BANK RATE | **6.50%** |
| RESERVE RATIOS | |
| Cash Reserve Ratio. (CRR) | 4.00% |
| Statutory Reserve Ratio. (SLR). Effective from January 05,2019 | 19.25% |

**Mar 27, 2019**

**Scheduled Banks' Statement of Position in India as on Friday, March 15, 2019**

| **(Amount in Billions of ₹)** | | | | | | | |
|---|---|---|---|---|---|---|---|
| | | **SCHEDULED COMMERCIAL BANKS** | **122306.53** | **122262.43** | **114078.28** | **125487.22** | **125458.29** |
| | | | ALL | 12907.22 | 12020.97 | 13311.29 | 13207.99 |
| SCHEDULED BANKS | | | 109290.5 | 109355.23 | 102057.31 | 112175.9 | 112250.33 |
| | | 16-Mar-18 | 01-MAR-2019 * | 15-MAR-2019 * | 16-Mar-18 | 01-MAR-2019 * | 15-MAR-2019 * |
| I | a) Deposits | 111116.28 | 122306.53 | 122262.43 | 114078.28 | 125487.22 | 125458.29 |
| | I) Demand | 11752.62 | 13015.99 | 12907.22 | 12020.97 | 13311.29 | 13207.99 |
| | ii) Time | 99363.65 | 109290.5 | 109355.23 | 102057.31 | 112175.9 | 112250.33 |
| II | INVESTMENTS | 33348.89 | 34091.41 | 33932.64 | 34286.76 | 35039.7 | 34873.89 |
| III | BANK CREDIT | 83467.47 | 95204.51 | 95537.18 | 86029.61 | 98012.39 | 98364.62 |

2). Mar 27, 2019:- RBI imposes monetary penalty on Punjab National Bank

Imposition of penalty on 36 banks for non-compliance with various directions issued by the Reserve Bank of India (RBI) on time-bound implementation and strengthening of SWIFT-related operational controls. In continuation thereto, RBI has imposed, by an order dated February 25, 2019, a monetary penalty of ₹ 20 million (Rupees Twenty Million) on Punjab National Bank (the bank) for non-compliance with aforesaid directions issued by RBI.

3). Mar 30, 2019:- Branches of Vijaya Bank and Dena Bank to operate as branches of Bank of Baroda from April 1, 2019

The Amalgamation of Vijaya Bank and Dena Bank with Bank of Baroda Scheme, 2019 dated January 2, 2019, issued by the Government of India was published under Extraordi-

Swabhimani Sahakari, Monthly, Publishing Date 5th, Posting Day 10th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 36

nary Part II-Section 3-Sub-section (i) in the Gazette of India. The scheme comes into force on the 1st day of April 2019.

Consequently, all branches of Vijaya Bank and Dena Bank will function as branches of Bank of Baroda from April 1, 2019. Customers, including depositors of Vijaya Bank and Dena Bank will be treated as customers of Bank of Baroda with effect from April 1, 2019.

### Directions, Withdrawals, Penalties & Cancellation of Licences of Urban Co-operative Banks & Banks.

**1). Mar 01, 2019-** RBI has imposed a monetary penalty of ₹ 5,00,000/- (Rupees Five Lakh only) on Urban Co-operative Bank Ltd., Badaun,

**2). Mar 01, 2019: -** RBI has imposed a monetary penalty of ₹ 5,00,000/- (Rupees Five Lakh only) on Rani Laxmi Bai Urban Co-operative Bank Ltd., Jhansi, Uttar Pradesh,

**3). Mar 01, 2019: -** RBI has imposed a monetary penalty of ₹ 5,00,000/- (Rupees Five Lakh only) on U.P. Postal Primary Co-operative Bank Ltd., Uttar Pradesh

**4). Mar 01, 2019: -** RBI has issued certain Directions to Bidar Mahila Urban Co-operative Bank Ltd., Bidar,

**5). Mar 06, 2019:-** RBI has imposed a monetary penalty of ₹ 50,000/- (Rupees Fifty Thousand Only) on Etawah Urban Co-operative Bank Ltd., Etawah (U.P.)

**6). Mar 06, 2019: -** RBI has imposed a monetary penalty of ₹ 50,000/- (Rupees Fifty Thousand Only) on Mahoba Urban Co-operative Bank Ltd., Mahoba, (U.P.)

**7). Mar 07, 2019: -** Reserve Bank of India has imposed a monetary penalty of ₹ 1,00,000/- (Rupees One Lakh Only) on Nagar Sahkari Bank Ltd., Etawah (Uttar Pradesh)

**8). Mar 08, 2019: -** Directions - Extension of period-The Karad Janata Sahakari Bank Ltd., Karad

**9). Mar 11, 2019: -** RBI has extended the Directions issued to the Indian Mercantile Co-operative Bank Ltd., Lucknow

**10). Mar 13, 2019: -** RBI has imposed a monetary penalty of ₹ 1,00,000/- (Rupees one lakh Only) on Lucknow University Primary Co-operative Bank Ltd., Lucknow

**11). Mar 13, 2019: -** RBI has imposed a monetary penalty of ₹ 3,00,000/-(Rupees three lakh Only) on The Urban Co-operative Bank Ltd., Maunath Bhanjan (U.P.)

**12). Mar 13, 2019: -** RBI has imposed a monetary penalty of ₹ 50,000/- (Rupees Fifty Thousand Only) on National Mercantile Co-operative Bank Ltd., Lucknow,

**13). Mar 13, 2019: -** Reserve Bank of India has imposed a monetary penalty of ₹ 1,50,000/- (Rupees one lakh fifty thousand Only) on Banaras Mercantile Co-operative Bank Ltd., Varanasi,

**14). Mar 14, 2019: -** RBI had issued directions to Vasantdada Nagari Sahakari Bank Ltd, Osmanabad, Maharashtra

**15). Mar 20, 2019: -** RBI has imposed a monetary penalty of ₹ 10.00 lakh (Rupees ten lakh only) on The Mahila Vikas Co-operative Bank Ltd. Ahmedabad (Gujarat)

**16). Mar 22, 2019: -** RBI has imposed a monetary penalty of ₹ 200,000/- (Rupees Two lakh only) on The Tadpatri Co-operative Town Bank Ltd., Tadpatri, Andhra Pradesh,

**17). Mar 25, 2019: -** RBI has extended the Directions issued to the U.P. Civil Secretariat Primary Co-operative Bank Ltd., Lucknow

**18). Mar 27, 2019: -** Directions – Hindu Cooperative Bank Limited, Pathankot, Punjab.

**19). Mar 28, 2019: -** Directions – The Maratha Sahakari Bank Ltd, Mumbai, Maharashtra.

**20). Mar 29, 2019: -** Withdrawal of All-Inclusive Directions –RBI has withdrawn the All-Inclusive Directions issued to Shri Ganesh Sahakari Bank Ltd., Nashik,

**Source: www.rbi.org.in**

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 11ನೇ ಮೇನ್, 1ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010